ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 17 ಗುರುವಾರ 2024

₹4

ಸಂಪುಟ: 45 | ಸಂಚಿಕೆ: 181 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ ಗುರುವಾರ 17 ಅಕ್ಟೋಬರ್ 2024

ಅ.19ಕ್ಕೆ ಮೈಸೂರಿನ ಬಿವಿಬಿಯಲ್ಲಿ ವಿದುಷಿ ಗೌರಿ ಸಾಗರ್ ಭರತನಾಟ್ಯ



ಮೈಸೂರು, ಅ. 16–ತಿಂಗಳ ಸಂಗೀತ ಕಾರ್ಯಕ್ರಮದ ಅಂಗವಾಗಿ ಭಾರತೀಯ ವಿದ್ಯಾಭವನ ಮೈಸೂರು ಕೇಂದ್ರದ ವತಿಯಿಂದ ವಿಜಯನಗರ ಮೊದಲನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನ ಸಭಾಂಗಣದಲ್ಲಿ ವಿದುಷಿ ಗೌರಿಸಾಗರ್ ಅವರಿಂದ ಅ.19ರಂದು ಸಂಜೆ 6 ಗಂಟೆಗೆ ಭರತನಾಟ್ಯ ಪ್ರದರ್ಶನ ಏರ್ಪಡಿಸಲಾಗಿದೆ.

ಗೌರಿ ಸಾಗರ್ ಅವರು ಖ್ಯಾತ ಭರತನಾಟ್ಯ ಕಲಾವಿದೆಯಾಗಿದ್ದು, ತಾವು 5 ವರ್ಷದವರಿದ್ದಾಗಲೇ ತಾಯಿ ವಿದುಷಿ ಶ್ಯಾಮಲಾ ಅಶ್ವಥ್ ಅವರಲ್ಲಿ ಭರತನಾಟ್ಯ ತರಬೇತಿ ಆರಂಭಿಸಿದರು. ನಂತರ ದಿವಂಗತ ಗುರು ಬಿ.ಆರ್.ತುಳಸೀ ರಾವ್ ಅವರಲ್ಲಿ ತರಬೇತಿ ಪಡೆದುಕೊಂಡಿದ್ದಾರೆ. ಗೌರಿ ಅವರು ಗುರು ಶ್ರೀ ಸತ್ಯನಾರಾಯಣ ರಾಜು ಅವರ ಶಿಷ್ಯರಾಗಿದ್ದು, ಅವರ ಮಾರ್ಗದರ್ಶನದಲ್ಲಿ ಪರಿಣತಿಯನ್ನು ಪಡೆದುಕೊಂಡಿದ್ದಾರೆ.

ಗೌರಿ ಅವರು ಭರತನಾಟ್ಯದಲ್ಲಿ ಜೈನ್ ವಿಶ್ವವಿದ್ಯಾನಿಲಯದಿಂದ ಚಿನ್ನದ ಪದಕ ಪಡೆದಿದ್ದಾರೆ. ಅಲ್ಲದೆ ಅವರು ದೂರದರ್ಶನದ 'ಎ' ದರ್ಜೆ ಕಲಾವಿದರಾಗಿದ್ದಾರೆ. ಕಂಪ್ಯೂಟರ್ ವಿಜ್ಞಾನದ ಇಂಜಿನಿಯರ್ ಆದ ಇವರು ನೃತ್ಯದ ಮೇಲಿನ ಆಸಕ್ತಿ, ಉತ್ಸಾಹದಿಂದಾಗಿ ನೃತ್ಯವನ್ನು ವೃತ್ತಿಯನ್ನಾಗಿ ಮಾಡಿಕೊಂಡರು.

ಗೌರಿ ಅವರು ಕಾರ್ಯಾಗಾರದ ಮೂಲಕ ದಿಗ್ಗಜರಾದ ಪದ್ಮಶ್ರೀ ಪ್ರತಿಭಾ ಪ್ರಹ್ಲಾದ್, ಪದ್ಮಶ್ರೀ ವೈಜಯಂತಿಮಾಲಾ ಬಾಲಿ, ಪದ್ಮ ವಿಭೂಷಣ್ ಯಾಮಿನಿ ಕೃಷ್ಣಮೂರ್ತಿ, ವಿದುಷಿ ಬ್ರಘ ಬೆಸ್ಸೆಲ್, ಪದ್ಮಶ್ರೀ ಚಿತ್ರಾ ವಿಶ್ವೇಶ್ವರನ್ ಅವರಲ್ಲಿ ಉನ್ನತ ಭರತನಾಟ್ಯ ತರಬೇತಿ ಪಡೆದುಕೊಂಡಿದ್ದಾರೆ. ಇವರು ನಿನಾದ ನೃತ್ಯೋತ್ಸವ, ರಾಷ್ಟ್ರ ಮಟ್ಟದ ನೃತ್ಯ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ. ಅವರು 2014ರಲ್ಲಿ ಆರ್ಯಭಟ ಪ್ರಶಸ್ತಿ, 2019 ರಲ್ಲಿ ಕಲ್ಯಾಣ ಟ್ರಸ್ಟ್‌ನಿಂದ ನಾಟ್ಯಕಲಾ ಪ್ರವೀಣೆ, 2020 ರಲ್ಲಿ ಮುಂಬೈ ನಳಂದ ವಿಶ್ವವಿದ್ಯಾನಿಲಯದಿಂದ ನಳಂದ ನೃತ್ಯ ನಿಪುಣ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

ಜಂಬೂಸವಾರಿ ಮೆರವಣಿಗೆಯಲ್ಲಿ ಉತ್ತಮ ಪ್ರದರ್ಶನ ನೀಡಿದ ಕಲಾತಂಡಗಳಿಗೆ ಬಹುಮಾನ ಘೋಷಣೆ

ಮೈಸೂರು,ಅ.16–ಈ ಸಾಲಿನ ದಸರಾ ಮಹೋತ್ಸವದ ಅಂಗವಾಗಿ ಅ.12 ರಂದು ನಡೆದ ವಿಶ್ವವಿಖ್ಯಾತ ಜಂಬೂಸವಾರಿ ಮೆರವಣಿಗೆಯಲ್ಲಿ ಭಾಗವಹಿಸಿದ ತಂಡಗಳ ಪೈಕಿ ಕೆಳಕಂಡ ಕಲಾತಂಡಗಳು ಉತ್ತಮ ಪ್ರದರ್ಶನ ನೀಡಿರುವುದಾಗಿ ತೀರ್ಪುಗಾರರು ಆಯ್ಕೆ ಮಾಡಿರುತ್ತಾರೆ.

ಪ್ರಥಮ ಬಹುಮಾನವನ್ನು ಸತ್ತಿಗೆ ಕುಣಿತ ಕಲಾ ಪ್ರಾಕಾರದಲ್ಲಿ ವಿಜಯಪುರ ಜಿಲ್ಲೆಯ ತಿಕೋಟಾ ತಾಲೂಕಿನ ಸಿದ್ದಾಪುರದ ಸಂಜೀವಿನಿ ಶಿ. ಕೋತ, ಶ್ರೀ ರೇವಣ ಸಿದ್ದೇಶ್ವರ ಯುವಕ ಕಲಾಸಂಘ (ಕಾರಿಕೊಳ್ಳ), ದ್ವಿತೀಯ ಬಹುಮಾನವನ್ನು ಲಂಬಾಣಿ ಕಲಾ ಪ್ರಾಕಾರದಲ್ಲಿ ಯಾದಗಿರಿ ಜಿಲ್ಲೆಯ ವಿಶ್ವಾಸಪುರ ತಾಂಡಾದ ಲಂಬಾಣಿ ನೃತ್ಯ ಕಲಾ ತಂಡದ ಮನೋಹರ ಖೇಮು ಪವಾರ, ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಕ್ಯಾತ ಘಟ್ಟದ ಪೂಜಾಕುಣಿತ ಕಲಾವಿದರಾದ ಕೀರ್ತಿನೆ ಮತ್ತು ಪ್ರಮೋದಿನಿ ಮತ್ತು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಚಿಕ್ಕರಸಿನಕೆರೆಯ ಶ್ರೀ ಕಾಲ ಭೈರವೇಶ್ವರ ಯುವಕರ ಸಂಘದ ಚಿಕ್ಕ ಬೋರಯ್ಯ ಹಾಗೂ ತೃತೀಯ ಬಹುಮಾನವನ್ನು ಪುರವಂತಿಕೆ ಕಲಾ ಪ್ರಾಕಾರದಲ್ಲಿ ಹಾವೇರಿ ಜಿಲ್ಲೆಯ ಬಂಕಾಪುರದ ಶ್ರೀ ವೀರಭದ್ರೇಶ್ವರ ಪುರವಂತಿಕೆ ಕಲಾತಂಡದ ಓಂಪ್ರಕಾಶ್ ಅಂಗಡಿ, ಗಾರುಡಿ ಗೊಂಬೆ ಕಲಾ ಪ್ರಾಕಾರದಲ್ಲಿ ಕೋಲಾರ ಜಿಲ್ಲೆಯ ಸುಳದೇನಹಳ್ಳಿಯ ಮಾರುತಿ ಕಲಾವಿದರ ಸಂಘದ ಮುನಿರಾಜಪ್ಪ ಪಡೆದಿದ್ದು, ಎಲ್ಲಾ ತಂಡಗಳಿಗೂ ದಸರಾ ಉಪಸಮಿತಿ ವತಿಯಿಂದ ಸೂಕ್ತ ಬಹುಮಾನ ನೀಡಿ, ಪ್ರೋತ್ಸಾಹಿಸಲಾಗುತ್ತಿದೆ ಎಂದು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಧ್ವನ್ಯಾಲೋಕದಲ್ಲಿ ಲೋಟಸ್, ಲಿಲ್ಲಿಸ್ ಪ್ರದರ್ಶನ

ಮೈಸೂರು, ಅ.16(ಜಿಎ)– ಮೈಸೂರಿನ ಬೋಗಾದಿಯಲ್ಲಿರುವ ಧ್ವನ್ಯಾಲೋಕದಲ್ಲಿ ಲೋಟಸ್, ಲಿಲ್ಲಿಸ್ ಪ್ರದರ್ಶನ ಮಹೋತ್ಸವವನ್ನು ಸಂಧ್ಯಾ ಮಂಜುನಾಥ್ ಅವರು ಅ.18ರಿಂದ 20ರವರೆಗೆ ಆಯೋಜಿಸಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವಿಶ್ರಾಂತ ಪ್ರಾಧ್ಯಾಪಕಿ ಶಶಿಕಲಾ ಈ ವಿಷಯ ತಿಳಿಸಿ, ನಗರದಲ್ಲಿ ಈ ರೀತಿಯ ಪ್ರಥಮ ಪ್ರದರ್ಶನವಾಗಿದೆ ಎಂದರು. ಈ ಸಸ್ಯಗಳ ಬೆಳವಣಿಗೆಯ ವಿವಿಧ ಹಂತಗಳನ್ನು ಇಲ್ಲಿ ವೀಕ್ಷಿಸಬಹುದಾಗಿದೆ. ಈ ಹೂಗಳ ಆಧ್ಯಾತ್ಮಿಕ ಮಹತ್ವ, ಔಷಧೀಯ ಮೌಲ್ಯ, ಕೃಷಿ ತಂತ್ರ, ಪಾಕಶಾಲೆ ಬಳಕೆ ಬಗ್ಗೆಯೂ ವಿವರಣೆ ಇರಲಿದೆ. ಈ ಸಂದರ್ಭದಲ್ಲಿ ಈ ಹೂಗಳಿಗೆ ಸಂಬಂಧಿಸಿದಂತೆ ಪರಿಣತಿ ಹಾಗೂ ತಜ್ಞತೆ ಹೊಂದಿರುವವರು ಉಪಯುಕ್ತ ಮಾಹಿತಿ ನೀಡಿ, ಅವನ್ನು ಬೆಳೆಸುವ ವಿಧಾನ ತಿಳಿಸಿಕೊಡಲಿದ್ದಾರೆಂದರು. ಆಸಕ್ತರು ಆಗಮಿಸಿ ಈ ಹೂಗಳ ಕುರಿತ ಮಹತ್ವದ ಮಾಹಿತಿ ಪಡೆಯಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಸಂಧ್ಯಾ ಮಂಜುನಾಥ್, ಸುಮನ್ ಅರಸ್ ಉಪಸ್ಥಿತರಿದ್ದರು.

ನಿಧನ


ಕೆ.ಜೆ.ಮರಿನಾಯಕ



ಮೈಸೂರು, ಅ.16– ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿಯ ಎಂ.ರಾಮಕೃಷ್ಣ ಅವರ ತಂದೆ ಹಾರ್ಮೋನಿಯಂ ಮಾಸ್ಟರ್ ಕೆ.ಜೆ.ಮರಿನಾಯಕ (80) ಪಡುವಾರಹಳ್ಳಿಯ ಮೂರನೇ ಮುಖ್ಯ ರಸ್ತೆಯಲ್ಲಿರುವ ಸ್ವಗೃಹದಲ್ಲಿ ನಿಧನರಾದರು. ಅಂತ್ಯಕ್ರಿಯೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೃತರ ನಿಧನಕ್ಕೆ ಹೆಚ್.ಡಿ.ಕೋಟೆ ಜಾ.ದಳ ಮುಖಂಡ ಎಸ್.ಜಯಪ್ರಕಾಶ್ ಚಿಕ್ಕಣ್ಣ, ಬಿಜೆಪಿ ಮುಖಂಡ ಎಲ್.ಚೌಡಪ್ಪ, ಮಾಜಿ ಮೇಯರ್ ಶಿವಕುಮಾರ್, ನಗರಪಾಲಿಕೆ ಮಾಜಿ ಸದಸ್ಯರಾದ ಸಿ.ಶ್ರೀರಾಮ್, ಪಿ.ಎಸ್.ಭರತೇಶ್, ಪ್ರೇಮಾ ಶಂಕರೇಗೌಡ, ಶಿವಮಾದು, ಎಂ.ಚಿಕ್ಕವೆಂಕಟು, ಆರ್.ರಂಗಸ್ವಾಮಿ, ನಂದಕುಮಾರ್, ಲೋಕೇಶ್ ಪಿಯಾ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷೆ ಪಿ.ರಾಜೇಶ್ವರಿ, ಉಪಾಧ್ಯಕ್ಷೆ ಪಿ.ಸವಿತಾ, ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ಎಸ್‌ಬಿಎಂ ಮಂಜು, ಸಿ.ರೇವಣ್ಣ, ನಿರ್ದೇಶಕರಾದ ಜೆ.ಯೋಗೇಶ್, ಹೆಚ್.ಹರೀಶ್‌ಕುಮಾರ್, ರಾಜಕೀಯ ರವಿಕುಮಾರ್, ಎಸ್.ಆರಗ ರವಿಕುಮಾರ್, ಎಸ್.ಅರವಿಂದ, ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಂ.ಎನ್.ಸ್ವರೂಪ್, ಆಡಿಟರ್ ಚಂದ್ರಶೇಖರ್, ಜಿಲ್ಲಾ ಒಕ್ಕಲಿಗರ ಸಂಘ ಅಧ್ಯಕ್ಷ ಸಿ.ಮರಿಸ್ವಾಮಿ, ನಿರ್ದೇಶಕ ಲೋಕೇಶ್, ಚೇತನ್, ಎ.ರವಿ, ಕಾಳಪ್ಪ, ಹೇಮಾ ಸಂತೋಷ್ ಮತ್ತಿತರರು ಅಂತಿಮ ದರ್ಶನ ಪಡೆದು, ಸಂತಾಪ ಸೂಚಿಸಿದರು.


ಶ್ರೀಮತಿ ವಿಜಯಲಕ್ಷ್ಮಿ



ಮೈಸೂರಿನ ಡಿ.ಟಿ.ಎಸ್‌ರಾವ್ ನಗರದ ನಿವಾಸಿ ಮತ್ತು ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯೆ ಶ್ರೀಮತಿ ವಿಜಯಲಕ್ಷ್ಮಿ (67) ಅವರು ಮಂಗಳವಾರ ಮಧ್ಯಾಹ್ನ ನಿಧನರಾದರು.

ಮೃತರು ಮಕ್ಕಳಾದ ಅಬಕಾರಿ ಇಲಾಖೆಯ ಪ್ರಥಮ ದರ್ಜೆ ನೌಕರ ಎಂ.ಆರ್. ಪ್ರದೀಪ್, ಎಂ.ಆರ್.ಪ್ರಭಾವತಿ, ಎಂ.ಆರ್. ಸುರೇಖಾ, ಸಾಕು ಮಗ ಎಂ.ಕೆ.ಪ್ರವೀಣ್ ಮತ್ತು ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 12 ಗಂಟೆಗೆ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪೈಲ್ವಾನ್ ಮಝರ್ ಖಾನ್



ಮೈಸೂರಿನ ಲಷ್ಕರ್ ಮೊಹಲ್ಲಾದ ಮೊಹಮ್ಮದ್ ಸೇಠ್ ಬ್ಲಾಕ್, ನೆಕ್ಸಸ್ ಮಾಲ್ ಸಮೀಪದ ನಿವಾಸಿ ಪೈಲ್ವಾನ್ ಮಝರ್ ಖಾನ್ ಎಂದೇ ಪ್ರಸಿದ್ಧರಾದ ಹಜ಼ರತ್ ಕ್ವಾಜಾ ಶಾಬಾಜ಼್ ಷಾ ಚಿಸ್ತಿ ನಿಜ಼ಾಮಿ ಬಂದಾ ನವಾಜ಼ಿ ಸಾಹೆಬ್ (54) ಅ. 14 ಸೋಮವಾರ ಸಂಜೆ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರಿ, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅ.15 (ಮಂಗಳವಾರ) ಮೈಸೂರಿನ ಟಿಪ್ಪು ಸರ್ಕಲ್ ಹಿಂಭಾಗ ಇರುವ ಮುಸ್ಲಿಮರ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ : ಶಾಸಕ ತನ್ವೀರ್ ಸೇಠ್, ಸೈಯ್ಯದ್ ಯೂನುಸ್, ಕ್ವಾಜಾ ಮೊಹಮ್ಮದ್ ಮುಷೀರ್ ಚಿಸ್ತಿ, ಪೈಲ್ವಾನ್ ಷಾ ಮುಮ್ತಾಜ಼್ ಖಾದ್ರಿ, ಸಿಲ್‌ಸಿಲಾಹ ಬಂದಾ ನವಾಜ಼ಿ ಮುರೀದಿನ್ (ಭಕ್ತಾದಿಗಳು), ಮುಷಾಯಿಕಿನ್, ಫುಕ್ರಾಗಳು, ದರ್ವೇಶ್, ಜಮಾತ್, ಸೂಫಿಜ಼ಾಮ್, ಸ್ಥಳೀಯ ನಿವಾಸಿಗಳು ತೀವ್ರ ಸಂತಾಪ ಸೂಚಿಸಿದ್ದಾರೆ.

ಒಳಮೀಸಲಾತಿಗೆ ಆಗ್ರಹಿಸಿ ಮೈಸೂರಲ್ಲಿ ಪ್ರತಿಭಟನೆ



ಮೈಸೂರಿನ ಪುರಭವನದ ಆವರಣದಲ್ಲಿ ಬುಧವಾರ ಒಳ ಮೀಸಲಾತಿ ಜಾರಿಗೊಳಿಸುವಂತೆ ಆಗ್ರಹಿಸಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಅ.16(ಎಂಟಿವೈ)– ರಾಜ್ಯ ಸರ್ಕಾರ ಕೂಡಲೇ ಒಳ ಮೀಸಲಾತಿ ಜಾರಿಗೊಳಿಸಿ, ಅನ್ಯಾಯಕ್ಕೆ ಒಳಗಾಗಿರುವ ಸಮುದಾಯಗಳಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಮೈಸೂರಿನ ಪುರಭವನ ಆವರಣದಲ್ಲಿ ಬುಧವಾರ ಪ್ರತಿಭಟನೆ ನಡೆಸಿದ ಹೋರಾಟ ಸಮಿತಿ ಕಾರ್ಯಕರ್ತರು, ವಿಧಾನಸಭೆ ಚುನಾವಣೆಗೂ ಮುನ್ನ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಒಳ ಮೀಸಲಾತಿ ಜಾರಿಗೊಳಿಸುವ ಭರವಸೆ ನೀಡಿತ್ತು. ಆದರೆ, ಅಧಿಕಾರಕ್ಕೆ ಬಂದು ಒಂದೂವರೆ ವರ್ಷವಾದರೂ ಒಳ ಮೀಸಲಾತಿ ಜಾರಿಗೊಳಿಸುವ ಪ್ರಸ್ತಾಪ ಮಾಡುತ್ತಿಲ್ಲ. ಕಳೆದ ಆ.1ರಂದು ಸುಪ್ರೀಂಕೋರ್ಟ್ ನೀಡಿದ ತೀರ್ಪಿನಂತೆ ಒಳ ಮೀಸಲಾತಿ ಜಾರಿಗೊಳಿಸಬೇಕು. ಒಳ ಮೀಸಲಾತಿ ಜಾರಿಯಾಗುವವರೆಗೆ ಬ್ಯಾಕ್‌ಲಾಗ್ ಸೇರಿದಂತೆ ಯಾವುದೇ ಹುದ್ದೆ, ನೇಮಕಾತಿ ಮತ್ತು ಪದೋನ್ನತಿ ನೀಡಬಾರದು ಎಂದು ಒತ್ತಾಯಿಸಿದರು.

ಜನಗಣತಿ ವರದಿ ವಿಚಾರವನ್ನು ಮುನ್ನೆಲೆಗೆ ತಂದು ಎಸ್‌ಸಿ ಒಳ ಮೀಸಲಾತಿ ಜಾರಿಗೊಳಿಸುವಲ್ಲಿ ನಿರ್ಲಕ್ಷ್ಯ ಧೋರಣೆ ಸರಿಯಲ್ಲ. ಸುಪ್ರೀಂ ಕೋರ್ಟ್ ತೀರ್ಪು ಉಲ್ಲಂಘನೆಯ ಹುನ್ನಾರ ಮುಂದುವರೆಸಿದರೆ ಮುಂದೆ ಉಗ್ರ ಹೋರಾಟವನ್ನು ಸರ್ಕಾರ ಎದುರಿಸಬೇಕಾಗುತ್ತದೆ. ಈಗಾಗಲೇ ಸಂವಿಧಾನ ಪರಿಚ್ಛೇದ 15(4)ನೇಯು ಹಾಗೂ 16(4)ನೇ ವಿಧಿಗಳ ಅಡಿ ಅಧಿಕಾರ ಬಳಸಿ ರಾಜ್ಯ ಸರ್ಕಾರಗಳು ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದಿರುವಿಕೆಯನ್ನು ಗುರುತಿಸಿಕೊಂಡು ಮೀಸಲಾತಿಯಂತ ವಿಶೇಷ ಅವಕಾಶ ಕಲ್ಪಿಸಲು ರಾಜ್ಯ ಸರ್ಕಾರವು ಮುಕ್ತವಾಗಿದೆ ಎಂದು ಸುಪ್ರೀಂ ಕೋರ್ಟ್ ನ್ಯಾಯಾಧೀಶರು ತೀರ್ಪಿನಲ್ಲಿ ಹೇಳಿದ್ದಾರೆ. ಆದ್ದರಿಂದ ಕೂಡಲೇ ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆ ನಂತರ ಪುರಭವನದಿಂದ ಜಿಲ್ಲಾಧಿಕಾರಿಗಳ ಕಚೇರಿಗೆ ಮೆರವಣಿಗೆ ಮೂಲಕ ತೆರಳಿದ ಹೋರಾಟಗಾರರು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಹಿರಿಯ ವಕೀಲ ಎನ್.ಅರುಣ್‌ಕುಮಾರ್, ಮಾಜಿ ಉಪ ಮೇಯರ್ ಕೃಷ್ಣ, ಮರಡೀಪುರ ರವಿಕುಮಾರ್, ರಾಜಣ್ಣ, ಅರಕಲವಾಡಿ ನಾಗೇಂದ್ರ, ಸ್ವಾಮಿ ತಿಲಕನಗರ ಹಾಗೂ ಇನ್ನಿತರ ಮುಖಂಡರು ಪಾಲ್ಗೊಂಡಿದ್ದರು.

ಮುಂಬೈನ ಬಹುಮಹಡಿ ಕಟ್ಟಡದಲ್ಲಿ ಅಗ್ನಿ ಅವಘಡ, ಮೂವರ ಸಾವು



ಮುಂಬೈ: ಮುಂಬೈನ ಲೋಖಂಡವಾಲಾ ಕಾಂಪ್ಲೆಕ್ಸ್‌ನಲ್ಲಿರುವ 14 ಅಂತಸ್ತಿನ ವಸತಿ ಕಟ್ಟಡವೊಂದರಲ್ಲಿ ಬುಧವಾರ ಬೆಳಿಗ್ಗೆ ಸಂಭವಿಸಿದ ಅಗ್ನಿ ಅವಘಡದಲ್ಲಿ ಮೂವರು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಂಧೇರಿ ಪ್ರದೇಶದ ಲೋಖಂಡವಾಲಾ ಕಾಂಪ್ಲೆಕ್ಸ್‌ನ 4ನೇ ಅಡ್ಡ ರಸ್ತೆಯಲ್ಲಿರುವ ರಿಯಾ ಪ್ಯಾಲೇಸ್ ಕಟ್ಟಡದ 10ನೇ ಮಹಡಿಯಲ್ಲಿ ಬೆಳಿಗ್ಗೆ 8 ಗಂಟೆ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದೆ ಎಂದು ನಾಗರಿಕ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬೆಂಕಿಯಿಂದ ಗಾಯಗೊಂಡಿದ್ದ ಮೂವರನ್ನು ಕೂಪರ್ ಆಸ್ಪತ್ರೆಗೆ ಕೊಂಡೊಯ್ಯಲಾಗಿದ್ದು, ಅಲ್ಲಿ ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿರುವುದಾಗಿ ನಾಗರಿಕ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೃತರನ್ನು ಚಂದ್ರಪ್ರಕಾಶ್ ಸೋನಿ (74), ಕಾಂತಾ ಸೋನಿ (74) ಮತ್ತು ಪೆಲುಬೇಟ (42) ಎಂದು ಗುರುತಿಸಲಾಗಿದೆ ಎಂದು ನಾಗರಿಕ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಕಿ ದುರಂತಕ್ಕೆ ಕಾರಣ ಇನ್ನೂ ತಿಳಿದುಬಂದಿಲ್ಲ. ಪ್ರಾಥಮಿಕ ತನಿಖೆಯ ಪ್ರಕಾರ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಅವಘಡ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ. ಹೆಚ್ಚಿನ ಮಾಹಿತಿ ಕಲೆ ಹಾಕಲಾಗುತ್ತಿದೆ. ಸದ್ಯ ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ.

ಆತ್ಮಸಾಕ್ಷಿ ಜನ ಸೇವಾ ಟ್ರಸ್ಟ್ ಉದ್ಘಾಟನೆ



ಮೈಸೂರಲ್ಲಿ ಆತ್ಮಸಾಕ್ಷಿ ಜನ ಸೇವಾ ಟ್ರಸ್ಟ್‌ನ ಉದ್ಘಾಟನಾ ಸಂದರ್ಭ.

ಮೈಸೂರು,ಅ.16–ಮೈಸೂರಿನ ಗುಂಡೂರಾವ್‌ನಗರದ ಶ್ರೀ ಕಾಳಿಕಾಂಬ ದೇವಸ್ಥಾನ ಪಕ್ಕದಲ್ಲಿರುವ ಎಸ್.ನಾಗರಾಜು (ಟಿಂಬರ್) ಸಾರಥ್ಯದಲ್ಲಿ ಆತ್ಮಸಾಕ್ಷಿ ಜನ ಸೇವಾ ಟ್ರಸ್ಟ್ ಹಾಗೂ ಶುದ್ಧ ಕುಡಿಯುವ ನೀರಿನ ಘಟಕ, ಉಚಿತ ಸ್ಮಾರ್ಟ್ ಕಾರ್ಡ್ ಹಾಗೂ ಉಚಿತ ನೀರಿನ ಕ್ಯಾನ್ ವಿತರಣೆಯ ಸಮಾರಂಭವನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಮತ್ತು ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಉದ್ಘಾಟಿಸಿದರು. ಈ ವೇಳೆ ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್, ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜದ ರಾಜ್ಯಾಧ್ಯಕ್ಷ ಮಳವಳ್ಳಿ ಶ್ರೀನಿವಾಸ, ಮೈಸೂರು ಜಿಲ್ಲಾ ಮಹಾ ಒಕ್ಕೂಟದ ಅಧ್ಯಕ್ಷ ಹುಚ್ಚಪ್ಪಚಾರ್, ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ವಿಶ್ವಕರ್ಮ ವಿದ್ಯಾವರ್ಧಕ ಹಾಸ್ಟೆಲ್ ಅಧ್ಯಕ್ಷ ಎ.ಎನ್.ಸ್ವಾಮಿ, ಬಿಲ್ಡರ್ ವೆಂಕಟೇಶ, ಕೆ.ಆರ್.ನಗರ ರೇವಣ್ಣ, ಮೈಸೂರು ಜಿಲ್ಲಾ ವಿಶ್ವಕರ್ಮ ಸಮಾಜದ ಮುಖಂಡರು ಹಾಗೂ ವಾರ್ಡಿನ ನಿವಾಸಿಗಳು ಭಾಗವಹಿಸಿದ್ದರು.

ಮೈಸೂರಲ್ಲಿ ಸಹಕಾರಿ ಮತಯಾತ್ರೆ ವಾಹನಕ್ಕೆ ಚಾಲನೆ



ಮೈಸೂರಲ್ಲಿ ಬುಧವಾರ ಸಹಕಾರಿ ಮತಯಾತ್ರೆ ವಾಹನಕ್ಕೆ ಹಿರಿಯ ಸಹಕಾರಿಗಳು ಚಾಲನೆ ನೀಡಿದರು.

ಮೈಸೂರು, ಅ. 16– ಮೈಸೂರಿನ ಕೃಷ್ಣರಾಜೇಂದ್ರ ಕೋ–ಆಪರೇಟಿವ್ ಬ್ಯಾಂಕ್ ಚುನಾವಣೆಯು ಅ.20 ರಂದು ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಸಹಕಾರಿ ಮತಯಾತ್ರೆ ವಾಹನಕ್ಕೆ ಹಿರಿಯ ಸಹಕಾರಿಗಳು ಚಾಲನೆ ನೀಡಿದರು.

ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕ ನಂ.ಸಿದ್ದಪ್ಪ ಹಾಗೂ ಹಾಲಿ ಅಧ್ಯಕ್ಷ ಪ್ರತಿಧ್ವನಿ ಪ್ರಸಾದ್ ಅವರ ಬಣದಿಂದ 12 ಜನರ ತಂಡ ಚುನಾವಣೆಗೆ ಸ್ಪರ್ಧೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಗ್ರಾಜುಯೇಟ್ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಟಿ.ಎಸ್.ರವಿಶಂಕರ್, ಮಾಜಿ ಮೇಯರ್ ಚಿಕ್ಕಣ್ಣ, ಸುಜಾತರಾವ್, ನಗರಪಾಲಿಕೆ ಮಾಜಿ ಸದಸ್ಯರಾದ ಬಿ.ವಿ ಮಂಜುನಾಥ್, ಸುನೀಲ್, ಅಜಯ್ ಶಾಸ್ತ್ರಿ, ಜೀವಧಾರ ಗಿರೀಶ್, ಎಸ್.ಎಂ.ಸುರೇಶ್, ಗುರೂರು ಶ್ರೀಕಂಠಮೂರ್ತಿ, ಕಟ್ಟಹಳ್ಳಿ ಕೆ.ಎಸ್.ಪ್ರಕಾಶ್, ಕಲ್ಮಳ್ಳಿ ನಟರಾಜು, ಶಿವಣ್ಣ, ಜಗದೀಶ್ ಲಿಂಗಣ್ಣ, ದಾರಿಪುರ ಡಿ.ಚಂದ್ರಶೇಖರ್, ಕೇರ್ಗಳ್ಳಿ ಬಸವರಾಜು, ನಿರ್ದೇಶಕರಾದ ಹೆಚ್.ವಿ.ಭಾಸ್ಕರ್, ಬಸವರಾಜು ಬಸಪ್ಪ, ಹೆಚ್.ಎನ್.ಸರ್ವಮಂಗಳ, ನಾಗಜ್ಯೋತಿ ಪ್ರಸಾದ್, ಅರುಣ್ ಸಿದ್ದಪ್ಪ, ಪಾರ್ಥಸಾರಥಿ, ಜಿ.ಎಂ. ಪಂಚಾಕ್ಷರಿ, ತಾಯೂರು ಗಣೇಶಮೂರ್ತಿ, ನವೀನ್‌ಕುಮಾರ್ ಹಾಜರಿದ್ದರು.


ಇಂದು ವಾಲ್ಮೀಕಿ ಪ್ರತಿಮೆ ಸ್ಥಾಪನೆಗೆ ಗುದ್ದಲಿ ಪೂಜೆ

ವಾಲ್ಮೀಕಿ ಜಯಂತಿ ಬಹಿಷ್ಕಾರ ಮಾಡುವುದು ಬೇಡ

ಮೈಸೂರು,ಅ.16(ಜಿಎ)–ಈ ಬಾರಿಯ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ನಡೆಯುವ ಅ.17ರಂದು ನಗರದ ಡಿಸಿ ಕಚೇರಿ ಮುಂಭಾಗ ವಾಲ್ಮೀಕಿ ಪ್ರತಿಮೆ ಸ್ಥಾಪನೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಗುದ್ದಲಿಪೂಜೆ ನೆರವೇರಿಸಲಿದ್ದಾರೆ. ಹೀಗಾಗಿ ಜಿಲ್ಲಾಡಳಿತ ನಡೆಸುವ ವಾಲ್ಮೀಕಿ ಜಯಂತಿ ಆಚರಣೆ ಬಹಿಷ್ಕರಿಸುವ ನಿರ್ಧಾರ ಸರಿಯಲ್ಲ ಎಂದು ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ಅಧ್ಯಕ್ಷ ದೇವರಾಜ ಟಿ.ಕಾಟೂರು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಸಿ ಕಚೇರಿ ಎದುರು ಮಹರ್ಷಿ ವಾಲ್ಮೀಕಿ ಪ್ರತಿಮೆ ಸ್ಥಾಪನೆಗೆ ಸಿಎಂ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಸಹಮತವಿದೆ. ಹೀಗಾಗಿ ಕೆಲವರು ವಾಲ್ಮೀಕಿ ಜಯಂತಿಯಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ತಿಳಿಸಿರುವುದು ಸರಿಯಲ್ಲ. ಸಮುದಾಯದ ಬಹುದಿನಗಳ ಬೇಡಿಕೆ ಈಡೇರುತ್ತಿದೆ. ಹೀಗಾಗಿ ಎಲ್ಲರೂ ಜಿಲ್ಲಾಡಳಿತದೊಡನೆ ಸಹಕರಿಸಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಲೋಕೇಶ್ ಪಿಯಾ, ಸತೀಶ್ ನಾಯಕ್, ಸಿದ್ದರಾಜು ಮತ್ತಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.10.2024 ಗುರುವಾರ, ಮಳೆ ನಕ್ಷತ್ರ: ಚಿತ್ತ, 10.10.2024ರಿಂದ 23.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಶ್ರೀ ಶ್ರೀ ಸುಬ್ಬರಾಯ ದಾಸರ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ನವರಾತ್ರಿ ಬ್ರಹ್ಮೋತ್ಸವ, ಪೌರ್ಣಮಿ, ಬೆಳಗ್ಗೆ ಸತ್ಯನಾರಾಯಣ ಪೂಜೆ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ ಆವರಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ :** ಶ್ರೀ ಶಾರದಾಶರನ್ನವರಾತ್ರೋತ್ಸವ–2024, ಪೂರ್ಣಿಮೆ, ಶ್ರೀ ಭುವನೇಶ್ವರಿ ಅಲಂಕಾರ, ಏಕಚಂಡಿ ಹೋಮ, ಸ್ಥಳ: ಶಂಕರ ಮಠದ ಆವರಣ, ಫೋರ್ಟ್ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ (ಕಿಡ್ನಿ) ಮತ್ತು ಗರ್ಭಾಶಯದ ಫೈಬ್ರಾಯ್ಡ್‌ಗಳ ವೈದ್ಯಕೀಯ ಪ್ರತ್ಯೇಕ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30 ರವರೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ, ನವ ವಿಶ್ವಮಾನವ ಟ್ರಸ್ಟ್ :** ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ, ಮುಖ್ಯ ಅತಿಥಿಗಳು: ಕರ್ನಾಟಕ ಪೊಲೀಸ್ ಅಕಾಡೆಮಿಯ ಡಿವೈಎಸ್ಪಿ ಎಂ.ಶಿವಶಂಕರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕಸಾಪ ಮಾಜಿ ಅಧ್ಯಕ್ಷ ವೈ.ಡಿ.ರಾಜಣ್ಣ, ಬಿ.ಎಸ್.ರವಿಶಂಕರ್, ಮಹದೇಶ್, ನಾಗರಾಜ್, ಡಾ.ಕೆ.ಸಿ.ಮಹದೇಶ್, ಡಾ.ಇ.ಸಿ.ನಿಂಗರಾಜೇಗೌಡ, ಎಂ.ಚಂದ್ರಶೇಖರ್, ಪ್ರೊ.ಎಸ್.ಮಹದೇವಮೂರ್ತಿ, ಡಾ.ಹೆಚ್.ಪಿ.ಜ್ಯೋತಿ, ಪ್ರೊ.ಸಪ್ನ, ಎಂ.ಕೆ. ಮಹೇಶ್, ಸ್ಥಳ: ವಿವಿ ಸಂಜೆ ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಪರಿಶಿಷ್ಟ ಜಾತಿ ಮತ್ತು ಪಂಗಡ ವಿಶೇಷ ಘಟಕ :** ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ, ಉದ್ಘಾಟನೆ ಮತ್ತು ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ವಿಶೇಷ ಉಪನ್ಯಾಸ : ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಎಸ್.ಆರ್. ಕೇಶವ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಆಪ್ಟಿಕೇರ್ ಆಸ್ಪತ್ರೆ :** ಉಚಿತ ವಾಕ್ ಮತ್ತು ಶ್ರವಣ ಶಿಬಿರ, ಸ್ಥಳ: ಆಪ್ಟಿಕೇರ್ ಆಸ್ಪತ್ರೆ, ಬೆಳಗ್ಗೆ 11 ರಿಂದ.

■ **ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಮೈಸೂರು ನಗರ ಮತ್ತು ತಾಲೂಕು ನಾಯಕ ಜನಾಂಗದ ಸಂಘಗಳು:** ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ, ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಉಪಸ್ಥಿತರು: ರೇಷ್ಮೆ ಸಚಿವ ಕೆ.ವೆಂಕಟೇಶ್, ಶಾಸಕ ಸಿ.ಅನಿಲ್‌ಕುಮಾರ್, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಸಂಸದರಾದ ಯದುವೀರ್ ಒಡೆಯರ್, ಸುನೀಲ್ ಬೋಸ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಡಿ.ರವಿಶಂಕರ್, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್.ಶ್ರೀವತ್ಸ, ಡಾ.ಯತೀಂದ್ರ, ಕೆ.ವಿವೇಕಾನಂದ, ಸ್ಥಳ: ಕರ್ನಾಟಕ ಕಲಾಮಂದಿರ, ಮಧ್ಯಾಹ್ನ 12.30ಕ್ಕೆ.

■ **ಶ್ರೀ ಸುತ್ತೂರು ಮಠ :** ಬೆಳದಿಂಗಳ ಸಂಗೀತ–272, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪಂಡಿತ್ ಸಿದ್ರಾಮಪ್ಪ ಪೊಲೀಸ್ ಪಾಟೀಲ್ ಅವರಿಂದ ಗಾಯನ, ಪಂಡಿತ್ ವೀರಭದ್ರಯ್ಯ ಎಸ್. ಹಿರೇಮಠ–ಹಾರ್ಮೋನಿಯಂ, ಪಂಡಿತ್ ರಮೇಶ್ ಪಿ. ಧನ್ನೂರ್–ತಬಲ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ವಿಶ್ವ ಮಾನದಂಡಗಳ ದಿನಾಚರಣೆ, ಗೌರವ ಅತಿಥಿಗಳು: ಎಂ.ಜಿ. ಬೈಂದೂರ್, ಅಧ್ಯಕ್ಷತೆ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ.ಭಟ್ ಹಾಲ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ದೀಕ್ಷಿತ್ ಆರೋಗ್ಯ ಧಾಮ :** ಹುಣ್ಣಿಮೆಯ ವಿಶೇಷ ಮಾಸದ ಕಾರ್ಯಕ್ರಮ, ವಿದ್ವಾನ್ ರಾಕೇಶ್ ಅಯ್ಯರ್–ಗಾಯನ, ವಿದ್ವಾನ್ ಶ್ರೀನಿಧಿ ಶಿರೂರು–ಕೊಳಲು, ವಿದ್ವಾನ್ ವಿಕ್ರಮ್ ಭಾರದ್ವಾಜ್–ಮೃದಂಗ, ವಿದ್ವಾನ್ ಸುಜಯೀಂದ್ರರಾವ್–ತಬಲ, ಡಾ. ಸಿ.ಎಸ್. ಅನಿಲ್ ಕುಮಾರ್ ಅವರಿಂದ ಕೂಷ್ಮಾಂಡ ಪುರಾಣ ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ರಾತ್ರಿ 8ಕ್ಕೆ.

ದೊಡ್ಡಕಾನ್ಯದಲ್ಲಿಂದು, ಮೈಸೂರು ತಾಲೂಕು

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ಸಮುದಾಯ ಜೀವನ ಶಿಬಿರದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಮಂಡ್ಯ ವಿಶ್ವವಿದ್ಯಾನಿಲಯದ ನಿಕಟಪೂರ್ವ ಕುಲಸಚಿವ ಡಾ. ಎಸ್.ಎಲ್. ಸುರೇಶ್, ಅಧ್ಯಕ್ಷತೆ : ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ ಶೈಕ್ಷಣಿಕ ಸಂಯೋಜಕ ಡಾ. ಎಂ.ಆರ್. ಜಯಪ್ರಕಾಶ್, ಉಪಸ್ಥಿತರು : ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲ ಡಾ. ಮಹೇಶ್ ದಳಪತಿ, ಸ್ಥಳ: ಡಾ. ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆ, ಬೆಳಗ್ಗೆ 11 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಎಸ್.ಲಕ್ಷ್ಮೀಶ, ವ್ಯಾಖ್ಯಾನ–ಡಾ.ಮ.ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಚಿತ್ರಗೀತೆಗಳು, 9.05 ಸ್ತನ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಕೇರ್ ಸೊಸೈಟಿ, 9.10 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎನ್.ಸಿ. ಹೆಚ್. ಕೃಷ್ಣಮಾಚಾರ್ಯಲು–ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ– ಕಾಡಿನಲ್ಲಿನ ಕಥೆಗಳು. ಭಾಗವಹಿಸುತ್ತಾರೆ : ಮ್ಯಾನ್ ಮನು, ಪ್ರಸ್ತುತಿ:ಜಿ. ಶಾಂತಕುಮಾರ್

ಮಧ್ಯಾಹ್ನ: 12.30 ದೇವರನಾಮ–ಡಿ.ಪುರುಷೋತ್ತಮ್, 12.45 ಚಿತ್ರಗೀತೆಗಳು, 1.20 ಭಾವಗೀತೆಗಳು –ಜಿ. ಪುಷ್ಪಲತಾ, 2.40 ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತೀ–ಖಗೋಳ ವಿಜ್ಞಾನ ಅಧ್ಯಯನ ಮತ್ತು ಮಹತ್ವ ಈ ಕುರಿತು ಭಾರತೀಯ ಖಗೋಳ ಭೌತ ವಿಜ್ಞಾನ ಸಂಸ್ಥೆಯಲ್ಲಿ ಸಹಯೋಜನಾಧಿಕಾರಿ ಅಮೋಘವರ್ಷ ಎನ್. ಅವರೊಂದಿಗೆ ಸಂವಾದ, ಸಂದರ್ಶಕರು: ಜಿ. ಶಾಂತಕುಮಾರ್, 6.10 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ: ಜಯಶ್ರೀ ಹೆಗಡೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಟೊಮ್ಯಾಟೋ ಬೇಸಾಯ ಹಾಗೂ ಮಾರಾಟ ಈ ಕುರಿತು ಚಾಮರಾಜನಗರ ಜಿಲ್ಲೆ, ಹನೂರು ತಾಲೂಕು ಮಂಗಲ ಗ್ರಾಮದ ಎಂ.ಎಲ್.ರಾಮಚಂದ್ರ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ದುಬೈ ಇಂಟರ್‌ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಐಸಿಸಿ ಮಹಿಳೆಯರ ಟಿ20 ವರ್ಲ್ಡ್ ಕಪ್ ಮೊದಲ ಸೆಮಿಫೈನಲ್ ಕ್ರಿಕೆಟ್ ಪಂದ್ಯದ ನೇರ ವೀಕ್ಷಕ ವಿವರಣೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 17 ಗುರುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 181 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಚಾಮುಂಡಿಬೆಟ್ಟದಲ್ಲಿ ವಿಜೃಂಭಣೆಯ ನಾಡದೇವಿ ರಥೋತ್ಸವ

● ಧನುರ್ ಲಗ್ನದಲ್ಲಿ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ● ದೇವಾಲಯದ ಸುತ್ತಲೂ ರಥ ಪ್ರದಕ್ಷಿಣೆ ● ಕುಶಾಲತೋಪು ಸಿಡಿಸಿ ಗೌರವ ಸಮರ್ಪಣೆ

ಮೈಸೂರು, ಅ.16(ಎಂಟಿವೈ)– ಅಪಾರ ಭಕ್ತ ಸಾಗರದ ನಡುವೆ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಬುಧವಾರ ನಾಡದೇವಿ ಚಾಮುಂಡೇಶ್ವರಿ ದೇವಿಯ ರಥೋತ್ಸವ ಶ್ರದ್ಧಾಭಕ್ತಿಯಿಂದ ವಿಜೃಂಭಣೆಯಿಂದ ನೆರವೇರಿತು.


ನವರಾತ್ರಿ ಪೂಜಾ ಮಹೋತ್ಸವ ಮುಗಿದ ನಂತರ ಚಾಮುಂಡಿಬೆಟ್ಟದಲ್ಲಿ ದೇವಿಯ ರಥೋತ್ಸವ ನಡೆಯುವ ಸಂಪ್ರದಾಯವಿದ್ದು, ಬುಧವಾರ ಬೆಳಗ್ಗೆ 9.15ರಿಂದ 9.45ರವರೆಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ತಾಯಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ದೇವಾಲಯದಿಂದ ಮಂಗಳವಾದ್ಯದೊಂದಿಗೆ ಆಭರಣಗಳಿಂದ ಅಲಂಕಾರ ಮಾಡಲಾಗಿದ್ದ ಉತ್ಸವ ಮೂರ್ತಿಯನ್ನು ಹೊರಗೆ ತಂದು ದೇವಾಲಯದ ಮುಂದೆ ನಿಂತಿದ್ದ ರಥದ ಮೇಲೆ ಪ್ರತಿಷ್ಠಾಪಿಸಿ, ಮತ್ತೆ ಪೂಜೆ ಸಲ್ಲಿಸಿದ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಅರಮನೆಯಿಂದ ಆಗಮಿಸಿದ್ದ ಬಿರುದು, ಬಾವಲಿ, ಛತ್ರಿ ಚಾಮರದ ಗೌರವದೊಂದಿಗೆ ದೇವಾಲಯದ ಸುತ್ತ ರಥವನ್ನು ಅಪಾರ ಸಂಖ್ಯೆ ಭಕ್ತರು ಎಳೆದು ಭಕ್ತಿ ಪ್ರದರ್ಶಿಸಿದರು. ಮಂಗಳವಾದ್ಯ, ಪೊಲೀಸ್ ಬ್ಯಾಂಡ್ ವಾದನ, ವೀರಗಾಸೆ ತಂಡ ರಥದ ಮುಂದೆ ಸಾಗಿದವು. ಸಂಪ್ರದಾಯದಂತೆ ಜಂಬೂ ಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿಗೆ ಗಣ್ಯರು ಪುಷ್ಪಾರ್ಚನೆ ಮಾಡುವ ಸಿಡಿಮದ್ದು ಸಿಡಿಸುವ ಫಿರಂಗಿ ದಳದ ಸಿಬ್ಬಂದಿಗಳ ತಂಡ ರಥೋತ್ಸವದ ಮುಂದೆ ದೇವಾಲಯದ ಒಂದು ಸುತ್ತಿನ ಅಂತರದಲ್ಲಿ 21 ಬಾರಿ ಸಿಡಿಮದ್ದು ಸಿಡಿಸಿ ಗೌರವ ಸಮರ್ಪಿಸಿದರು.


ರಥೋತ್ಸವದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಕುಟುಂಬದ ಸದಸ್ಯರೊಂದಿಗೆ ಪಾಲ್ಗೊಂಡರು.


ಮುಗಿಲು ಮುಟ್ಟಿದ ಉದ್ಘೋಷ: ರಥೋತ್ಸವ ವೇಳೆ ದೇವಾಲಯದ ಸುತ್ತಲೂ ನೆರೆದಿದ್ದ ಅಪಾರ ಸಂಖ್ಯೆಯ ಭಕ್ತರು ಜೈ ಜೈ ಮಾತಾ, ಚಾಮುಂಡಿ ಮಾತಾ, ಚಾಮುಂಡೇಶ್ವರಿ ತಾಯಿಗೆ ಜೈ ಎಂದು ಘೋಷಣೆ ಕೂಗುವ ಮೂಲಕ ಭಕ್ತಿಯಿಂದ ನಮಿಸಿದರು.

ಹಣ್ಣು–ಜವನ ಎಸೆದರು: ವಿವಿಧೆಡೆಯಿಂದ ಚಾಮುಂಡಿಬೆಟ್ಟಕ್ಕೆ ಆಗಮಿಸಿದ್ದ ಅಪಾರ ಸಂಖ್ಯೆಯ ಭಕ್ತರು ಸಂಪ್ರದಾಯದಂತೆ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿ ರಥದ ಮೇಲೆ ■ 7ನೇ ಪುಟಕ್ಕೆ

“ಬುಧವಾರ ರಥೋತ್ಸವ ಸಂಪನ್ನಗೊಂಡಿದ್ದು, ಅ.18ರಂದು ಸಂಜೆ ಚಾಮುಂಡಿಬೆಟ್ಟದ ದೇವಿಕೆರೆಯಲ್ಲಿ ತೆಪ್ಪೋತ್ಸವ ಜರುಗಲಿದೆ. ಸಂಪ್ರದಾಯದಂತೆ ವಿವಿಧ ಪೂಜಾ ಕೈಂಕರ್ಯಗಳು ಜರುಗಿದ ನಂತರ ದೇವಿಯ ಉತ್ಸವಮೂರ್ತಿಯನ್ನು ತೆಪ್ಪದಲ್ಲಿ ಉತ್ಸವ ನೆರವೇರಿಸಲಾಗುತ್ತದೆ. ತೆಪ್ಪೋತ್ಸವದ ಬಳಿ ಈ ಸಾಲಿನ ದಸರಾ ಮಹೋತ್ಸವದ ಎಲ್ಲಾ ಧಾರ್ಮಿಕ ಕಾರ್ಯಗಳು ಸಮಾಪ್ತಿಗೊಳ್ಳಲಿವೆ.


ಚಾಮುಂಡಿಬೆಟ್ಟದಲ್ಲಿ ಬುಧವಾರ ಅಪಾರ ಭಕ್ತ ಸಮೂಹದ ನಡುವೆ ನಾಡದೇವಿಯ ರಥೋತ್ಸವ ಜರುಗಿತು.

ಇಂದು ಕಾವೇರಿ ತೀರ್ಥೋದ್ಭವ



ಮಡಿಕೇರಿ, ಅ.16–ತಲಕಾವೇರಿ ಕ್ಷೇತ್ರದ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ ಗುರುವಾರ (ಅ.17) ನಡೆಯಲಿದ್ದು, ಬೆಳಗ್ಗೆ 7.40ಕ್ಕೆ ಸಲ್ಲುವ ತುಲಾ ಲಗ್ನದಲ್ಲಿ ಪವಿತ್ರ ತೀರ್ಥ ಕುಂಡಿಕೆಯಿಂದ ಕಾವೇರಿ ಮಾತೆ ತೀರ್ಥ ಸ್ವರೂಪಿಣಿಯಾಗಿ ಭಕ್ತರಿಗೆ ದರ್ಶನ ನೀಡಲಿದ್ದಾಳೆ. ಈ ಅಮೃತ ಘಳಿಗೆಗೆ ಸಾಕ್ಷಿಯಾಗಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು, ಸಾರಿಗೆ, ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ಡಾ.ಮಂತರ್‌ಗೌಡ, ವಿಧಾನಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ, ಜಿಲ್ಲಾಧಿಕಾರಿ ವೆಂಕಟರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಅಪರ ಜಿಲ್ಲಾಧಿಕಾರಿ ಆರ್. ಐಶ್ವರ್ಯ, ಉಪ ವಿಭಾಗಾಧಿಕಾರಿ ನರ್ವಾಡೆ ವಿನಾಯಕ ಮತ್ತಿತರರು ಭಾಗವಹಿಸಲಿದ್ದಾರೆ.

10 ಸಾವಿರ ಭಕ್ತರಿಗೆ ಉಪಾಹಾರ: ಕ್ಷೇತ್ರಕ್ಕೆ ಆಗಮಿಸುವ ಭಕ್ತರಿಗೆ ವಿದ್ಯುತ್ ವ್ಯವಸ್ಥೆ, ಸೂಕ್ತ ಭದ್ರತೆ, ಆರೋಗ್ಯ ಸೇವೆ ಸೇರಿದಂತೆ ಯಾವುದೇ ಸಮಸ್ಯೆಯಾಗದಂತೆ ಅಗತ್ಯ ಸಿದ್ಧತೆ ಕೈಗೊಳ್ಳಲಾಗಿದೆ. ಭಾಗಮಂಡಲದ ಭಗಂಡೇಶ್ವರನ ಸನ್ನಿಧಿಯಿಂದ ತಲಕಾವೇರಿ ಕ್ಷೇತ್ರದವರೆಗೆ ಹದಿನೈದು ಬಸ್‌ಗಳ ಉಚಿತ ಸೇವೆ ಒದಗಿಸಲಾಗಿದೆ. ಕ್ಷೇತ್ರದಲ್ಲಿ ಈ ಬಾರಿಯೂ ಒಂದು ತಿಂಗಳು ಅನ್ನಸಂತರ್ಪಣೆ ನೆರವೇರಲಿದ್ದು, ತೀರ್ಥೋದ್ಭವದಂದು ಸುಮಾರು 10 ಸಾವಿರ ಭಕ್ತರಿಗೆ ಬೆಳಗ್ಗಿನ ಉಪಾಹಾರ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಶಾಸಕ ಪೊನ್ನಣ್ಣ ತಿಳಿಸಿದರು.

ಅಂತೂ ಮುಡಾ ಅಧ್ಯಕ್ಷ ಕೆ.ಮರೀಗೌಡ ತಲೆದಂಡ

● ಬೆಂಗಳೂರಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್‌ಗೆ ರಾಜೀನಾಮೆ ಸಲ್ಲಿಕೆ ● ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆಯಂತೆ ರಾಜೀನಾಮೆ ನೀಡಿದ್ದಾಗಿ ಪ್ರತಿಕ್ರಿಯೆ




ಕೆ.ಮರೀಗೌಡ

ಮೈಸೂರು, ಅ.16(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧ್ಯಕ್ಷ ಸ್ಥಾನಕ್ಕೆ ಕೆ.ಮರೀಗೌಡ ಇಂದು ರಾಜೀನಾಮೆ ನೀಡಿದ್ದಾರೆ.

ವಿಧಾನಸೌಧದಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್ ಅವರಿಗೆ ಬುಧವಾರ ಮಧ್ಯಾಹ್ನ 12.15ಕ್ಕೆ ರಾಜೀನಾಮೆ ಸಲ್ಲಿಸಿರುವ ಮರೀಗೌಡರು, ಮುಖ್ಯಮಂತ್ರಿ ಸೂಚನೆ, ಜೊತೆಗೆ ನನ್ನ ಅನಾರೋಗ್ಯದ ನಿಮಿತ್ತ ಮುಡಾ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ್ದಾರೆ.

“ರಾಜ್ಯ ಕಂಡು ಕೇಳರಿಯದ ಬಹುದೊಡ್ಡ ಹಗರಣ ಎನಿಸಿರುವ ಸ್ವತಃ ಮುಖ್ಯಮಂತ್ರಿಗಳೇ ಭಾಗಿಯಾದ ಮುಡಾ ಹಗರಣದಲ್ಲಿ ಮುಖ್ಯಮಂತ್ರಿಗಳು 14 ನಿವೇಶನಗಳನ್ನು ಹಿಂತಿರುಗಿಸಿದ ಬೆನ್ನಲ್ಲೇ ಅವರ ಅತ್ಯಾಪ್ತ ಕೆ.ಮರೀಗೌಡ ಅವರು ಮುಡಾ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಈ ಪ್ರಕರಣದಲ್ಲಿ ರಾಜೀನಾಮೆ ಪರ್ವ ಆರಂಭವಾಗಿದ್ದು, ನಗರಾಭಿವೃದ್ಧಿ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಮುಖ್ಯಮಂತ್ರಿಗಳು ರಾಜೀನಾಮೆ ನೀಡದೇ ಗತ್ಯಂತರವಿಲ್ಲ ಎನ್ನುವುದಕ್ಕೆ ಕೆ.ಮರೀಗೌಡರ ರಾಜೀನಾಮೆ ಮುನ್ನುಡಿ ಬರೆದಿದೆ.



–ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಇಂದು ಬೆಳಗ್ಗೆ ಮುಡಾ ಅಧ್ಯಕ್ಷರ ಅಧಿಕೃತ ಕಾರನ್ನು ಬಿಟ್ಟು, ಖಾಸಗಿ ಕಾರಿನಲ್ಲಿ ಬೆಂಗಳೂರಿಗೆ ತೆರಳಿ, ವಿಧಾನಸೌಧದಲ್ಲಿ ಮುಖ್ಯಮಂತ್ರಿಗಳ ಭೇಟಿಗಾಗಿ ಕಾಯುತ್ತಿದ್ದ ಮರೀಗೌಡರಿಗೆ ನೇರವಾಗಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಯನ್ನು ಭೇಟಿ ಮಾಡಿ, ರಾಜೀನಾಮೆ ನೀಡುವಂತೆ ಅಧಿಕಾರಿಗಳ ಮೂಲಕ ಮಾಹಿತಿ ಬಂದಿದೆ. ಹಾಗಾಗಿ ಅವರು ಚೋಳನ್ ಅವರಿಗೆ ರಾಜೀನಾಮೆ ಸಲ್ಲಿಸಿ, ಖಾಸಗಿ ಕಾರಿನಲ್ಲಿ ಇಂದು ಸಂಜೆ ಮೈಸೂರಿಗೆ ಆಗಮಿಸಿದರು. ಶೇ.50:50ರ ಅನುಪಾತದಡಿ ನಿಯಮಬಾಹಿರವಾಗಿ 2020ರಿಂದ 2024ರ ■ 6ನೇ ಪುಟಕ್ಕೆ

ಮುಳುವಾಯ್ತು ಆ ಒಂದು ‘ಟಿಪ್ಪಣಿ’!

ಮೈಸೂರು, ಅ.16(ಆರ್‌ಕೆ)–50:50 ಅನುಪಾತದಡಿ ಅಕ್ರಮ ನಿವೇಶನ ಹಂಚಿಕೆ ಹಗರಣದಲ್ಲಿ ಇದೀಗ ಮುಡಾ ಅಧ್ಯಕ್ಷ ಕೆ.ಮರೀಗೌಡರ ತಲೆದಂಡವಾಗಿದ್ದು, 2024ರ ಮಾರ್ಚ್ 16ರಂದು ಪ್ರಾಧಿಕಾರದ ಆಯುಕ್ತರಿಗೆ ಬರೆದ ಕಚೇರಿ ಟಿಪ್ಪಣಿ ಅವರ ಅಧಿಕಾರಕ್ಕೆ ಕುತ್ತಾಗಿದೆ.

ಮಾರ್ಚ್ 16ರಂದು ಕೆ.ಮರೀಗೌಡರು ಪ್ರಾಧಿಕಾರದ ಆಯುಕ್ತರಾಗಿದ್ದ ಜಿ.ಟಿ. ದಿನೇಶ್‌ಕುಮಾರ್‌ಗೆ ಟಿಪ್ಪಣಿಯೊಂದನ್ನು ನೀಡಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಪರಸ್ಪರ ಒಪ್ಪಂದದಡಿ ಭೂಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಪ್ರೋತ್ಸಾಹದಾಯಕ ನಿವೇಶನ ನೀಡುತ್ತಿರುವುದು ಹಾಗೂ ಜೂನ್ 24ರಂದು ನೀಡಿದ ಟಿಪ್ಪಣಿಯಲ್ಲಿ ಶೇ. 50:50ರ ಅನುಪಾತದಡಿ ಭೂಸ್ವಾಧೀನಪಡಿಸಿಕೊಳ್ಳದೆ ಬಳಸಿಕೊಂಡ ಜಮೀನಿಗೆ ಬದಲಾಗಿ ಪರಿಹಾರ ರೂಪದಲ್ಲಿ ನಿವೇಶನಗಳನ್ನು ಮಂಜೂರು ಮಾಡುತ್ತಿರುವುದು ಕಾನೂನುಬಾಹಿರ ಎಂದು ಆಂತರಿಕ ಪತ್ರ ಬರೆದಿದ್ದರು. ಈ ಎರಡೂ ಪತ್ರಗಳು ಇಡೀ ಮುಡಾ ಹಗರಣ ಹೊರಬರಲು ಹಾಗೂ ಸಿಎಂ ಸಿದ್ದರಾಮಯ್ಯರ ಪತ್ನಿ ಶ್ರೀಮತಿ ಪಾರ್ವತಿ ಅವರಿಗೆ 14 ನಿವೇಶನ ಮಂಜೂರಾಗಿದೆ ಎಂಬ ವಿಷಯ ಹೊರಬರಲು ಕಾರಣವಾಗಿತ್ತು.

‘ಮುಡಾದಿಂದ ಪರಸ್ಪರ ಒಪ್ಪಂದದಡಿ ಭೂಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಪ್ರೋತ್ಸಾಹದಾಯಕ ನಿವೇಶನಗಳನ್ನು ಈ ಹಿಂದೆಯೇ ಸಂಬಂಧಪಟ್ಟ ಭೂ ಮಾಲೀಕರಿಗೆ ಮಂಜೂರು ಮಾಡಲಾಗಿರುತ್ತದೆ. ಪ್ರಸ್ತುತ ಅನೇಕ ಜನರು ನನ್ನ ಬಳಿ ಬಂದು ಪ್ರಾಧಿಕಾರದಿಂದ ಈಗಾಗಲೇ ಭೂ ಸ್ವಾಧೀನಪಡಿಸಿ ಜಮೀನಿಗೆ ಹೆಚ್ಚುವರಿಯಾಗಿ ಪ್ರೋತ್ಸಾಹದಾಯಕ ನಿವೇಶನಗಳನ್ನು ನೀಡಲಾಗುತ್ತಿದೆ. ಎಂದು ತಮಗೂ ಈ ರೀತಿ ಹೆಚ್ಚುವರಿ ಪ್ರೋತ್ಸಾಹದಾಯಕ ನಿವೇಶನಗಳನ್ನು ಕೊಡಿಸಿಕೊಡಬೇಕೆಂದು ಹಾಗೂ ಕೆಲ ಭೂ ಮಾಲೀಕರು ಈ ಸಂಬಂಧ ದಲ್ಲಾಳಿಗಳು ತಮ್ಮನ್ನು ಸಂಪರ್ಕಿಸಿ ನಿವೇಶನ ಕೊಡಿಸುತ್ತೇವೆಂದು ಹೇಳುತ್ತಿದ್ದಾರೆ. ಪ್ರಾಧಿಕಾರದಿಂದ ಈ ಹಿಂದೆ ಪರಸ್ಪರ ಒಪ್ಪಂದದಡಿಯಲ್ಲಿ ಭೂ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಈಗಾಗಲೇ ನಿವೇಶನಗಳನ್ನು ನೀಡಲಾಗಿದ್ದರೂ, ಪ್ರಸ್ತುತ ಅಂತಹ ಜಮೀನುಗಳಿಗೆ ಹೆಚ್ಚುವರಿಯಾಗಿ ಪ್ರೋತ್ಸಾಹದಾಯಕ ನಿವೇಶನಗಳನ್ನು ನೀಡಲು ಇರುವ ಮಾನದಂಡವೇನು?, ಈ ರೀತಿ ಹೆಚ್ಚುವರಿಯಾಗಿ ಪ್ರೋತ್ಸಾಹದಾಯಕ ನಿವೇಶನಗಳನ್ನು ಮಂಜೂರು ಮಾಡಲು ಪ್ರಾಧಿಕಾರದ ಸಭೆಯ ಅನುಮೋದನೆ ಪಡೆಯಲಾಗಿದೆಯೇ? ಹಾಗೂ ಕಳೆದ 2020ರಿಂದ ಈವರೆಗೂ ಎಷ್ಟು ಪ್ರೋತ್ಸಾಹದಾಯಕ ನಿವೇಶನಗಳನ್ನು ಮಂಜೂರು ಮಾಡಲಾಗಿದೆ ಎಂಬ ಪೂರ್ಣ ■ 6ನೇ ಪುಟಕ್ಕೆ

ಇಷ್ಟೆಲ್ಲಾ ಆದರೂ ಆ ಇಬ್ಬರು ಅಧಿಕಾರಿಗಳು ಸೇಫ್!?


ಡಿ.ಬಿ.ನಟೇಶ್


ದಿನೇಶ್ ಕುಮಾರ್

ಮೈಸೂರು, ಅ.16–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಇಬ್ಬರು ಅಧಿಕಾರಿಗಳು ಮಾಡಿದ ಪ್ರಮಾದದಿಂದಾಗಿ ರಾಜ್ಯದ ಮುಖ್ಯಮಂತ್ರಿಗಳು ಸಂಕಷ್ಟಕ್ಕೀಡಾಗುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ರಾಜ್ಯದ ಮಾನ ರಾಷ್ಟ್ರ ಮಟ್ಟದಲ್ಲಿ ಹರಾಜಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಲೋಕಾಯುಕ್ತ ಪೊಲೀಸರ ಮುಂದೆ ವಿಚಾರಣೆಗೆ ಹಾಜರಾಗಬೇಕಾದ ಕಾಲ ಸನ್ನಿಹಿತವಾಗಿದೆ. ಹಗರಣದ ಕೇಂದ್ರ ಸ್ಥಾನವಾದ ಮುಡಾದ ಅಧ್ಯಕ್ಷ ಸ್ಥಾನಕ್ಕೆ ಮರೀಗೌಡರು ಈಗ ರಾಜೀನಾಮೆ ನೀಡಿದ್ದಾರೆ. ಆದರೆ ಬ್ರಹ್ಮಾಂಡ ■ 6ನೇ ಪುಟಕ್ಕೆ

ರಾಜೀನಾಮೆ ಪರ್ವ ಆರಂಭ...!


ಕೃಷ್ಣ


ಮೈಸೂರು, ಅ.16(ಬಿಎಲ್‌ಯು)– ಮುಡಾ ಅಧ್ಯಕ್ಷ ಸ್ಥಾನಕ್ಕೆ ಕೆ.ಮರೀಗೌಡ ರಾಜೀನಾಮೆ ನೀಡುವ ಮೂಲಕ ಹಗರಣದಲ್ಲಿ ಸಿಲುಕಿರುವವರ ರಾಜೀನಾಮೆ ಪರ್ವ ‘ಆರಂಭ’ವಾಗಿದ್ದು, ಮುಂದಿನ ದಿನದಲ್ಲಿ ಮುಡಾ ಹಗರಣದ ಆರೋಪಿಗಳಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಹಲವು ಜನ ಪ್ರತಿನಿಧಿಗಳು ರಾಜೀನಾಮೆ ನೀಡಿ ಜೈಲಿಗೆ ಹೋಗಲಿದ್ದಾರೆ ಎಂದು ದೂರುದಾರ ಸ್ನೇಹಮಯಿ ಕೃಷ್ಣ ಭವಿಷ್ಯ ನುಡಿದಿದ್ದಾರೆ. ಮುಡಾ ಅಧ್ಯಕ್ಷ ಸ್ಥಾನಕ್ಕೆ ಮರೀಗೌಡ ರಾಜೀನಾಮೆ ನೀಡಿದ ಬಗ್ಗೆ ‘ಮೈಸೂರು ಮಿತ್ರ’ನಿಗೆ ಪತ್ರಿಕ್ರಿಯೆ ನೀಡಿದ ಅವರು, ಶೇ.50:50 ಅನುಪಾತದ ನಿವೇಶನ ಹಂಚಿಕೆಯಲ್ಲಿ ಸೆಟ್ಲುಮೆಂಟ್ ಡೀಡ್ ಮಾಡಿ ತಮ್ಮ ಸಹೋದರ ಶಿವಣ್ಣನಿಗೆ ಮರೀಗೌಡ ನಿವೇಶನ ಕೊಡಿಸಿ ಅಕ್ರಮ ಎಸಗಿದ್ದಾರೆ. ಇದರ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದ್ದಾರೆ ಎಂದರು. ಇದೇ ರೀತಿ ಡಾ. ಹೆಚ್.ಸಿ.ಮಹದೇವಪ್ಪ ಕೂಡ ಶೇಕಡ 50:50 ಅನುಪಾತದ ನಿವೇಶನ ಹಂಚಿಕೆಯಲ್ಲಿ ಸೆಟ್ಲುಮೆಂಟ್ ಡೀಡ್ ಮಾಡಿ ಸಹೋದರನ ಮಗನಿಗೆ ■ 6ನೇ ಪುಟಕ್ಕೆ

ಸೈಟ್ ಸಿದ್ದಪ್ಪನವರೇ ‘ಮುಡಾ’ ಮರಿ ರಾಜೀನಾಮೆ ಕೊಟ್ಟಿದ್ದೇಕೆ?



ಬೆಂಗಳೂರು, ಅ.16– ರಾಜ್ಯದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆಯಲ್ಲಿನ ಹಗರಣಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ತನಿಖೆ ಎದುರಿಸುತ್ತಿದ್ದಾರೆ. ಈ ವಿಚಾರವನ್ನೇ ಅಸ್ತ್ರವಾಗಿಸಿಕೊಂಡಿರುವ ಪ್ರತಿಪಕ್ಷಗಳು, ಸಿಎಂ ಸ್ಥಾನಕ್ಕೆ ಅವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸುತ್ತಿವೆ. ಇದೇ ವೇಳೆ ಮುಡಾ ಅಧ್ಯಕ್ಷ ಕೆ.ಮರೀಗೌಡ ಅವರು ಅನಾರೋಗ್ಯದ ಕಾರಣ ನೀಡಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇದು ರಾಜ್ಯ ರಾಜಕಾರಣದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದ್ದು, ಈ ಸಂಬಂಧ ಜೆಡಿಎಸ್ ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಲೇವಡಿ ಮಾಡಿದೆ. ‘ಸೈಟ್ ಸಿದ್ದಪ್ಪನವರೇ ಮುಡಾ ಮರಿ ರಾಜೀನಾಮೆ ಕೊಟ್ಟಿದ್ದು ಯಾಕೆ?’ ಎಂದು ಪ್ರಶ್ನೆ ಮಾಡಿದೆ. ಜೆಡಿಎಸ್ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಜೆಡಿಎಸ್, ‘ನಾನು ತಪ್ಪೇ ಮಾಡಿಲ್ಲ, ■ 6ನೇ ಪುಟಕ್ಕೆ

ಜಗ್ ಥೆರಪಿ ಸಂಸ್ಥಾಪಕ ಡಾ.ಕೆಆರ್‌ಐ ಜಗದೀಶ್ ಇನ್ನಿಲ್ಲ


ಡಾ. ಕೆಆರ್‌ಐ ಜಗದೀಶ್


ಮೈಸೂರು, ಅ. 16– ಮೈಸೂರಿನ ಹೆಸರಾಂತ ಜಗ್ ಥೆರಪಿ ಸಂಸ್ಥಾಪಕರು ಮತ್ತು ದಟ್ಟಗಳ್ಳಿಯ ನಿವಾಸಿ ಡಾ. ಕೆಆರ್‌ಐ ಜಗದೀಶ್(ಡಾ. ಜಗ್–87) ದೀರ್ಘ ಕಾಲದ ಅಸ್ವಸ್ಥತೆ ನಂತರ ಬುಧವಾರ ರಾತ್ರಿ ತಮ್ಮ ನಿವಾಸದಲ್ಲಿ ನಿಧನರಾದರು. ಜಗ್ ಥೆರಪಿ ಮೂಲಕ ದೇಶ–ವಿದೇಶದಲ್ಲಿ ಪ್ರಸಿದ್ಧರಾಗಿದ್ದರು. ರಾಜವಂಶಸ್ಥ ಹಾಗೂ ದಿವಂಗತ ಮಾಜಿ ಸಂಸದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಸೇರಿದಂತೆ ಸಾವಿರಾರು ಜನರಿಗೆ ತಮ್ಮ ಜಗ್ ಥೆರಪಿ ಮೂಲಕ ಚಿಕಿತ್ಸೆ ನೀಡಿದ್ದರು.

ದಿವಂಗತರು ಪುತ್ರಿಯರಾದ ಲಕ್ಷ್ಮಿ, ಲತಾ, ಲೇಖಾ, ಲಾವಣ್ಯ, ಅಳಿಯಂದಿರಾದ ಡಾ. ಅಜಿತ್ ಅರಸ್, ಅರ್ಜುನ್ ಅರಸ್, ರಮೇಶ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗುರುವಾರ ಮಧ್ಯಾಹ್ನ 12.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಲ್ಲಿ ಏನೇ ತೀರ್ಮಾನ ಕೈಗೊಳ್ಳುವ ಮುನ್ನ

ಹೈಕೋರ್ಟ್ ಅನುಮತಿ ಕಡ್ಡಾಯ





ಬೆಂಗಳೂರು,ಅ.16– ಪ್ರಸಿದ್ಧ ಶ್ರೀ ಚಾಮುಂಡೇಶ್ವರಿ ದೇವಾಲಯದ ನಿರ್ವಹಣೆಗಾಗಿ ರೂಪಿಸಲಾಗಿರುವ ಶ್ರೀಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾಯಿದೆ ಸೆಕ್ಷನ್ 16 ಅಥವಾ 17ರ ಅಡಿ ಯಾವುದೇ ತೀರ್ಮಾನ ಕೈಗೊಳ್ಳುವ ಮುನ್ನ ನ್ಯಾಯಾಲಯದ ಅನುಮತಿ ಪಡೆಯಬೇಕಾಗುತ್ತದೆ ಎಂದು ಹೈಕೋರ್ಟ್ ಇಂದು ಮಧ್ಯಂತರ ಆದೇಶ ನೀಡಿತು.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾಯಿದೆ 2024 ಅನ್ನು ಅಸಾಂವಿಧಾನಿಕ ಎಂದು ಘೋಷಿಸಬೇಕೆಂದು ಕೋರಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಹೇಮಂತ್ ಚಂದನ್‌ಗೌಡರ್ ನೇತೃತ್ವದ ಏಕಸದಸ್ಯ ಪೀಠ ಈ ಆದೇಶ ಹೊರಡಿಸಿದೆ. ನಿಯಮಗಳಿಗೆ ವಿರುದ್ಧವಾಗಿ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾಯಿದೆ ಜಾರಿಗೊಳಿಸಲಾಗಿದೆಯೇ ಎಂಬುದನ್ನು ಪರಿಗಣಿಸಬೇಕು. ಅರ್ಜಿ ಇತ್ಯರ್ಥವಾಗುವವರೆಗೆ ದೇವಾಲಯದ ಚರ ಮತ್ತು ಸ್ಥಿರ ಆಸ್ತಿಗಳನ್ನು ಪ್ರಾಧಿಕಾರ ವಿಲೇವಾರಿ ಮಾಡುವಂತಿಲ್ಲ. ಹಾಲಿ ದೇವಾಲಯದಲ್ಲಿ ಜಾರಿಯಲ್ಲಿರುವ ಸಂಪ್ರದಾಯದಲ್ಲಿ ಬದಲಾವಣೆ ಅಥವಾ ಹಸ್ತಕ್ಷೇಪ ಮಾಡಬಾರದು ಎಂದು ತಿಳಿಸಿದೆ.

ಅಲ್ಲದೆ, ಪ್ರಾಧಿಕಾರ ಕಾಯಿದೆ ಸೆಕ್ಷನ್ 16 ಅಥವಾ 17ರ ಅಡಿ ಯಾವುದೇ ತೀರ್ಮಾನ ಕೈಗೊಳ್ಳುವ ಮುನ್ನ ನ್ಯಾಯಾಲಯದ ಅನುಮತಿ ಪಡೆಯಬೇಕು. ಅರ್ಜಿ ವಿಲೇವಾರಿ ಬಾಕಿ ಇರುವಾಗ ರಾಜ್ಯ ಸರ್ಕಾರ ನಿಯಮ ರೂಪಿಸುವುದಕ್ಕೆ ಯಾವುದೇ ಅಡ್ಡಿ ಇಲ್ಲ. ಸಭೆಯಲ್ಲಿ ಭಾಗವಹಿಸುವಂತೆ ಪ್ರಮೋದಾದೇವಿ ಅವರಿಗೆ ಪ್ರಾಧಿಕಾರ ನೋಟಿಸ್ ನೀಡಬೇಕು. ಅವರು ಸಭೆಯಲ್ಲಿ ಭಾಗವಹಿಸದಿದ್ದರೆ ಪ್ರಾಧಿಕಾರ ಸೂಕ್ತ ನಿರ್ಧಾರ ಕೈಗೊಳ್ಳಲು ಸ್ವತಂತ್ರವಾಗಿರುತ್ತದೆ ಎಂದು ಕೋರ್ಟ್ ತನ್ನ ಆದೇಶದಲ್ಲಿ ಹೇಳಿದೆ.

ವಿಚಾರಣೆ ವೇಳೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ದೇವದಾಸ್, ಪ್ರಾಧಿಕಾರದ ಸೆಕ್ಷನ್ 17ರ ಅನ್ವಯ ಯಾವುದೇ ರೀತಿಯಲ್ಲೂ ಅರ್ಜಿದಾರರ ■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹುಡುಗ (ತನ್ನ ಪ್ರೇಯಸಿಗೆ ಮೆಸೇಜ್ ಮಾಡುತ್ತಾ) : ಪ್ರಿಯೇ, ನೀ ಮಲಗಿದ್ದರೆ ಕನಸುಗಳನ್ನು ಕಳುಹಿಸು, ಎಚ್ಚರದಲ್ಲಿದ್ದರೆ ನನ್ನೊಂದಿಗೆ ಕಳೆದ ಸವಿನೆನಪನ್ನು ಕಳುಹಿಸು, ನಗುತ್ತಿದ್ದರೆ ಖುಷಿ, ಅಳುತ್ತಿದ್ದರೆ ಕಣ್ಣೀರನ್ನು ಕಳುಹಿಸು,

ಹುಡುಗಿ : ಮುಸುರೆ ಪಾತ್ರೆ ತಿಕ್ತಾ ಇದ್ದೀನಿ, ಮುಸುರೆ ನೀರು ಕಳುಹಿಸ್ಲಾ?

ಹುಡುಗ : ಗುಡ್ ನೈಟ್

ಮೈಸೂರು ಮಿತ್ರ

ಗುರುವಾರ, 17 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಗೊಬ್ಬರ ಕೂಡ ಆಗಲಾರದ ನಿನ್ನನ್ನು ಆಳದಲ್ಲಿ ಹುಗಿದು ಬಿಡುತ್ತಾರೆ. ಎಷ್ಟು ಅಬ್ಬರ ಮಾಡುತ್ತೀಯೋ ಮನುಜ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಗಣಿಯೊಂದಿಗಿನ ಸರಸಕ್ಕಿಂತ ಗಂಧದೊಂದಿಗಿನ ಗುದ್ದಾಟ ಲೇಸು

ನಿಮ್ಮ ಪತ್ರಗಳು

ಭಾರತ 'ರತನ' ಟಾಟಾ ಅವರಿಗೆ ಸಿಗಲಿ 'ಭಾರತ ರತ್ನ'

ಮಾನ್ಯರೆ,

ಒಳ್ಳೆಯ ವ್ಯಕ್ತಿತ್ವ ಹೊಂದಿದ್ದ ಉದ್ಯಮಿ ರತನ್ ಟಾಟಾ ಅವರು ನಮ್ಮನಗಲಿದ್ದಾರೆ. ಭಾರತದಂತ ದೇಶದಲ್ಲಿ ರಾಜಕಾರಣ ಮತ್ತು ಬಿಜಿನೆಸ್ ಅನ್ನು ಮೌಲ್ಯಗಳನ್ನಿಟ್ಟುಕೊಂಡು ಮಾಡುವುದೇ ಕಷ್ಟ, ಆದರೂ ರತನ್ ಟಾಟಾ ಅವರು ಅದನ್ನು ಮಾಡಿ ತೋರಿಸಿದ್ದಾರೆ ಮತ್ತೆ ಉದ್ಯಮದಲ್ಲಿ ಯಶಸ್ಸು ಕಂಡಿದ್ದಾರೆ. ಸರ್ಕಾರದ ಕಣ್ಣಿಗೆ ಕಾಣದ ಅಥವಾ ಸರ್ಕಾರ ಮಾಡದ ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿ ಸಮಾಜಕ್ಕೆ ಕೊಡುಗೆ ನೀಡಿದ್ದಾರೆ. ಜನಸಾಮಾನ್ಯರ ಸಣ್ಣ ಸಣ್ಣ ಕನಸ್ಸುಗಳನ್ನು ಈಡೇರಿಸಲು ಪ್ರಯತ್ನಿಸಿದ್ದಾರೆ. ದೂರದೃಷ್ಟಿ ಇಟ್ಟುಕೊಂಡು ಪ್ರಾಮಾಣಿಕ ಪ್ರಯತ್ನ ಮಾಡಿದರೆ ಎಲ್ಲಾ ಕೆಲಸಗಳಲ್ಲೂ ಯಶಸ್ಸು ಸಾಧಿಸಬಹುದು ಅಂತ ಮಾಡಿ ತೋರಿಸಿಕೊಟ್ಟಿದ್ದಾರೆ. ಮುಖ್ಯವಾಗಿ ಯಶಸ್ಸು ಸಾಧನೆ ತಲೆಗೇರಿಸಿಕೊಳ್ಳದೇ ಸರಳತೆಯ ಜೀವನ ನಡೆಸಿದ್ದಾರೆ ಮತ್ತು ಇತರರಿಗೆ ಮಾದರಿ ಆಗಿದ್ದಾರೆ. ಅವರ ಈ ಎಲ್ಲಾ ವ್ಯಕ್ತಿತ್ವದಿಂದಲೇ ಅವರು ಇದ್ದಾಗ ಮತ್ತು ಅವರು ಇಲ್ಲದಿದ್ದಾಗಲೂ ಅಷ್ಟು ಗೌರವ ಉಳಿಸಿಕೊಂಡಿದ್ದಾರೆ. ಅವರಿಗೆ ಈಗ ಭಾರತ ರತ್ನ ಕೊಡುವ ಬಗ್ಗೆ ಒತ್ತಾಯ, ಪ್ರಯತ್ನಗಳು ನಡೆಯುತ್ತಿವೆ. ಕೊಡಲಿ ಒಳ್ಳೆಯದೇ. ಆದರೆ ಇಂತಹ ಮಹನೀಯರಿಗೆ ಅವರು ಇರುವಾಗಲೇ ಅಂತಹ ಉನ್ನತ ಗೌರವ ಸಲ್ಲಿಸಿದ್ದರೆ ಚೆನ್ನಾಗಿರುತ್ತಿತ್ತು. ಭಾರತ ರತ್ನ ಸಿಗಲಿ ಬಿಡಲಿ ಅವರು ಎಂದೆಂದಿಗೂ ಭಾರತ 'ರತನ್'

–ರಾಘವೇಂದ್ರ ಜೋಯಿಸ್, ಮೈಸೂರು

ಐದು ರೂ. ಅಂಚೆ ಕವರ್ ಸಿಗುವ ವ್ಯವಸ್ಥೆ ಮಾಡಿ

ಮಾನ್ಯರೆ,

ಅಂಚೆ ಕಚೇರಿಯಲ್ಲಿ ಸುಮಾರು ಮೂರು, ನಾಲ್ಕು ತಿಂಗಳಿಂದ ಐದು ರೂಪಾಯಿಗೆ ಸಿಗುತ್ತಿದ್ದ ಅಂಚೆ ಕಚೇರಿಯ ಕವರ್‌ಗಳು ಸಿಗುತ್ತಿಲ್ಲ. ಪೋಸ್ಟ್ ಮಾಸ್ಟರ್ ಅನ್ನು ವಿಚಾರಿಸಿದಾಗ ಸ್ಟಾಕ್ ಇಲ್ಲವೆಂದೂ, ಮುದ್ರಣಗೊಳ್ಳುತ್ತಿಲ್ಲವೆಂದು ಹೇಳುತ್ತಿದ್ದಾರೆ. ಇದರಿಂದ ಸಾರ್ವಜನಿಕರಿಗೆ ಅಲ್ಲದೆ ಲೇಖಕರಿಗೆ, ಕತೆ, ಕವನ ಬರೆಯುವವರಿಗೆ ನೇರ ಪತ್ರ ವ್ಯವಹಾರಕ್ಕೆ ತೊಂದರೆಯಾಗುತ್ತಿದೆ. ಚೀಟಿ ಅಂಟಿಸದ ಕವರ್‌ಗಳನ್ನು ಕೊಳ್ಳಲು ಹೆಚ್ಚಿನ ಹಣ ಖರ್ಚಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಅಂಚೆ ಇಲಾಖೆ ಈ ಕೂಡಲೇ ಐದು ರೂಪಾಯಿ ಕವರ್‌ಗಳನ್ನು ಮುದ್ರಿಸಿ, ಅಂಚೆ ಕಚೇರಿಯಲ್ಲಿ ಸಿಗುವ ವ್ಯವಸ್ಥೆ ಮಾಡಿಕೊಟ್ಟರೆ ಜನರಿಗೆ ಉಪಕಾರವಾಗುತ್ತದೆ.

– ಆನಂದರಾವ್, ಮೈಸೂರು.

ಕಡಿಮೆಯಾಗದ ಏಕೋಪಯೋಗಿ ಬಳಕೆಯ ಪ್ಲಾಸ್ಟಿಕ್

ಮಾನ್ಯರೆ,



ಮೈಸೂರು ನಗರಪಾಲಿಕೆಯ ಕಣ್ಣಿಗೆ ಬೀಳದ ಏಕಬಳಕೆಯ ಪ್ಲಾಸ್ಟಿಕ್‌ನಿಂದಾಗಿ ಮಾರಣಾಂತಿಕ ಕ್ಯಾನ್ಸರ್‌ಗೆ ಜನ–ದನಗಳು ಗುರಿಯಾಗುತ್ತದೆಂದು ಗೊತ್ತಿದ್ದರೂ ದೇವರಾಜ ಮಾರುಕಟ್ಟೆಯೂ ಸೇರಿದಂತೆ ಮೈಸೂರು ನಗರದ ಹಲವು ಭಾಗಗಳಲ್ಲಿ ಏಕಬಳಕೆಯ ಪ್ಲಾಸ್ಟಿಕ್ ಕವರುಗಳ ಬಳಕೆ ಆತಂಕ ಹುಟ್ಟಿಸುತ್ತಿದೆ. ಈ ಚಿತ್ರವನ್ನು ಇತ್ತೀಚೆಗೆ ದೇವರಾಜ ಮಾರುಕಟ್ಟೆಯ ಬಳಿ ತೆಗೆಯಲಾಗಿದ್ದು, ಪಾಲಿಕೆಯ ಅಧಿಕಾರಿಗಳು ಕೇವಲ ಕಣ್ಣೊರೆಸುವ ಧಾಳಿಯ ನಾಟಕ ಮಾಡದೇ ಈ ಬಗ್ಗೆ ಸತತ ಕ್ರಮವನ್ನು ಕೈಗೊಳ್ಳಬೇಕು. ಪಾಲಿಕೆಯ ಅಧಿಕಾರಿಗಳು ಸಾಕಷ್ಟು ಪ್ಲಾಸ್ಟಿಕ್ ಚೀಲಗಳನ್ನು ವಶಪಡಿಸಿಕೊಂಡಿದ್ದರೂ ಈ ಚೀಲಗಳು ಎಲ್ಲಿಂದ ಬರುತ್ತಿವೆ ಎನ್ನುವುದನ್ನು ಪತ್ತೆ ಹಚ್ಚಿ ಅಗತ್ಯ ಕ್ರಮಕ್ಕೆ ಮುಂದಾಗಬೇಕು. –ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕ, ಮೈಸೂರು.

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಅರ್ಹರಿಗಿರಲಿ!

ಮಾನ್ಯರೆ,

ರಾಜ್ಯ ಸರ್ಕಾರ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಪ್ರತಿವರ್ಷ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ. ರಾಜ್ಯ ಸರ್ಕಾರವು ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ನೀಡುವ ಪ್ರಶಸ್ತಿಯಾದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯು ಅತ್ಯಂತ ಮಹತ್ವದ್ದಾಗಿದೆ. ಈ ಪ್ರಶಸ್ತಿ ಪುರಸ್ಕಾರಗಳು ಸಾಧಕರಿಗೆ, ಕಲಾವಿದರಿಗೆ, ಸಾಹಿತಿಗಳಿಗೆ, ಸಮಾಜ ಸೇವಕರಿಗೆ ಹಾಗೂ ಇನ್ನಿತರ ಕ್ಷೇತ್ರದ ಸಾಧಕರಿಗೆ ಮತ್ತಷ್ಟು ಕಾರ್ಯ ಸಾಧನೆ ಕೆಲಸ ಮಾಡಲು ಹುರುಪು, ಸ್ಫೂರ್ತಿ ನೀಡುತ್ತವೆ. ರಾಜ್ಯ ಸರ್ಕಾರ ಈ ಬಾರಿಯ 2024ರ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳಿಗಾಗಿ ಆಯ್ಕೆ ಸಮಿತಿಗಳನ್ನು ಈಗಾಗಲೇ ಪ್ರಕಟಿಸಿದ್ದು, ಇದರಲ್ಲಿ ಸಾಹಿತ್ಯ, ವೈದ್ಯಕೀಯ, ಕಾನೂನು, ಆಡಳಿತ, ಸಂಗೀತ, ರಂಗಭೂಮಿ, ನೃತ್ಯ, ಸಿನಿಮಾ, ಕಲೆ ಮತ್ತು ಪರಿಸರದಂತಹ ವಿವಿಧ ಕ್ಷೇತ್ರಗಳ ಸುಮಾರು 50 ತಜ್ಞರು ಈ ಪಟ್ಟಿಯಲ್ಲಿರುವುದು ವಿಶೇಷ.

ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಕನ್ನಡ ನಾಡುನುಡಿಗಾಗಿ ಸೇವೆ ಸಲ್ಲಿಸುತ್ತಿರುವ ಮಹನೀಯರನ್ನು ಆಯ್ಕೆ ಮಾಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಧಕರ ಆಯ್ಕೆಗೆ ಸಲಹಾ ಸಮಿತಿಯನ್ನು ರಚಿಸುವಾಗ ಯಾವುದೇ ರಾಜಕೀಯ ಪಕ್ಷದಡಿಯಲ್ಲಿ ದುಡಿಯುತ್ತಿರುವ ವ್ಯಕ್ತಿಯನ್ನು ಸದಸ್ಯರನ್ನಾಗಿ ಮಾಡದಿರುವುದು ಒಳಿತಾಗಿದೆ. ಪ್ರಶಸ್ತಿಗಾಗಿ ಲಾಬಿ ನಡೆಸುವವರ ಹೆಸರನ್ನು ಕೈಬಿಟ್ಟು ಅರ್ಹರಿಗಷ್ಟೆ ಪ್ರಶಸ್ತಿಯು ದೊರೆಯುವಂತೆ ನೋಡಿಕೊಳ್ಳಬೇಕಿದೆ. ಇದರಿಂದ ಕನ್ನಡ ನಾಡು ನುಡಿಗಾಗಿ ದುಡಿದು ದಣಿದ ಜೀವಗಳಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಮೈಸೂರು ನಗರ ಪಾಲಿಕೆ ಸ್ಪಷ್ಟೀಕರಣ

ಮಾನ್ಯರೆ,

'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಸೆ.24 ರಂದು ಪ್ರಕಟಗೊಂಡಿರುವ ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ವಾಯುವಿಹಾರಿಗಳಿಗೆ ಬೀದಿ ನಾಯಿಗಳ ಉಪಟಳ ವರದಿಗೆ ಸಂಬಂಧಿಸಿದಂತೆ ಮೈಸೂರು ಮಹಾನಗರ ಪಾಲಿಕೆ ಸ್ಪಷ್ಟೀಕರಣ.

ಮೈಸೂರು ಮಹಾನಗರ ಪಾಲಿಕೆಯಲ್ಲಿ ಒಂದು ಡಾಗ್ ಸ್ಕ್ವಾಡ್ ಇದ್ದು ಸಿಬ್ಬಂದಿಯು ಸೆ.24 ರಂದು ಕಾರ್ಯಾಚರಣೆ ನಡೆಸಿದ್ದಾರೆ. ಬಹುತೇಕ ಬೀದಿ ನಾಯಿಗಳು ಪ್ರಾಣಿ ಜನನ ನಿಯಂತ್ರಣ ಶಸ್ತ್ರಚಿಕಿತ್ಸೆಗೆ ಒಳಪಟ್ಟಿರುತ್ತವೆ ಹಾಗೂ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಡದ ನಾಯಿಗಳನ್ನು ಹಿಡಿದು ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಲು ಕ್ರಮವಹಿಸಲಾಗಿರುತ್ತದೆ. ಅನಿಮಲ್ ಬರ್ತ್ ಕಂಟ್ರೋಲ್ (ಡಾಗ್ಸ್) ರೂಲ್ಸ್ 2023ರ ಪ್ರಕಾರ ಬೀದಿ ನಾಯಿಗಳನ್ನು ಕೊಲ್ಲುವುದಾಗಲಿ ಅಥವಾ ಸ್ಥಳಾಂತರಿಸುವುದಾಗಲಿ ಕಾನೂನುಬಾಹಿರವಾಗಿರುತ್ತದೆ. ಆದುದರಿಂದ ನಗರ ಪಾಲಿಕೆಯು ಬೀದಿ ನಾಯಿಗಳ ಹಾವಳಿಯನ್ನು ನಿಯಂತ್ರಿಸಲು ರಾಷ್ಟ್ರ ವ್ಯಾಪ್ತಿ ಜಾರಿಯಲ್ಲಿರುವ ಪ್ರಾಣಿಜನನ ನಿಯಂತ್ರಣ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತದೆ.


– ಆರೋಗ್ಯಾಧಿಕಾರಿಗಳು, ಮೈಸೂರು ಮಹಾನಗರ ಪಾಲಿಕೆ ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ಮಹಾಕಾವ್ಯರ್ಷಿ 'ವಾಲ್ಮೀಕಿ'



> ತ್ರೇತಾಯುಗದ ಮಹಾ ಜ್ಞಾನಿಗಳು ವಾಲ್ಮೀಕಿ ಮಹಾಮುನಿಗಳು. ಇವರು ಬರೆದ ರಾಮಾಯಣ ಮಹಾಕಾವ್ಯವು ಮಾನವ ಕೋಟಿಗೆ ಮಹಾ ಮಾರ್ಗದರ್ಶನ.ತಮ್ಮ ಮಹತ್ಕೃತಿಯಂತೆಯೇ ಈ ಮಹರ್ಷಿಯ ಬದುಕು ಕೂಡ ಮಹಾ ರೋಚಕ, ಅಷ್ಟೇ ಬೋಧ ಪ್ರದಾಯಕ. ಒಂದು ರೀತಿ ಇವರೇ ಒಂದು ಜ್ಞಾನದ ಮಹಾ ಪಾಠಶಾಲೆ. ನಮ್ಮ ನೆಲದ ಸಿರಿ ಹಿರಿಮೆಯನ್ನು ಹೆಚ್ಚಿಸಿರುವ ಇಂತಹ ಮೇರು ಕೃತಿ ರಾಮಾಯಣವನ್ನು ರಚಿಸಿದ ವಾಲ್ಮೀಕಿ ಮಹರ್ಷಿಗಳು ಉತ್ತರ ರಾಮಾಯಣದಲ್ಲಿ ಸ್ವತಃ ತಾವೇ ಒಂದು ಪಾತ್ರವಾಗಿ ಬರುತ್ತಾರೆ. ಶ್ರೀರಾಮನು ತುಂಬು ಗರ್ಭಿಣಿಯಾದ ತನ್ನ ಮಡದಿ ಸೀತಾದೇವಿಯನ್ನು ವನವಾಸಕ್ಕೆ ಕಳುಹಿಸಿದಾಗ ಸೀತಾ ಮಾತೆಗೆ ಆಸರೆ ನೀಡುವವರು ವಾಲ್ಮೀಕಿ ಮುನಿಗಳೇ. ಮುಂದೆ ಸೀತಾಮಾತೆಗೆ ಅವಳಿ ಗಂಡು ಮಕ್ಕಳು ಜನಿಸಿದಾಗ ವಾಲ್ಮೀಕಿ ಮಹರ್ಷಿಗಳೇ ಆ ಮಕ್ಕಳಿಗೆ 'ಲವ' 'ಕುಶ' ಎಂದು ನಾಮಕರಣ ಮಾಡಿ ಅವರನ್ನು ಸಕಲಕಲಾ ವಿದ್ಯಾ ಪಾರಂಗತರನ್ನಾಗಿ ಮಾಡುತ್ತಾರೆ.

ಪಿತೃವಾಕ್ಯ ಪರಿಪಾಲನೆ ಎಂಬ ಮಾತು ಬಂದಾಗ ನಮಗೆ ತಕ್ಷಣ ರಾಮ ನೆನಪಿಗೆ ಬರುತ್ತಾನೆ. ತಂದೆ ದಶರಥ ಮಹಾರಾಜನ ಮಾತು ನಡೆಸಿ ಕೊಡಲು ರಾಜ್ಯ ಸೇರಿದಂತೆ ಸರ್ವಸ್ವವನ್ನೂ ತೊರೆದು ಕಾಡಿಗೆ ಹೊರಟ ಮರ್ಯಾದಾ ಪುರುಷೋತ್ತಮ ರಾಮನ ಕಥೆ ಯಾರಿಗೆ ತಾನೇ ತಿಳಿದಿಲ್ಲ. ಹಾಗೆಯೇ ಪತಿಯೇ ತನ್ನ ಪಾಲಿನ ಪರಮಾತ್ಮನೆಂದು ರಾಮನನ್ನು ಹಿಂಬಾಲಿಸಿದ ಪತ್ನಿ ಸೀತಾದೇವಿ, ಅಣ್ಣ–ಅತ್ತಿಗೆಗೆ ಸಂರಕ್ಷಕನಾಗಿ ಅವರ ಹೆಜ್ಜೆಗೆ ಹೆಜ್ಜೆ ಹಾಕಿದ ಸೋದರ ಲಕ್ಷ್ಮಣ, ಸಿಂಹಾಸನದಲ್ಲಿ ಅಣ್ಣನ ಪಾದುಕೆಗಳನ್ನೇ ಇಟ್ಟು ಅಣ್ಣನ ಹೆಸರಿನಲ್ಲೇ ರಾಜಾಳ್ವಿಕೆ ನಡೆಸುವ ಭ್ರಾತೃತ್ವಕ್ಕೊಂದು ಪರ್ಯಾಯ ಪದದಂತಿದ್ದ ತಮ್ಮ ಭರತ, ಕಾಡಿನಲ್ಲಿ ಸೀತೆಯನ್ನು ಕದ್ದೊಯ್ದ ರಾವಣಾಸುರ, ಸ್ವಾಮಿ ನಿಷ್ಠೆಯ ಭಕ್ತ ಹನುಮಂತನ ಲಂಕಾ ದಹನ, ಸೀತಾಮಾತೆಯನ್ನು ಬಂಧ ಮುಕ್ತಗೊಳಿಸಲು ಲಂಕೆಗೆ ಮುತ್ತಿಗೆ ಹಾಕಿದ ವಾನರ ಸೇನೆ, ಕೆಡುಕಿಗೆ ಬೆನ್ನು ತಿರುಗಿಸಿ ಒಳಿತಿಗೆ ಶರಣಾಗಿ ಸಹೋದರ ರಾವಣನನ್ನೇ ಬಿಟ್ಟು ಬಂದು ರಾಮನ ಬೆನ್ನಿಗೆ ನಿಲ್ಲುವ ವಿಭೀಷಣ, ಮಹಾ ಪತಿವ್ರತೆಯರ ಮಹಾ ಸಾಲಿನಲ್ಲಿ ನಿಲ್ಲುವ ರಾವಣನ ಸತಿ ಸಾಧ್ವಿ ಮಂಡೋದರಿ,ಲಂಕಾಧಿಪತಿ ರಾವಣನ ಸಂಹಾರ, ಸೀತಾಮಾತೆಯ ಬಿಡುಗಡೆ, ಮತ್ತೆ ಕಾಡಿನಲ್ಲಿ ಸೀತೆಯ ವನವಾಸ, ಕಾಡಿನಲ್ಲಿ ಲವ–ಕುಶರ ಜನನ.... ಹೀಗೆ ಈ ಎಲ್ಲಾ ಘಟನೆಗಳ, ಪಾತ್ರಗಳ ಹಿನ್ನೆಲೆಯಲ್ಲಿ ಬರುವ ಅನೇಕ ಕಥೆಗಳನ್ನು ಬಹುತೇಕ ಎಲ್ಲರೂ ಕೇಳಿಯೇ ಇರುತ್ತಾರೆ. ಓದಿಯೇ ತಿಳಿದಿರುತ್ತಾರೆ.

ಇವೆಲ್ಲವೂ, ನಮ್ಮ ಭಾರತೀಯ ಸಂಸ್ಕೃತಿಯ ತಾಯಿ ಬೇರಿನಂತಿರುವ ನಮ್ಮ ನೆಲದ ಆದಿ ಕಾವ್ಯ **'ರಾಮಾಯಣ'**ದಲ್ಲಿ ಕಾಣಬರುವ ಪಾತ್ರಗಳು. ಇದರ ಸೃಷ್ಟಿಕರ್ತರು ಅರ್ಥಾತ್ ರಚನೆಕಾರರು **'ವಾಲ್ಮೀಕಿ'** ಮಹರ್ಷಿಗಳು. ರಾಮಾಯಣದಂತಹ ಜೀವನ ಮೌಲ್ಯಗಳುಳ್ಳ ಮಹಾಕಾವ್ಯವನ್ನು ಕಟ್ಟಿಕೊಟ್ಟ ವಾಲ್ಮೀಕಿಯನ್ನು ನಮ್ಮ ಪರಂಪರೆ ಬಹಳ ಗೌರವದಿಂದ ನೆನೆಯುತ್ತದೆ. ವಾಲ್ಮೀಕಿ ರಾಮಾಯಣವು ಅನೇಕ ಕಾವ್ಯ, ಕಥೆ, ಪುರಾಣ, ಇತಿಹಾಸಗಳು ಸೇರಿದಂತೆ ಪ್ರತಿಯೊಂದಕ್ಕೂ ಮೂಲವಾಗಿದೆ.

ಮಹರ್ಷಿ ವಾಲ್ಮೀಕಿ ಕುರಿತಂತೆ ಅನೇಕ ಕಥೆಗಳು, ದಂತಕಥೆಗಳಿವೆ. ಇವುಗಳಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಒಂದು ಕಥೆಯ ಪ್ರಕಾರ ಈತ 'ಪ್ರಾಚೇತಸ' ಎಂಬ ಋಷಿಯ ಮಗ. ಈತನಿಗೆ 'ರೂಕ್ಷ' 'ರತ್ನ' ಎಂಬ ಹೆಸರುಗಳ ಜೊತೆಗೆ ಪ್ರಾಚೇತಸ ಮುನಿಯ ಪುತ್ರನಾಗಿದ್ದರಿಂದ 'ಪ್ರಾಚೇತಸ' ಎನ್ನುವ ಹೆಸರುಗಳು ಇದ್ದವು. ಬಾಲ್ಯದಿಂದಲೂ ರೂಕ್ಷನಿಗೆ ದುಷ್ಟರ ಸಹವಾಸವೇ ಹೆಚ್ಚಾಗಿತ್ತು. ಹಾಗಾಗಿ ಬೆಳೆಯುತ್ತಾ ಹೋದಂತೆ ರೂಕ್ಷನಿಗೆ ದುಷ್ಟಬುದ್ಧಿಯೂ ಬೆಳೆದು ಇದರ ಪರಿಣಾಮ ದೊಡ್ಡ ಡಕಾಯಿತನಾದ. ಮದುವೆಯಾಗಿ ಆತ ಸಂಸಾರಸ್ತನಾದ ಮೇಲೂ ದರೋಡೆಯನ್ನು ಬಿಡಲಿಲ್ಲ. ಬದಲಿಗೆ ತನ್ನ ಕುಟುಂಬವನ್ನು ಸಾಕಲು ಡಕಾಯಿತಿಯನ್ನೇ ಕಸುಬು ಮಾಡಿಕೊಂಡ. ದರೋಡೆ ಮಾಡಿಯೇ ಹೆಂಡತಿ ಮಕ್ಕಳನ್ನು ಸಾಕುತ್ತಿದ್ದ. ಕಾಡಿನ ಹಾದಿಯಲ್ಲಿ ಪ್ರಯಾಣಿಸುತ್ತಿದ್ದವರನ್ನು ಅಡ್ಡಗಟ್ಟಿ ಹೊಡೆದು ಬಡಿದು ಅವರಲ್ಲಿದ್ದ ಧನ–ಕನಕಗಳನ್ನು ಲೂಟಿ ಮಾಡುತ್ತಿದ್ದ. ಒಮ್ಮೆ ನಾರದ ಮುನಿಗಳು ಮತ್ತು ಸಪ್ತ ಋಷಿಗಳು ರೂಕ್ಷನಿದ್ದ ಆ ಕಾಡು ಹಾದಿಯಲ್ಲಿ ಬಂದರು. ಆದರೆ ಅವರನ್ನೂ ಬಿಡದೆ ಅಡ್ಡ ಹಾಕಿ ಅವರ ಮೇಲೆರಗಿದ ರೂಕ್ಷನು 'ನಿಮ್ಮ ಬಳಿ ಇರುವುದೆಲ್ಲವನ್ನು ನನಗೆ ಕೊಟ್ಟುಬಿಡಿ. ಇಲ್ಲವೆಂದರೆ ಯಾರನ್ನೂ ನಾನು ಜೀವಂತವಾಗಿ ಬಿಡುವುದಿಲ್ಲ' ಎಂದು ಅಬ್ಬರಿಸಿದ. ಆಗ ನಾರದ ಮುನಿಗಳು ಶಾಂತಚಿತ್ತದಿಂದಲೇ ತಡೆದು 'ನೋಡಪ್ಪ ರೂಕ್ಷ, ನಮ್ಮ ಹತ್ತಿರ ಕಮಂಡಲ ಬಿಟ್ಟರೆ ಬೇರೇನೂ ಇಲ್ಲ. ಬೇಕಾದರೆ ಇದೆಲ್ಲವನ್ನು ನೀನೇ ತೆಗೆದುಕೊಳ್ಳುವೆಯಂತೆ. ಆದರೆ ಅದಕ್ಕೂ ಮುಂಚೆ ನೀನೇಕೆ ದರೋಡೆಯಂತಹ ಕಳ್ಳತನದ ದಾರಿ ಹಿಡಿದಿರುವೆ ಎಂಬುದನ್ನು ಹೇಳು' ಎಂದರು.

ಆಗ ತಕ್ಷಣವೇ ರೂಕ್ಷನು ಹಿಂದೆ ಮುಂದೆ ಕಿಂಚಿತ್ತೂ ಯೋಚಿಸದೆ 'ನನ್ನ ಹೆಂಡತಿ ಮಕ್ಕಳನ್ನು ಸಾಕುವುದಕ್ಕಾಗಿ' ಎಂದ. ಅವನ ಮಾತಿಗೆ ಮುಗುಳ್ನಕ್ಕ ನಾರದ ಮುನಿಗಳು 'ಹೌದಾ, ಹಾಗಾದರೆ ಎಲ್ಲರನ್ನೂ ಗೋಳು ಹುಯ್ದುಕೊಂಡು ಹಿಂಸಿಸುವ ನೀನು ಮಾಡುವ ಪಾಪ ಕಾರ್ಯದಲ್ಲಿ ನಿನ್ನ ಹೆಂಡತಿ–ಮಕ್ಕಳು ಪಾಲು ತೆಗೆದುಕೊಳ್ಳುತ್ತಾರೆಯೇ? ಮೊದಲು ಹೋಗಿ ಅವರನ್ನು ಕೇಳಿಕೊಂಡು ಬಾ' ಎಂದರು. ಕೂಡಲೇ ರೂಕ್ಷನು ತನ್ನ ಮನೆಯತ್ತ ಬಿರಬಿರನೆ ನಡೆದು ನಾರದರು ಕೇಳಿದಂತೆ ಅದೇ ಪ್ರಶ್ನೆಯನ್ನು ಹೆಂಡತಿ–ಮಕ್ಕಳಲ್ಲಿ ಕೇಳಿದ. ಆಗ ಅವರು 'ನಮ್ಮನ್ನು ಸಾಕೋದು ನಿನ್ನ ಕರ್ತವ್ಯ. ಇದಕ್ಕಾಗಿ ದರೋಡೆಯಂತಹ ಪಾಪ ಕೃತ್ಯಗಳನ್ನು ಮಾಡಲು ನಾವ್ಯಾರೂ ನಿನಗೆ ಹೇಳಿಲ್ಲ. ಹಾಗಾಗಿ ನಿನ್ನ ಪಾಪ ಕಾರ್ಯಕ್ಕೆ ನೀನೇ ಹೊಣೆ. ಅದರಲ್ಲಿ ಪಾಲು ತೆಗೆದುಕೊಳ್ಳಲು ನಾವ್ಯಾರೂ ಸಿದ್ದರಿಲ್ಲ' ಎಂದು ನಿರ್ದಾಕ್ಷಿಣ್ಯವಾಗಿ ಹೇಳಿಬಿಟ್ಟರು. ಆಗ ರೂಕ್ಷನಿಗೆ ತನ್ನ ತಪ್ಪಿನ ಅರಿವಾಗಿ, ಜ್ಞಾನೋದಯವಾಯಿತು. ಕೂಡಲೇ ನಾರದ ಮುನಿಯತ್ತ ಓಡೋಡಿ ಬಂದ ಅವನು ತನಗೆ ಮೋಕ್ಷ ಕರುಣಿಸುವಂತೆ ಬೇಡಿಕೊಂಡ. ಅದಕ್ಕೆ ನಾರದ ಮುನಿಗಳು ಈ ಸಪ್ತ ಋಷಿಗಳ ಜೊತೆಯಲ್ಲಿ ಮತ್ತೆ ನಾನು ಇದೇ ಸ್ಥಳಕ್ಕೆ ಮರಳಿ ಬರುವ ತನಕ ನೀನು ಇದೇ ಸ್ಥಳದಲ್ಲಿ ಇದ್ದು 'ರಾಮ ನಾಮ' ಜಪಿಸುತ್ತಿರು ಎನ್ನುತ್ತಾರೆ.

ಆದರೆ ಎಷ್ಟು ಪ್ರಯತ್ನಿಸಿದರು ರೂಕ್ಷನ ಬಾಯಲ್ಲಿ ರಾಮನಾಮ ಬರುವುದೇ ಇಲ್ಲ. ಸದಾ ಬೊಬ್ಬಿರಿಯುತ್ತಿದ್ದ ಅವನ ನಾಲಿಗೆಯಿಂದ 'ರಾಮ' ಎನ್ನುವ ಪವಿತ್ರ ಶಬ್ದ ಹೊರಡಲು ಬಹಳ ಕಷ್ಟವಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ನಾರದರು ರೂಕ್ಷನನ್ನು ಉದ್ದೇಶಿಸಿ "ಅಲ್ಲಿ ನೋಡು ರೂಕ್ಷ ಮರಗಳಿವೆಯಲ್ಲ. ನೀನು ಆ ಮರ ಆ ಮರ ಎಂದು ಹೇಳು" ಎಂದರು. ಅದರಂತೆ ರೂಕ್ಷನು 'ಆ ಮರ ಆ ಮರ' ಎಂದು ಹೇಳುವುದನ್ನು ಕಲಿತು ಅದನ್ನೇ ಮತ್ತೆ ಮತ್ತೆ ಹೇಳುತ್ತಾ ಹೋದ. ಹಾಗೆಯೇ 'ಮರಾ ಮರಾ ಮರಾ' ಎಂದು ಹಾಗೆಯೇ ರಾಮ ನಾಮವನ್ನು ಒಂದೇ ಸಮನೆ ಜಪಿಸತೊಡಗಿದ. ಇದು ನಿರಂತರವಾಗಿ ಸಾಗಿತು. ಹೀಗೆ ಮೈಮರೆತು ಧ್ಯಾನಸ್ಥನಾಗಿ ಅದೆಷ್ಟೋ ವರ್ಷಗಳ ಕಾಲ ರೂಕ್ಷನು ರಾಮನಾಮ ಜಪಿಸುತ್ತಿದ್ದಾಗ ಅವನ ಸುತ್ತ ಬೃಹದಾಕಾರವಾಗಿ ಹಾವಿನ ಹುತ್ತ ಬೆಳೆಯಿತು.ರೂಕ್ಷನು ಹುತ್ತ ದೊಳಗೆ ಸೇರಿ ಮರೆಯಾಗಿ ಹೋದ. ಹೀಗಾಗಿ ಅವನು ಅಲ್ಲಿ ಕಾಣಿಸದಿದ್ದರೂ ಹುತ್ತದೊಳಗಿನಿಂದ ಅವನು ಹೇಳುತ್ತಿದ್ದ ರಾಮ ನಾಮ ಬಹು ದೊಡ್ಡದಾಗಿ ಕೇಳುತ್ತಲೇ ಇತ್ತು. ಅನೇಕ ವರ್ಷಗಳ ನಂತರ ನಾರದ ಮುನಿಗಳ ಜೊತೆಯಲ್ಲಿ ಸಪ್ತ ಋಷಿಗಳು ಅದೇ ದಾರಿಯಲ್ಲಿ ಹಿಂದಿರುಗಿ ಬಂದರು. ರಾಮನಾಮ ಜಪದಲ್ಲಿ ಮುಳುಗಿ ಹೋಗಿದ್ದ ರೂಕ್ಷನನ್ನು ಪ್ರೀತಿಯಿಂದ ಕೂಗಿ ಕರೆದರು.ಅವರ ದನಿಯನ್ನು ಕೇಳಿದೊಡನೆ ರೂಕ್ಷ ಹುತ್ತವನ್ನು ಭೇದಿಸಿಕೊಂಡು ಹೊರಬಂದ. ಸಂಸ್ಕೃತದಲ್ಲಿ ಹುತ್ತವನ್ನು 'ವಲ್ಮೀಕ' ಎನ್ನುತ್ತಾರೆ. ಆದ್ದರಿಂದ ಹುತ್ತವನ್ನು ಭೇದಿಸಿಕೊಂಡು ಹೊರಬಂದ ರೂಕ್ಷನು ಅಂದಿನಿಂದ ಮಹರ್ಷಿಯಾಗಿ 'ವಾಲ್ಮೀಕಿ'ಎಂದು ಕರೆಯಲ್ಪಟ್ಟನು.

ಅಕ್ಟೋಬರ್ 17ರಂದು ವಾಲ್ಮೀಕಿ ಜಯಂತಿ ತನ್ನಿಮಿತ್ತ ಈ ಲೇಖನ.

ಆ ನಂತರ ವಾಲ್ಮೀಕಿ ಮಹರ್ಷಿಯು ತಮಸಾ ನದಿ ತೀರದಲ್ಲಿ ಆಶ್ರಮವೊಂದನ್ನು ಕಟ್ಟಿಕೊಂಡು ಸನ್ಯಾಸಿ ಜೀವನ ನಡೆಸತೊಡಗಿದರು. ಒಮ್ಮೆ ಸ್ನಾನಕ್ಕೆಂದು ಹೋದ ವಾಲ್ಮೀಕಿ ಮಹರ್ಷಿಯು ಆಕಾಶದಲ್ಲಿ ಸರಸ ಸಲ್ಲಾಪದಲ್ಲಿದ್ದ ಕ್ರೌಂಚ ಪಕ್ಷಿಗಳನ್ನು ಕುತೂಹಲದಿಂದ ವೀಕ್ಷಿಸುತ್ತಿದ್ದರು.ಇದ್ದಕ್ಕಿದ್ದಂತೆ ಆಗ ಬೇಡನೊಬ್ಬ ಬಂದು ಬಾಣ ಬಿಟ್ಟು ಗಂಡು ಹಕ್ಕಿಯನ್ನು ಕೊಲ್ಲಲು ಅದರ ಸಂಗಾತಿ ಹೆಣ್ಣು ಹಕ್ಕಿಯು ಸಂಕಟದಿಂದ ಚೀರಲಾರಂಭಿಸಿತು. ಈ ಹೃದಯವಿದ್ರಾವಕ ಘಟನೆಯನ್ನು ಕಂಡು ವಾಲ್ಮೀಕಿ ಮಹರ್ಷಿ ಕೋಪದಿಂದ ಕುದಿಯುತ್ತಾರೆ.

'ಮಾ ನಿಷಾದ ಪ್ರತಿಷ್ಠಾಮ್
ತ್ವಮಗಮ:ಶಾಸ್ವತೀ:ಸಮಾ:
ಯತ್ಕ್ರೌಂಚ ಮಿಥುನಾದೇಕ
ಮವಧೀ:ಕಾಮಮೋಹಿತಮ್'

ಇದೇ 'ರಾಮಾಯಣ' ಮಹಾ ಕಾವ್ಯ ರಚನೆಗೆ ಪ್ರೇರಣೆಯಾದ ಸನ್ನಿವೇಶ. ಆ ಸಂದರ್ಭದಲ್ಲಿ ವಾಲ್ಮೀಕಿಯಿಂದ ಹೊರಹೊಮ್ಮಿದ ಮಾತುಗಳಿವು 'ಅಕಾರಣಕ್ಕಾಗಿ ಹಕ್ಕಿಯನ್ನು ಕೊಂದ ಹೇ ಅನ್ಯಾಯಿ, ನಿನ್ನ ಪಾಪದ ಫಲವಾಗಿ ನೀ ಈ ಕೂಡಲೇ ಸಾಯಿ' ಎಂದು ವಾಲ್ಮೀಕಿ ಮಹರ್ಷಿಯು ಆ ಬೇಡನಿಗೆ ಶಾಪವಿತ್ತರು. ಈ ಕರುಣಾಜನಕ ಶ್ಲೋಕವು ಸಾಮಾನ್ಯ ಗದ್ಯ ರೂಪದಲ್ಲಿರದೆ ಪ್ರಾಸಬದ್ಧವಾಗಿ ಲಯ ಮತ್ತು ಛಂದಸ್ಸುಗಳನ್ನೊಳಗೊಂಡು ಕಾವ್ಯಾತ್ಮಕವಾಗಿತ್ತು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಬ್ರಹ್ಮದೇವ ನೇರವಾಗಿ ವಾಲ್ಮೀಕಿ ಮಹರ್ಷಿಗಳ ಬಳಿ ಬಂದು ಇದೇ ಶ್ಲೋಕ ರೂಪದಲ್ಲಿ 'ರಾಮಾಯಣ' ಮಹಾ ಕಾವ್ಯವನ್ನು ರಚಿಸುವಂತೆ ಕೇಳಿಕೊಂಡರು. ಅದರಂತೆ ವಾಲ್ಮೀಕಿ ಮಹರ್ಷಿಗಳು 24,000 ಶ್ಲೋಕಗಳುಳ್ಳ ಬೃಹತ್ ರಾಮಾಯಣ ಮಹಾ ಕಾವ್ಯವನ್ನು ಬರೆದರು. ಈ ರಾಮಾಯಣ ಮಹಾಕಾವ್ಯವು ಬಾಲಕಾಂಡ, ಅಯೋಧ್ಯಾಕಾಂಡ, ಕಿಷ್ಕಿಂದಾ ಕಾಂಡ, ಅರಣ್ಯಕಾಂಡ, ಸುಂದರಕಾಂಡ, ಯುದ್ಧಕಾಂಡ ಮತ್ತು ಉತ್ತರಕಾಂಡ ಹೀಗೆ ಏಳು ಕಾಂಡಗಳಲ್ಲಿ ರಚಿಸಲ್ಪಟ್ಟಿದೆ. ಪ್ರಾಚೀನ ಭಾರತದ ಪ್ರಮುಖ ಸಾಹಿತ್ಯಕ ಮೇರು ಕೃತಿಗಳಲೊಂದಾದ ರಾಮಾಯಣ ಮಹಾ ಕಾವ್ಯವು ಶ್ರೀ ರಾಮನ ಕಥೆಯ ಮೂಲಕ ಬಹು ಮೌಲಿಕವಾದ ನೈತಿಕ ಜೀವನ ಪಾಠವನ್ನು ವಾಲ್ಮೀಕಿ ಮಹರ್ಷಿಗಳು ಹೇಳಿದ್ದಾರೆ.

ಬೇಡನಾಗಿ ಹುಟ್ಟಿದರೂ, ದರೋಡೆಕೋರನಾದರೂ, ಪರಿವರ್ತನೆಯ ಕುಲುಮೆಯಲ್ಲಿ ಉರಿದು ಜ್ಞಾನದಗ್ನಿಯಲ್ಲಿ ಮಿಂದೆದ್ದು ತಮ್ಮ ಜ್ಞಾನಾಸ್ತ್ರದಿಂದ ಜಗತ್ತನ್ನೇ ಗೆದ್ದು ಮಹರ್ಷಿಯ ಪಟ್ಟಕ್ಕೇರಿ ರಾಮಾಯಣ ಮಹಾಕಾವ್ಯದ ಮೂಲಕ ಆದಿಕವಿಯಾಗಿ ಇಡೀ ಜಗತ್ತಿಗೆ ಸುಜ್ಞಾನದ ಮಹಾ ಬೆಳಕು ಸುರಿದ ಮಹಾಮುನಿ ವಾಲ್ಮೀಕಿ ಎಂದರೆ ಯಾವತ್ತೂ ಅದು ಕೇವಲ ಒಂದೆಸರೆನಿಸದೆ ಭರತ ಭೂಮಿಯ ಸುಸಂಸ್ಕೃತಿಯ ಒಂದು ಭವ್ಯ ಸಂಪತ್ತೆನಿಸುತ್ತದೆ. ದಿವ್ಯ ಸಂಪತ್ತು ಕೂಡ ಹೌದು. ವಾಲ್ಮೀಕಿ ಮಹರ್ಷಿಗಳು ಮಹಾಕಾವ್ಯವನ್ನಷ್ಟೇ ಬರೆಯಲಿಲ್ಲ.ಅವರೇ ಒಂದು ಮಹಾಕಾವ್ಯವಾಗಿ ಈ ನೆಲದ ಸಂಸ್ಕೃತಿಯಲ್ಲಿ ನೆಲೆಸಿದ್ದಾರೆ. ಅದರಲ್ಲೂ ವಿಶೇಷವಾಗಿ ಶೂದ್ರ ವರ್ಗದಲ್ಲಿ ಅರಳಿದ ಮಹಾ ಕಾವ್ಯ ಪುಷ್ಪವಾಗಿ ಭುವಿಯಗಲಕೂ ಬಾನೆತ್ತರಕೂ ಘಮಘಮಿಸುತ್ತಿದ್ದಾರೆ. ಇದು ಎಂದೂ ಬಾಡದ ದೇವ ಕುಸುಮ ಇದಕ್ಕಿಲ್ಲ ಯಾವುದೂ ಸರಿಸಮ!

'ಕೂಜಂತಂ ರಾಮ ರಾಮೇತಿ
ಮಧುರ ಮಧುರಾಕ್ಷರಮ್
ಆರುಹ್ಯ ಕವಿತಾ ಶಾಖಾಮ್
ವಂದೇವಾಲ್ಮೀಕಿಕೋಕಿಲಮ್'

ಕಾವ್ಯವೆಂಬ ಮರದ ಮೇಲೆ ಕುಳಿತು "ರಾಮ ರಾಮಾ"ಎಂದು ಹಾಡುತ್ತಿರುವ ವಾಲ್ಮೀಕಿ ಎಂಬ ಕೋಗಿಲೆಗೆ ವಂದನೆ ಎಂಬುದು ಇದರರ್ಥ. ವಾಲ್ಮೀಕಿ ಮಹರ್ಷಿಯನ್ನು ಕೊಂಡಾಡುವ ಈ ಶ್ಲೋಕವು ಬುಧ ಕೌಶಿಕ ಋಷಿಯು ಬರೆದಿರುವ ಶ್ರೀರಾಮ ರಕ್ಷಾ ಸ್ತೋತ್ರದಲ್ಲಿದೆ. ಪ್ರಪಂಚದಲ್ಲೇ ಬಹಳ ಪ್ರಾಚೀನ ಮಹಾ ಕಾವ್ಯವೆಂದು ಹೇಳಲಾಗುವ ರಾಮಾಯಣ ಮಹಾಕಾವ್ಯದ ಕರ್ತೃ ವಾಲ್ಮೀಕಿ ಮಹರ್ಷಿಗಳ ಬಗ್ಗೆ ಈ ಶ್ಲೋಕವು ವರ್ಣಿಸುತ್ತದೆ.ಇದು ಅತ್ಯಂತ ಸರಳವೂ,ಸುಲಲಿತವೂ, ಸುಂದರವೂ ಆಗಿದೆ.

ತ್ರೇತಾಯುಗದ ಮಹಾ ಜ್ಞಾನಿಗಳು ವಾಲ್ಮೀಕಿ ಮಹಾಮುನಿಗಳು. ಇವರು ಬರೆದ ರಾಮಾಯಣ ಮಹಾಕಾವ್ಯವು ಮಾನವ ಕೋಟಿಗೆ ಮಹಾ ಮಾರ್ಗದರ್ಶನ. ತಮ್ಮ ಮಹತ್ಕೃತಿಯಂತೆಯೇ ಈ ಮಹರ್ಷಿಯ ಬದುಕು ಕೂಡ ಮಹಾ ರೋಚಕ, ಅಷ್ಟೇ ಬೋಧ ಪ್ರದಾಯಕ. ಒಂದು ರೀತಿ ಇವರೇ ಒಂದು ಜ್ಞಾನದ ಮಹಾ ಪಾಠಶಾಲೆ. ನಮ್ಮ ನೆಲದ ಸಿರಿ ಹಿರಿಮೆಯನ್ನು ಹೆಚ್ಚಿಸಿರುವ ಇಂತಹ ಮೇರು ಕೃತಿ ರಾಮಾಯಣವನ್ನು ರಚಿಸಿದ ವಾಲ್ಮೀಕಿ ಮಹರ್ಷಿಗಳು ಉತ್ತರ ರಾಮಾಯಣದಲ್ಲಿ ಸ್ವತಃ ತಾವೇ ಒಂದು ಪಾತ್ರವಾಗಿ ಬರುತ್ತಾರೆ. ಶ್ರೀರಾಮನು ತುಂಬು ಗರ್ಭಿಣಿಯಾದ ತನ್ನ ಮಡದಿ ಸೀತಾದೇವಿಯನ್ನು ವನವಾಸಕ್ಕೆ ಕಳುಹಿಸಿದಾಗ ಸೀತಾ ಮಾತೆಗೆ ಆಸರೆ ನೀಡುವವರು ವಾಲ್ಮೀಕಿ ಮುನಿಗಳೇ. ಮುಂದೆ ಸೀತಾಮಾತೆಗೆ ಅವಳಿ ಗಂಡು ಮಕ್ಕಳು ಜನಿಸಿದಾಗ ವಾಲ್ಮೀಕಿ ಮಹರ್ಷಿಗಳೇ ಆ ಮಕ್ಕಳಿಗೆ 'ಲವ' 'ಕುಶ' ಎಂದು ನಾಮಕರಣ ಮಾಡಿ ಅವರನ್ನು ಸಕಲಕಲಾ ವಿದ್ಯಾ ಪಾರಂಗತರನ್ನಾಗಿ ಮಾಡುತ್ತಾರೆ. ರಾಮನೇ ಕಥಾನಾಯಕ ಆಗಿರುವ ರಾಮಾಯಣ ಮಹಾಕಾವ್ಯವನ್ನು ಅವರಿಗೆ ಹೃನ್ಮನ ಮುಟ್ಟುವಂತೆ ಹೇಳಿಕೊಟ್ಟು ಅದನ್ನು ಸುಶ್ರಾವ್ಯವಾಗಿ ಗಾಯನ ಮಾಡುವುದನ್ನೂ ಕಲಿಸಿಕೊಡುತ್ತಾರೆ. ಶ್ರೀರಾಮನ ಅಶ್ವಮೇಧಯಾಗದ ಸಂದರ್ಭದಲ್ಲಿ ರಾಮನ ಮಕ್ಕಳಾದ ಲವ–ಕುಶರು ಶ್ರೀರಾಮ ಚರಿತೆಯನ್ನು ಹಾಡುವಂತೆ ಮಾಡುತ್ತಾರೆ. ನಂತರ ಸೀತಾಮಾತೆಯನ್ನು ಅವರ ಮಕ್ಕಳಾದ ಲವ–ಕುಶರೊಡನೆ ರಾಮನ ಅರಮನೆಗೆ ಕಳುಹಿಸಿ ಕೊಡುತ್ತಾರೆ.

ಜಾತಿಗಣತಿ ವರದಿ ಜಾರಿಗೆ ಶೋಷಿತ ಸಮುದಾಯಗಳ ಒಕ್ಕೂಟದ ಮನವಿ

ಮೈಸೂರು, ಅ.16(ಎಂಕೆ)– ರಾಜ್ಯದ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಸಮೀಕ್ಷೆ ಮಾಡಿರುವ ಜಾತಿ ಗಣತಿ ವರದಿ ಜಾರಿಗೊಳಿಸಲು ಒತ್ತಾಯಿಸಿ ಶೋಷಿತ ಸಮುದಾಯಗಳ ಒಕ್ಕೂಟದ ವತಿಯಿಂದ ಮೈಸೂರು ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ಅವರಿಗೆ ಬುಧವಾರ ಮನವಿ ಸಲ್ಲಿಸಲಾಯಿತು.



ಜಾತಿಗಣತಿ ವರದಿ ಜಾರಿಗೆ ಶೋಷಿತ ಸಮುದಾಯಗಳ ಒಕ್ಕೂಟದಿಂದ ಎಡಿಸಿಗೆ ಮನವಿ ಸಲ್ಲಿಸಲಾಯಿತು.


ಬಳಿಕ ಶೋಷಿತ ಸಮುದಾಯಗಳ ಒಕ್ಕೂಟದ ಮುಖಂಡ ಬಿ.ಸುಬ್ರಹ್ಮಣ್ಯ ಮಾತನಾಡಿ, ರಾಜ್ಯದ ಎಲ್ಲಾ ಜಾತಿಗಳ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಅಧ್ಯಯನ ನಡೆಸಿ ತಯಾರಿಸಲಾಗಿರುವ ಸಮೀಕ್ಷಾ ವರದಿಯನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ಮೀನಾಮೇಷ ಎಣಿಸುವ ಅಗತ್ಯವಿಲ್ಲ. ಸುಮಾರು 170 ಕೋಟಿ ರೂ. ಖರ್ಚು ಮಾಡಿ ತಯಾರಿಸಿರುವ ಈ ವರದಿಯು ತಕ್ಷಣ ಫಲಪ್ರದವಾಗಬೇಕಾದರೆ ಜಾತಿಗಣತಿ ವರದಿ ಜಾರಿಯಾಗಬೇಕು ಎಂದು ಒತ್ತಾಯಿಸಿದರು.

ರಾಜ್ಯದ ಜನಸಂಖ್ಯೆಗೆ ಅನುಗುಣವಾಗಿ ಅಹಿಂದ ವರ್ಗಗಳಿಗೆ ರಾಜಕೀಯ ಪ್ರಾತಿನಿಧ್ಯ, ಉದ್ಯೋಗಾವಕಾಶಗಳು ಮತ್ತು ವಿದ್ಯಾಭ್ಯಾಸದ ಅವಕಾಶಗಳು ದೊರೆಯುತ್ತಿಲ್ಲ. ಜಾತಿ ಜನಗಣತಿ ವರದಿ ಜಾರಿಯಾದರೆ ಜಾತಿಗಳ ವಸ್ತುಸ್ಥಿತಿ ತಿಳಿಯಲಿದೆ. ಅದಕ್ಕೆ ಪೂರಕವಾಗಿ ಸರ್ಕಾರಗಳು ಕಾರ್ಯಕ್ರಮಗಳನ್ನು ರೂಪಿಸಬಹುದಾಗಿದೆ. ಜಾತಿ ಜನಗಣತಿಯನ್ನು ಸರ್ಕಾರ ಒಪ್ಪಿಕೊಳ್ಳುವುದರಿಂದ ಎಲ್ಲಾ ಜಾತಿಗಳಿಗೂ ಒಂದಲ್ಲ ಒಂದು ರೀತಿಯಲ್ಲಿ ಅನುಕೂಲ ಆಗಲಿದೆ. ಹಾಗಾಗಿ ಎಲ್ಲಾ ಜಾತಿಗಳು ಕೂಡ ಜಾತಿ ಜನಗಣತಿ ವರದಿ ಜಾರಿಗೆ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ಮನವಿ ಮಾಡಿದರು.

ನಗರಪಾಲಿಕೆ ಮಾಜಿ ಸದಸ್ಯ ಗೋಪಿ, ವಕೀಲ ಪುಟ್ಟಸಿದ್ದೇಗೌಡ, ಮುಖಂಡ ವಿ.ರಾಮಸ್ವಾಮಿ, ಭೋವಿ ನಿಗಮ ಮಾಜಿ ಅಧ್ಯಕ್ಷ ಸೀತಾರಾಮ್, ಕುರುಬರ ಸಂಘದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ಎಸ್‌ಡಿಪಿಐ ಪುಟ್ಟನಂಜ, ತಾಲೂಕು ಕುರುಬರ ಸಂಘದ ಅಧ್ಯಕ್ಷರಾದ ಆನಂದ್, ಶಿವಣ್ಣ, ಸುನಿಲ್, ಬಸವರಾಜ್, ಕೆಂಪಣ್ಣ, ರಾಜ್ಯ ನಾಯಕರ ಸಂಘದ ಉಪಾಧ್ಯಕ್ಷ ಲೋಕೇಶ್, ಮುಖಂಡರಾದ ರವಿ, ಮೋಹನ್, ಅಪ್ಪುಗೌಡ, ಜವರೇಗೌಡ, ರಮೇಶ, ಶಿವಕುಮಾರ್ ಮತ್ತಿತರರಿದ್ದರು.

ಎಂಆರ್‌ಸಿ ಅಧ್ಯಕ್ಷ ಸ್ಥಾನಕ್ಕೆ ಚಂದ್ರೇಗೌಡ ರಾಜೀನಾಮೆ

ಮೈಸೂರು, ಅ.16– ಮೈಸೂರು ರೇಸ್ ಕೋರ್ಸ್ (ಎಂಆರ್‌ಸಿ) ಅಧ್ಯಕ್ಷರಾಗಿದ್ದ ಕೆ.ಎಂ. ಚಂದ್ರೇಗೌಡ ಇಂದು ದಿಢೀರ್ ರಾಜೀನಾಮೆ ನೀಡಿದ್ದಾರೆ.



ವೈಯಕ್ತಿಕ ಕಾರಣದಿಂದ ತಾವು ರಾಜೀನಾಮೆ ನೀಡಿರುವುದಾಗಿ ಅವರು ತಿಳಿಸಿದ್ದಾರೆ. ಅವರ ಈ ರಾಜೀನಾಮೆ ಭಾರೀ ಚರ್ಚೆಗೆ ಗ್ರಾಸವಾಗಿದೆ. ಎಂಆರ್‌ಸಿ ಅಧ್ಯಕ್ಷರಾಗಿ ಹಲವು ಕಟ್ಟುನಿಟ್ಟಿನ ಕ್ರಮಗಳನ್ನು ಚಂದ್ರೇಗೌಡರು ಕೈಗೊಂಡಿದ್ದರೆಂದು ಹೇಳಲಾಗಿದೆ. ಅಲ್ಲದೆ, ಇತ್ತೀಚೆಗೆ ಜಪಾನ್ ಹಾಗೂ ಫ್ರಾನ್ಸ್‌ಗೆ ಭೇಟಿ ನೀಡಿದ್ದರು. ಎಂಆರ್‌ಸಿಯಲ್ಲಿ ಸುಧಾರಣೆ ತರುವ ಇರಾದೆಯನ್ನು ಹೊಂದಿದ್ದರು. ಆದರೆ ಇಂದು ಇದ್ದಕ್ಕಿದ್ದಂತೆ ಅವರು ರಾಜೀನಾಮೆ ನೀಡಿರುವುದು ಅಚ್ಚರಿ ಮೂಡಿಸಿದೆ. ಈ ಮಧ್ಯೆ ನಿನ್ನೆ ನಡೆದ ಎಂಆರ್‌ಸಿ ವಾರ್ಷಿಕ ಮಹಾಸಭೆಯಲ್ಲಿ ನಡೆಯಬೇಕಿದ್ದ ಪದಾಧಿಕಾರಿಗಳ ಚುನಾವಣೆಯನ್ನು ಮುಂದೂಡಲಾಗಿತ್ತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಸಿಎಂ,ಡಿಸಿಎಂ ಜೊತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಸಭೆ; ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸ



ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಬುಧವಾರ ಮಹತ್ವದ ಚರ್ಚೆ ನಡೆಸಿದರು.

ಬೆಂಗಳೂರು, ಅ.16– ಈ ಹಿಂದೆ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿಯಾಗಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಬೆಂಗಳೂರಿಗೆ ಆಗಮಿಸಿದ್ದು, ಕಾಂಗ್ರೆಸ್ ವಲಯದಲ್ಲಿ ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಎಫ್‌ಐಆರ್ ದಾಖಲಾದ ನಂತರ ನಡೆದ ಹರಿಯಾಣ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಕರ್ನಾಟಕದ ಮುಡಾ ಹಗರಣವನ್ನು ಪ್ರಸ್ತಾಪಿಸಿದ್ದರು. ಇದು ಕೂಡಾ ಹರಿಯಾಣದಲ್ಲಿ ಕಾಂಗ್ರೆಸ್ ಸೋಲಿಗೆ ಕಾರಣವಾಯಿತೆಂಬ ಚರ್ಚೆಗಳು ಮುನ್ನೆಲೆಗೆ ಬಂದಿತ್ತು ಆದರೂ ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಇಲ್ಲ ಎಂದೇ ರಾಜ್ಯ ಹಾಗೂ ರಾಷ್ಟ್ರೀಯ ಕಾಂಗ್ರೆಸ್ ಮುಖಂಡರು ಹೇಳುತ್ತಲೇ ಬಂದಿದ್ದಾರೆ.

ಈ ನಡುವೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಬೆಂಗಳೂರಿಗೆ ಆಗಮಿಸಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಮಹತ್ವದ ಚರ್ಚೆ ನಡೆಸಿದ್ದಾರೆ. ಸಹಜವಾಗಿ ವೇಣುಗೋಪಾಲ್ ಬೆಂಗಳೂರಿಗೆ ಬಂದಾಗ ಸುದ್ದಿಗಾರರೊಂದಿಗೆ ಮಾತನಾಡುತ್ತಾರೆ. ಆದರೆ ಈ ಬಾರಿ ಅವರು ಸುದ್ದಿಗಾರರನ್ನು ಭೇಟಿ ಯಾಗಿಲ್ಲ. ವೇಣುಗೋಪಾಲ್ ಬೆಂಗಳೂರಿಗೆ ಬರುತ್ತಿದ್ದಂತೆಯೇ ಕೆ.ಮರೀಗೌಡ ಮುಡಾ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಈ ಒಂದು ಬೆಳವಣಿಗೆ ಹಾಗೂ ಸಿಎಂ ಮತ್ತು ಡಿಸಿಎಂ ಅವರೊಂದಿಗೆ ಮಾತ್ರ ಕೆಸಿವೇಣು ಗೋಪಾಲ್ ಮಹತ್ವದ ಚರ್ಚೆ ನಡೆಸಿರುವುದು ರಾಜಕೀಯ ವಲಯದಲ್ಲಿ ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

PUBLIC NOTICE

Our clients Sri. LOKESH. B., son of Basavanna.C. and his wife Smt.SHAKUNTHALA S., both are residing at No.45/3, 13th Cross, Ramanuja Road, K.R. Mohalla, Mysuru-04, are intending to purchase the schedule property from RAMESH. N., aged about 53 years, son of Late. A. Narayana residing at # 16 NS HIG Group 4, KHB Colony, 2nd Phase Extension, Hootagalli, Mysuru - 570018. If anybody has got any claim over the schedule property, they can file their objection with authentic documents in support of their objection and claims if any, within 7 days from the date of this publication, failing which, our clients will go ahead with the transaction with respect to the schedule property. Any objections or claims received afterwords will not bind on our clients.


SCHEDULE: Property bearing Residential House No.MIG 957 situated at D Block, Nachanahalli 1st Stage, J.P. Nagara, Khille Mohalla, Mysuru City, measuring East to West 50 ft. and North to South 35 ft. totally measuring 1750 Sq. ft. with 6.50 Sq. Meter RCC Mosaic Flooring building with electricity, water and sewage facility and the same is bounded on: East by: 30 ft. Road; West by: Property bearing No.940, North by: Property bearing No.958; South by : Property bearing No. 956.

Sd/-O. SHAMA BHAT, B.A.LL.B.,
Reg.No. KAR 417/77
Sd/- O. SATHISHA, B.Sc. LL.B.,
Reg. No: KAR 721/89. ADVOCATES
. No. 20/c, 2nd Floor, Near Airlines Hotel, Jayalakshmi Vilas Road, Chamarajapuram, Mysuru-570004.
Phone:: 99007 88245

Date: 16-10-2024

ಇಂದು ಮೈಸೂರಲ್ಲಿ ಜಿಲ್ಲಾಡಳಿತದಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ

ಮೈಸೂರು,ಅ.16(ಪಿಎಂ)– ಜಿಲ್ಲಾಡಳಿತ, ಜಿಪಂ, ಪ.ವರ್ಗಗಳ ಕಲ್ಯಾಣ ಇಲಾಖೆ, ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಮತ್ತು ಮೈಸೂರು



ನಗರ–ತಾಲೂಕು ನಾಯಕ ಜನಾಂಗದ ಸಂಘಗಳ ಸಂಯುಕ್ತಾಶ್ರಯದಲ್ಲಿ ಅ.17ರಂದು ಮೈಸೂರಿನ ಕಲಾಮಂದಿರದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಹಮ್ಮಿಕೊಳ್ಳಲಾಗಿದೆ.

ಅಂದು ಮಧ್ಯಾಹ್ನ 12.30ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕರು, ಸಂಸದರು, ನಿಗಮ ಮಂಡಳಿ–ಪ್ರಾಧಿಕಾರದ ಅಧ್ಯಕ್ಷರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ ಮುಖ್ಯ ಭಾಷಣ ಮಾಡಲಿದ್ದಾರೆ. ಇದಕ್ಕೂ ಮುನ್ನ ಬೆಳಗ್ಗೆ 9.30ಕ್ಕೆ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಆವರಣದಿಂದ ಕಲಾಮಂದಿರವರೆಗೆ ಶ್ರೀ ಮಹರ್ಷಿ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಜೊತೆಗೆ ಬೆಳಗ್ಗೆ 9ಕ್ಕೆ ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ವಾಲ್ಮೀಕಿ ಅವರ ಪುತ್ಥಳಿ ನಿರ್ಮಾಣದ ಶಂಕುಸ್ಥಾಪನೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೊದಲನೇ ಪುಟದಿಂದ

ಮುಡಾ ಅಧ್ಯಕ್ಷ ಕೆ.ಮರೀಗೌಡ ತಲೆದಂಡ

ಜೂನ್‌ವರೆಗೆ ಅಭಿವೃದ್ಧಿ ಪಡಿಸಿದ ಮೈಸೂರಿನ ವಿಜಯನಗರ 1, 2, 3, 4, ದಟ್ಟಗಳ್ಳಿ, ಜೆ.ಪಿ.ನಗರ, ದೇವನೂರು, ಆರ್.ಟಿ.ನಗರ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ಸಾವಿರಾರು ಕೋಟಿ ಬೆಲೆ ಬಾಳುವ ಸುಮಾರು 6ರಿಂದ 7 ಸಾವಿರ ವಿವಿಧ ಅಳತೆಯ ನಿವೇಶನಗಳನ್ನು ಮಂಜೂರು ಮಾಡುವ ಮೂಲಕ ಮೈಸೂರಿನ ಇತಿಹಾಸದಲ್ಲೇ ಬೃಹತ್ ಹಗರಣ ನಡೆದಿತ್ತು. ಇದನ್ನು ಕಣ್ಣಾರೆ ಕಂಡ ಮರೀಗೌಡರು ಇದನ್ನು ನಿಲ್ಲಿಸುವಂತೆ ಆಯುಕ್ತ ದಿನೇಶ್ ಕುಮಾರ್‌ಗೆ ಲಿಖಿತ ಸೂಚನೆ ನೀಡಿದ್ದರು. ಅನಂತರ 50:50ರ ನಿವೇಶನ ಹಂಚಿಕೆ ಬ್ರಹ್ಮಾಂಡ ಭ್ರಷ್ಟಾಚಾರ ಬಯಲಾಗುವುದರ ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿಯು 14 ನಿವೇಶನ ಪಡೆದಿರುವುದು ಬೆಳಕಿಗೆ ಬಂದಿತ್ತು.

ಅಕ್ರಮ ಬಯಲಿಗೆಳೆದಿದ್ದೆ ತಪ್ಪಾ: ಈ ನಡುವೆ ಮುಡಾದಲ್ಲಿ 50:50ರ ಅನುಪಾತದಡಿ, ಪ್ರೋತ್ಸಾಹದಾಯಕ ಹಾಗೂ ಬದಲಿ ನಿವೇಶನಗಳನ್ನು ಮನಸ್ಸೋ ಇಚ್ಛೆ ಕಾನೂನುಗಳನ್ನು ಗಾಳಿಗೆ ತೂರಿ ಮಂಜೂರಾತಿ ನೀಡುತ್ತಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಮುಡಾ ಅಧ್ಯಕ್ಷರಾಗಿದ್ದ ಕೆ.ಮರೀಗೌಡ ಅವರೇ ಸದರಿ ನಿವೇಶನಗಳ ಹಂಚಿಕೆ ಅಕ್ರಮವಾಗಿದ್ದು, ಈ ನಿಯಮಬಾಹಿರ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿ ತಮಗೆ ವರದಿ ನೀಡುವಂತೆ ಮುಡಾ ಆಯುಕ್ತರಾಗಿದ್ದ ಜಿ.ಟಿ.ದಿನೇಶ್ ಕುಮಾರ್‌ಗೆ ಮಾರ್ಚ್ 16ರಂದು ಆಂತರಿಕ ಕಚೇರಿ ಟಿಪ್ಪಣಿ ಬರೆದಿದ್ದರಿಂದ ಈ ಹಗರಣ ಬಯಲಿಗೆ ಬಂದಿತ್ತು.

ಮುಡಾದ ನಿಗೂಢತೆ ಬಯಲು: ತದನಂತರ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು ಮೈಸೂರಿಗೆ ಬಂದು ಮುಡಾ ಕಚೇರಿಯಲ್ಲಿ ಸಭೆ ನಂತರ ತುರ್ತು ಸುದ್ದಿಗೋಷ್ಠಿ ನಡೆಸಿ, ಆಯುಕ್ತರು ಸೇರಿದಂತೆ ನಾಲ್ವರು ಇಂಜಿನಿಯರ್‌ಗಳನ್ನು ವರ್ಗಾವಣೆ ಮಾಡಿ ಅದೇ ದಿನ ಹೆಲಿಕಾಪ್ಟರ್‌ನಲ್ಲಿ ಕೆಲ ಕಡತಗಳೊಂದಿಗೆ ಬೆಂಗಳೂರಿಗೆ ತೆರಳಿದ್ದರು. ಈ ಬೆಳವಣಿಗೆ ನಂತರ ಸರ್ಕಾರವು ಹಿರಿಯ ಐಎಎಸ್ ಅಧಿಕಾರಿ ನೇತೃತ್ವದ ನಾಲ್ವರ ತಂಡ ರಚಿಸಿ, ಮುಡಾದಲ್ಲಿ ನಡೆದಿದೆ ಎನ್ನಲಾದ ನಿವೇಶನ ಹಂಚಿಕೆ ಪ್ರಕರಣದ ತನಿಖೆಗೆ ಆದೇಶ ಮಾಡಿತ್ತು. ತನಿಖೆ ಪ್ರಗತಿಯಲ್ಲಿರುವಾಗಲೇ ಮತ್ತೊಂದು ಆದೇಶ ಮಾಡಿ ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ದೇಸಾಯಿ ನೇತೃತ್ವದ ಏಕ ಸದಸ್ಯ ಆಯೋಗವನ್ನು ರಚಿಸಿ ಬೆಂಗಳೂರಿನ ಕುಮಾರಕೃಪ ಅತಿಥಿ ಗೃಹದಲ್ಲಿ ಮುಡಾ ಹಗರಣದ ತನಿಖೆಗೆ ಕ್ರಮ ಕೈಗೊಂಡಿತ್ತು.

ಈ ನಡುವೆ ಸ್ನೇಹಮಯಿ ಕೃಷ್ಣ ಹಾಗೂ ಅಬ್ರಾಹಂ ಅವರು ರಾಜ್ಯಪಾಲರಿಗೆ ಸಿಎಂ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಶೇ.50:50ರ ಅನುಪಾತದಡಿ ನಿವೇಶನಗಳ ಮಂಜೂರು ಮಾಡಿರುವ ಪ್ರಕರಣವನ್ನು ತನಿಖೆಗೊಳಪಡಿಸಬೇಕೆಂದು ದೂರು ನೀಡಿದ ಹಿನ್ನೆಲೆಯಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದರು. ಅದನ್ನು ಪ್ರಶ್ನಿಸಿ ಸರ್ಕಾರ ಹೈಕೋರ್ಟ್ ಮೊರೆ ಹೋಗಿತ್ತು. ವಿಚಾರಣೆ ನಡೆಸಿದ ನ್ಯಾಯಾಲಯವು, ಕಡೆಗೆ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಆದೇಶ ನೀಡಿತ್ತು. ದೂರುದಾರರು ನೀಡಿದ ಖಾಸಗಿ ಪ್ರಕರಣವನ್ನು ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಅನುಮತಿ ನೀಡಿದ್ದರಿಂದ ಲೋಕಾಯುಕ್ತ ಮೈಸೂರು ಎಸ್‌ಪಿ ಉದೇಶ್ ಅವರು ಸಿಎಂ ಸಿದ್ದರಾಮಯ್ಯ, ಪತ್ನಿ ಪಾರ್ವತಿ ಸೇರಿದಂತೆ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲಿಸಿ, ಈಗ ತನಿಖೆ ಪ್ರಾರಂಭಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರಿಗೆ ಆಗಮಿಸುವ ವೇಳೆ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಕೆಲ ಕಾಂಗ್ರೆಸ್ ಕಾರ್ಯಕರ್ತರು ಮುಡಾ ಅಧ್ಯಕ್ಷರಾಗಿದ್ದ ಕೆ.ಮರೀಗೌಡರಿಗೆ ಘೆರಾವ್ ಮಾಡಿ ಮುಡಾ ಹಗರಣ ಬಯಲಿಗೆ ಬರಲು ನೀವೇ ಕಾರಣ ಎಂದು ಆರೋಪಿಸಿ ರಾಜೀನಾಮೆಗೆ ಒತ್ತಾಯಿಸಿದರು. ಅಲ್ಲದೆ ಈಗ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಸೂಚಿಸಿದ್ದರಿಂದ ಈಗ ಮರೀಗೌಡ ಕಡೆಗೂ ರಾಜೀನಾಮೆ ನೀಡಿದ್ದಾರೆ.

ಮುಳುವಾಯ್ತು ಆ ಒಂದು 'ಟಿಪ್ಪಣಿ'!

ಮಾಹಿತಿಯನ್ನು ಒಂದು ವಾರದೊಳಗಾಗಿ ಸಲ್ಲಿಸಲು ಸೂಚಿಸಿದೆ. ಮುಂದುವರೆದು ಪ್ರಾಧಿಕಾರದ ಸಭೆಯ ಅನುಮೋದನೆ ಇಲ್ಲದೆ ಹೆಚ್ಚುವರಿಯಾಗಿ ಪ್ರೋತ್ಸಾಹದಾಯಕ ನಿವೇಶನಗಳನ್ನು ನೀಡಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಮುಡಾ ಅಧ್ಯಕ್ಷರಾಗಿದ್ದ ಮರೀಗೌಡರು ಅಂದಿನ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್‌ಗೆ ಬರೆದ ಟಿಪ್ಪಣಿಯಲ್ಲಿ ಎಚ್ಚರಿಕೆ ನೀಡಿದ್ದರು.

ನಂತರ ಜೂನ್ 24ರಂದು ಮತ್ತೊಂದು ಟಿಪ್ಪಣಿ ಬರೆದಿದ್ದ ಮರೀಗೌಡರು, ಶೇ 50:50ರ ಅನುಪಾತದಡಿ ಮಂಜೂರು ಮಾಡುತ್ತಿರುವ ನಿವೇಶನಗಳು ಕಾನೂನಿಗೆ ವಿರುದ್ಧವಾಗಿದ್ದು, ಈವರೆಗೆ ಪ್ರಾಧಿಕಾರ ಸಭೆಗೆ ತರದೆ, ಕೈಗೊಂಡ ನಿರ್ಣಯಗಳನ್ನು ಸರ್ಕಾರಕ್ಕೆ ಸಲ್ಲಿಸಿ, ಅನುಮೋದನೆ ಪಡೆಯದೆ ಹಂಚಿಕೆ ಮಾಡುತ್ತಿರುವ ನಿವೇಶನಗಳ ಮಂಜೂರಾತಿಯನ್ನು ರದ್ದುಪಡಿಸಿ ಕೈಗೊಂಡ ಕ್ರಮದ ಬಗ್ಗೆ ನಮಗೆ ಮೂರು ದಿನದೊಳಗಾಗಿ ಅನುಪಾಲನಾ ವರದಿ ನೀಡುವಂತೆಯೂ ಅವರು ಸೂಚನೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಆ ಇಬ್ಬರು ಅಧಿಕಾರಿಗಳು ಸೇಫ್!?

ಭ್ರಷ್ಟಾಚಾರಕ್ಕೆ ಕಾರಣೀಭೂತರಾದ ಮುಡಾದ ಹಿಂದಿನ ಆಯುಕ್ತರಾದ ಡಾ. ಡಿ.ಬಿ. ನಟೇಶ್ ಮತ್ತು ಜಿ.ಟಿ.ದಿನೇಶ್‌ಕುಮಾರ್ ಮಾತ್ರ ಸೇಫ್ ಆಗಿದ್ದಾರೆ.

ನಟೇಶ್ ಅವರು ಈಗಾಗಲೇ ಪ್ರಮುಖ ಅಧಿಕಾರ ಸ್ಥಾನ ಹೊಂದಿದ್ದರೆ, ದಿನೇಶ್ ಕುಮಾರ್‌ಗೆ ವರ್ಗಾವಣೆ, ವಿಶ್ರಾಂತಿಗೆ ಅವಕಾಶ ನೀಡಿದಂತೆ ಮಾಡಿ, ನಂತರ ಒಂದು ಅಧಿಕಾರ ಸ್ಥಾನ. ಇಷ್ಟೆಲ್ಲಾ ಭಾರೀ ಹಗರಣಕ್ಕೆ ಕಾರಣಕರ್ತರಾದ ಈ ಇಬ್ಬರು ಅಧಿಕಾರಿಗಳ ವಿರುದ್ಧ ಕ್ರಮ ಯಾಕಿಲ್ಲ ಎಂಬುದು ಯಕ್ಷಪ್ರಶ್ನೆಯಾಗಿದೆ. ಒಂದೊಮ್ಮೆ ಈ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಮುಂದಾದರೆ ಪ್ರಭಾವಿ ಸಚಿವರೊಬ್ಬರ ತಲೆದಂಡ ಖಚಿತ ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ವ್ಯಾಪಕವಾಗಿ ಕೇಳಿಬರುತ್ತಿದೆ. ಹೀಗಾಗಿ ಮುಡಾ ಹಗರಣದ ರೂವಾರಿ ಗಳಾದ ಈ ಇಬ್ಬರು ಅಧಿಕಾರಿಗಳು ಏನೇ ಬರಲಿ... ನಾವಂತೂ ಸೇಫ್ ಎಂದು ದಿಲ್ದಾರ್ ಆಗಿದ್ದಾರೆ.

ರಾಜೀನಾಮೆ ಪರ್ವ ಆರಂಭ...!

ನಿವೇಶನ ಕೊಡಿಸಿ ಅಕ್ರಮ ಎಸಗಿದ್ದಾರೆ. ಮುಡಾ ಹಗರಣದಲ್ಲಿ ಈಗಾಗಲೇ ಸಿದ್ದರಾಮಯ್ಯ ವಿರುದ್ಧ ಪ್ರಕರಣ ದಾಖಲಾಗಿ ತನಿಖೆ ನಡೆಯುತ್ತಿದೆ. ಮರೀಗೌಡರಂತೆ ಮುಂದಿನ ದಿನದಲ್ಲಿ ಸಿದ್ದರಾಮಯ್ಯ, ಡಾ.ಮಹದೇವಪ್ಪ ಸೇರಿದಂತೆ ಇತರರು ಕೂಡ ರಾಜೀನಾಮೆ ನೀಡಿ ಜೈಲಿಗೆ ಹೋಗಲಿದ್ದಾರೆ ಎಂದು ಭವಿಷ್ಯ ನುಡಿದರು.

ನೈತಿಕ ಹೊಣೆ ಹೊತ್ತು ಸಿದ್ದರಾಮಯ್ಯ ಮೊದಲು ರಾಜೀನಾಮೆ ನೀಡಬೇಕಿತ್ತು. ಆದರೆ ತಮ್ಮ ಅನುಯಾಯಿಗಳಿಂದ ರಾಜೀನಾಮೆ ಕೊಡಿಸಿದ್ದಾರೆ. ಈಗ 14 ನಿವೇಶನ ಕೊಟ್ಟು ಹೇಗೆ ಮಾದರಿಯಾಗಿದ್ದಾರೋ ಹಾಗೆಯೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಮಾದರಿಯಾಗಬೇಕು ಎಂದು ಸ್ನೇಹಮಯಿ ಕೃಷ್ಣ ಆಗ್ರಹಿಸಿದರು.

'ಮುಡಾ' ಮರಿ ರಾಜೀನಾಮೆ ಕೊಟ್ಟಿದ್ದೇಕೆ?

ವೈಟ್ನರ್ ಹಾಕಿದ್ದು ನಾನಲ್ಲ, ನಾನು ಕ್ಲೀನ್ ಅಂಡ್ ಕ್ಲಿಯರ್. ಅದು ನಾನಲ್ಲ... ನಾನಲ್ಲ.., ಆ ಸೈಟುಗಳಿಗೂ ನನಗೂ ಸಂಬಂಧವೇ ಇಲ್ಲ ಎನ್ನುತ್ತಿದ್ದ 'ಸೈಟ್ ಸಿದ್ದಪ್ಪನವರೇ... ಮುಡಾಮರಿ ಈಗ ರಾಜೀನಾಮೆ ಕೊಟ್ಟಿದ್ದು ಯಾಕೆ?' ಎಂದು ಪ್ರಶ್ನಿಸಿ ಸಿಎಂ ಸಿದ್ದರಾಮಯ್ಯ ಅವರನ್ನು ಲೇವಡಿ ಮಾಡಲಾಗಿದೆ.

'ರಾಜೀನಾಮೆ ಕೊಡಿ ಎಂದು ನೀವೇ ಹೇಳಿದಿರೋ ಅಥವಾ ಮರಿಯೇ ಸ್ವಇಚ್ಛೆಯಿಂದ ರಾಜೀನಾಮೆ ಕೊಟ್ಟಿತೋ?' ಎಂದು ಪ್ರಶ್ನೆ ಮಾಡಿದೆ. ಇಡಿ ಕುಣಿಕೆ ಬಿಗಿದುಕೊಳ್ಳುತ್ತಿದೆ. ಅದರ ಪರಿಣಾಮ 14 ನಿವೇಶನಗಳು ಮುಡಾಕ್ಕೆ ವಾಪಸ್ ಕೊಡಲಾಗಿದೆ. ಮುಡಾ ಮರಿ ತಲೆದಂಡವಾಗಿದೆ, ಇನ್ನಷ್ಟು ತಲೆದಂಡಗಳು ಕಾದಿವೆ ಎಂದು ಜೆಡಿಎಸ್ ಪೋಸ್ಟ್ ಮಾಡಿದೆ.

ಹೈಕೋರ್ಟ್ ಅನುಮತಿ ಕಡ್ಡಾಯ

ಹಕ್ಕುಗಳಿಗೆ ಅಡ್ಡಿ ಮಾಡುವುದಿಲ್ಲ. ಸೆಕ್ಷನ್ 16ರ ಅನ್ವಯ ಎಲ್ಲರಿಗೂ ಸಭೆಯಲ್ಲಿ ಪಾಲ್ಗೊಳ್ಳಲು ನೋಟಿಸ್ ನೀಡಲಾಗುತ್ತದೆ. ಇಲ್ಲಿ ಪ್ರಾಧಿಕಾರದ ಅಧ್ಯಕ್ಷರು (ಮುಖ್ಯಮಂತ್ರಿ) ನಿರ್ಣಯ ಕೈಗೊಂಡರೂ ಅದು ಸಚಿವ ಸಂಪುಟದ ತೀರ್ಮಾನಕ್ಕೆ ಒಳಪಡುತ್ತದೆ. ಪ್ರಾಧಿಕಾರ ಅಥವಾ ಸಿಎಂ ಸೆಕ್ಷನ್ 17ರ ಅನ್ವಯ ಯಾವುದೇ ಅಧಿಕಾರ ಚಲಾಯಿಸಿಲ್ಲ. ಹೀಗಿರುವಾಗ ಅರ್ಜಿದಾರರಿಗೆ ಸಮಸ್ಯೆಯಾದರೆ ಅವರು ಅರ್ಜಿ ಸಲ್ಲಿಸಬಹುದು ಎಂದು ಪೀಠಕ್ಕೆ ವಿವರಿಸಿದರು.

ಈ ವೇಳೆ ಅರ್ಜಿದಾರರ ಪರ ವಕೀಲರು, ಪ್ರಾಧಿಕಾರದ ಅಧ್ಯಕ್ಷರು ಮುಖ್ಯಮಂತ್ರಿ. ಅಲ್ಲಿ ಯಾವುದೇ ಅಭಿಪ್ರಾಯಭೇದ ವಿದ್ದರೆ ಅದು ಸಂಪುಟಕ್ಕೆ ಹೋಗುತ್ತದೆ. ಒಂದೊಮ್ಮೆ ಪ್ರಾಧಿಕಾರದ ಸದಸ್ಯರ ನಡುವೆ ಅಭಿಪ್ರಾಯ ಭೇದ ಉಂಟಾದರೆ ಅದನ್ನು ಮುಖ್ಯಮಂತ್ರಿ ನಿರ್ಧರಿಸಬಾರದು ಎಂಬುದಾಗಿ ನ್ಯಾಯಪೀಠ ಆದೇಶಿಸಬೇಕು ಎಂದರು. ಅದಕ್ಕೆ ನ್ಯಾಯಪೀಠ, ಮುಖ್ಯಮಂತ್ರಿಯವರು ಸಂಪುಟದ ಪ್ರಕ್ರಿಯೆಯಲ್ಲಿ ಭಾಗವಹಿಸಬಾರದು. ನ್ಯಾಯಾಲಯದ ಅನುಮತಿ ಇಲ್ಲದೇ ಯಾವುದೇ ನಿರ್ಧಾರ ಕೈಗೊಳ್ಳುವಂತಿಲ್ಲ ಎಂದು ಆದೇಶಿಸಲಾಗುವುದು ಎಂದಿತು. ಇದಕ್ಕೊಪ್ಪಿದ ಅರ್ಜಿದಾರರ ಪರ ವಕೀಲರು, ದೇವಸ್ಥಾನದ ರಚನೆ ಮತ್ತು ಬೆಟ್ಟಕ್ಕೆ ಯಾವುದೇ ಪ್ರಮುಖವಾದ ರಚನಾತ್ಮಕ ಬದಲಾವಣೆ ಮಾಡಬಾರದು. ಏಕೆಂದರೆ ಈಗಾಗಲೇ ಸಾಕಷ್ಟು ಸಮಸ್ಯೆ ಯಾಗಿದೆ. ನೀತಿ ಬದಲಾವಣೆಗೆ ಸಂಬಂಧಿಸಿದಂತೆ ನ್ಯಾಯಾಲಯದ ಮುಂದೆ ಬರಲು ನಮಗೆ ಅನುಮತಿಸಬೇಕು. ಹಣಕಾಸಿನ ಹೊಣೆಗಾರಿಕೆಯ ಬಗ್ಗೆ ನಿಗದಿತವಾಗಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ಪ್ರಾಧಿಕಾರಕ್ಕೆ ಆದೇಶಿಸಬೇಕು ಎಂದು ಕೋರಿದರು.

ಅಲ್ಲದೆ, ಅರ್ಜಿ ಇತ್ಯರ್ಥವಾಗುವವರೆಗೆ ಪ್ರಾಧಿಕಾರವನ್ನು ವಿಸರ್ಜಿಸಬಾರದು. ಒಮ್ಮೆ ಪ್ರಾಧಿಕಾರ ವಿಸರ್ಜನೆಯಾದರೆ ನಮ್ಮ ಸ್ಥಾನ ಹೋಗುತ್ತದೆ. ಸೆಕ್ಷನ್ 16ರ ಅನ್ವಯ ಪ್ರಾಧಿಕಾರದ ಸದಸ್ಯರ ನಡುವೆ ಒಮ್ಮತ ಮೂಡದಿದ್ದರೆ ನ್ಯಾಯಾಲಯದ ಅನುಮತಿ ಇಲ್ಲದೇ ನಿರ್ಧಾರ ಕೈಗೊಳ್ಳುವಂತಿಲ್ಲ. ದೇವಸ್ಥಾನ ಮತ್ತು ಬೆಟ್ಟದ ಸ್ಥಿರ ಮತ್ತು ಚರಾಸ್ತಿಯನ್ನು ಬದಲಾಯಿಸಬಾರದು. ಸೆಕ್ಷನ್ 40 ರ ಅನ್ವಯ ಸಂಪ್ರದಾಯ ಮತ್ತು ವಿಧಿ-ವಿಧಾನಗಳಿಗೆ ಬದಲಾವಣೆ ಮಾಡಬಾರದು. ದೇವಸ್ಥಾನದ ಖರ್ಚು-ವೆಚ್ಚದ ದಾಖಲೆ ಪರಿಶೀಲಿಸಲು ಪ್ರಾಧಿಕಾರದ ಕಾಯಂ ಸದಸ್ಯರಿಗೆ ಅನುಮತಿಸಬೇಕು ಎಂದು ಮನವಿ ಮಾಡಿದರು. ವಾದ, ಪ್ರತಿವಾದ ಆಲಿಸಿದ ಬಳಿಕ ಪೀಠ ಮುಂದಿನ ವಿಚಾರಣೆಯನ್ನು ನವೆಂಬರ್ 22ಕ್ಕೆ ಮುಂದೂಡಿತು.

ನಾಗಮಲೆ ಚಾರಣಕ್ಕೆ ಗ್ರೀನ್ ಸಿಗ್ನಲ್

ಆನ್‌ಲೈನ್‌ನಲ್ಲಿ ನೋಂದಣಿ ಕಡ್ಡಾಯ

- ದಿನಕ್ಕೆ 200 ಮಂದಿಗೆ ಮಾತ್ರ ಅವಕಾಶ
- ತಲಾ 200 ರೂ. ಶುಲ್ಕ ನಿಗದಿ, ಬೆಳಗ್ಗೆ 6ರಿಂದ 10 ಗಂಟೆವರೆಗೆ ಮಾತ್ರ ಪ್ರವೇಶಕ್ಕೆ ಅನುಮತಿ
- ಚಾರಣಿಗರಿಗೆ ಅರಣ್ಯ ಇಲಾಖೆಯ ಗಾರ್ಡ್ ಭದ್ರತೆ



ನಾಗಮಲೆ ಚಾರಣ ಕೈಗೊಂಡಿರುವ ಚಾರಣಿಗರು.



ನಾಗಮಲೆ ಚಾರಣಕ್ಕೆ ಹೋಗಬಯಸುವವರು ಅರಣ್ಯ ಇಲಾಖೆಯ ವೆಬ್‌ಸೈಟ್ www.aranyavihaara.karnataka.gov.in ನಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ದಿನಕ್ಕೆ 200 ಮಂದಿಗೆ ಮಾತ್ರ ಚಾರಣಕ್ಕೆ ಅವಕಾಶ ನೀಡಲಾಗುತ್ತದೆ. ಹಳೆಯೂರು ಗೇಟ್‌ನಿಂದ ನಾಗಮಲೆಗೆ 7 ಕಿ.ಮೀ. ದೂರವಿದೆ. ಎರಡೂ ಬದಿಯಿಂದ 14 ಕಿ.ಮೀ ದೂರದ ಚಾರಣಕ್ಕೆ ಅವಕಾಶವಿದೆ. ಈ ವೇಳೆ ಚಾರಣಕ್ಕೆ ಹೋಗುವಾಗ ಹಾಗೂ ಬರುವಾಗ ಅರಣ್ಯ ಇಲಾಖೆಯ ಗೈಡ್ ಇರುತ್ತಾರೆ. ಮುಂದಿನ ದಿನಗಳಲ್ಲಿ ಚಾರಣಕ್ಕೆ ಹೋಗಲು ಹೆಚ್ಚು ಜನರಿಗೆ ಅವಕಾಶ ನೀಡಲು ಅರಣ್ಯ ಇಲಾಖೆ ನಿರ್ಧರಿಸಿದೆ.

● ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಅ.16-ದಕ್ಷಿಣ ಕರ್ನಾಟಕದ ಪ್ರಮುಖ ಯಾತ್ರಾ ಸ್ಥಳವೂ ಆಗಿರುವ ಮಲೆ ಮಹದೇಶ್ವರ ಬೆಟ್ಟದ ನಾಗಮಲೆಗೆ 8 ತಿಂಗಳ ಬಳಿಕ ಅರಣ್ಯ ಇಲಾಖೆ ಚಾರಣಕ್ಕೆ ಅವಕಾಶ ಕಲ್ಪಿಸಿದ್ದು, ಅರಣ್ಯ ಸಿಬ್ಬಂದಿಗಳ ಭದ್ರತೆಯಲ್ಲಿ ಚಾರಣ ಕೈಗೊಳ್ಳಲು ಕೆಲ ಮಾರ್ಗಸೂಚಿ ಜಾರಿಗೆ ತಂದಿದೆ.

ದಾರ್ಶನಿಕರೂ ಹಾಗೂ ಪವಾಡ ಪುರುಷರೂ ಆದ ಮಲೆ ಮಹದೇಶ್ವರರು ನೆಲೆಸಿದ್ದರೂ ಎನ್ನಲಾದ 77 ಮಲೆಗಳಲ್ಲಿ ನಾಗಮಲೆಯೂ ಒಂದಾಗಿದ್ದು, ಮಹದೇಶ್ವರ ಬೆಟ್ಟಕ್ಕೆ ಬರುವ ಭಕ್ತರಲ್ಲಿ ಹಲವು ಮಂದಿ ನಾಗಮಲೆಗೆ ತೆರಳಿ ಪೂಜೆ ಸಲ್ಲಿಸುವ ಸಂಪ್ರದಾಯ ಹೊಂದಿದ್ದಾರೆ. ಇದರ ನಡುವೆ ಬೆಟ್ಟ-ಗುಡ್ಡಗಳನ್ನು ಸುತ್ತುವರೆದಿರುವ ನಾಗಮಲೆಯನ್ನು ಕಣ್ತುಂಬಿಕೊಳ್ಳಲು ಚಾರಣಿಗರೂ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದರು. ಆದರೆ, ಕಳೆದ ವರ್ಷ ಬೆಂಗಳೂರು ಮೂಲದ ಇಬ್ಬರು ಟೆಕ್ಕಿಗಳು ರಾತ್ರಿ ವೇಳೆ ಮಹದೇಶ್ವರ ಬೆಟ್ಟದಿಂದ ನಾಗಮಲೆಗೆ ಚಾರಣಕ್ಕೆ ಹೋಗುವ ವೇಳೆ ಆನೆ ದಾಳಿಗೆ ಒಳಗಾಗಿ ಮೃತಪಟ್ಟಿದ್ದರು.

ಈ ಹಿನ್ನೆಲೆಯಲ್ಲಿ ಫೆಬ್ರವರಿ ತಿಂಗಳಲ್ಲಿ ನಾಗಮಲೆಗೆ ಚಾರಣಕ್ಕೆ ಹೋಗುವುದನ್ನು ನಿಷೇಧಿಸಲಾಗಿತ್ತು. ಅಲ್ಲದೆ, ಭಕ್ತರು ಹಾಗೂ ಚಾರಣಿಗರನ್ನು ಮಲೆ ಮಹದೇಶ್ವರ ಬೆಟ್ಟದಿಂದ ನಾಗಮಲೆ ರಸ್ತೆಯ ಇಂಡಿಗನತ್ತ ಗ್ರಾಮದವರೆಗೂ ಕರೆದೊಯ್ಯುತ್ತಿದ್ದ ಜೀಪ್‌ಗಳಲ್ಲಿ ಪ್ರಯಾಣಿಕರನ್ನು ಕರೆದೊಯ್ಯಲು ಯೋಗ್ಯವಾಗಿಲ್ಲದ ಹಾಗೂ ಸುರಕ್ಷತೆಗೆ ಯಾವುದೇ ಆದ್ಯತೆ ನೀಡದ ಹಿನ್ನೆಲೆ ಅರಣ್ಯ ಇಲಾಖೆ ಅನಧಿಕೃತವಾಗಿ ಸಂಚರಿಸುತ್ತಿದ್ದ ವಾಹನಗಳಿಗೂ ಕಡಿವಾಣ ಹಾಕಿತ್ತು.

ಮಲೆ ಮಹದೇಶ್ವರ ಬೆಟ್ಟದಿಂದ ನಾಗಮಲೆಗೆ ಸಾಗುವ ಹಾದಿಯಲ್ಲಿ ಸಿಗುವ ಗ್ರಾಮಗಳ ನಿವಾಸಿಗಳು ಹಾಗೂ ಭಕ್ತರಿಗಾಗಿ 2018-19ರಲ್ಲಿ ಪಾಲಾರ್ ವನ್ಯಜೀವಿ ವಲಯ ವ್ಯಾಪ್ತಿಗೆ ಬರುವ ತುಳಸಿಕೆರೆ ಪರಿಸರ ಅಭಿವೃದ್ಧಿ ಸಮಿತಿ ವತಿಯಿಂದ ಜೀಪ್ ವ್ಯವಸ್ಥೆ ಆರಂಭಿಸಲಾಗಿತ್ತು. ಬಳಿಕ ಬೆಟ್ಟದಿಂದ ನಾಗಮಲೆ ದಾರಿಯ ಇಂಡಿಗನತ್ತ ಗ್ರಾಮದವರೆಗೂ ಸಂಚರಿಸುತ್ತಿದ್ದ ವಾಹನಗಳ ಸಂಖ್ಯೆ ಹೆಚ್ಚಾಗಿತ್ತು. ಒಂದೊಂದು ವಾಹನದಲ್ಲಿ ಮಿತಿ ಮೀರಿದ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಕರೆದೊಯ್ಯಲಾಗುತ್ತಿತ್ತು. ವಿಮೆ, ಎಫ್‌ಸಿ ಹಾಗೂ ಯಾವುದೇ ದಾಖಲೆಯಿಲ್ಲದೆ ಸಂಚರಿಸುತ್ತಿದ್ದ ವಾಹನಗಳಿಗೆ ಕಡಿವಾಣ ಹಾಕಲು ಪರಿಸರ ಪ್ರೇಮಿಗಳು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ ಅರಣ್ಯ ಇಲಾಖೆ ನಾಗಮಲೆಯತ್ತ ತೆರಳುವ ವಾಹನಗಳಿಗೆ ಕಡಿವಾಣ ಹಾಕಿದ್ದರು.

ಹೊಸರೂಪ: ಮಹದೇಶ್ವರರ ಭಕ್ತರ ಬೇಡಿಕೆ ಅನುಗುಣವಾಗಿ ಇದೀಗ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದಿಂದ ನಾಗಮಲೆ ಚಾರಣಕ್ಕೆ ಹೊಸರೂಪ ಹಾಗೂ ನಿಯಮ ಜಾರಿಗೆ ತಂದಿದೆ. ಕಟ್ಟುನಿಟ್ಟಿನ ಕ್ರಮದೊಂದಿಗೆ ಚಾರಣಿಗರ ಸುರಕ್ಷತೆ, ಭದ್ರತೆಗೆ ಕ್ರಮ ಕೈಗೊಳ್ಳಲಾಗಿದೆ. ಮಲೆಮಹದೇಶ್ವರ ಬೆಟ್ಟದಿಂದ ನಾಗಮಲೆಯ ಅರಣ್ಯ ವ್ಯಾಪ್ತಿ ಆರಂಭವಾಗುವ ಸ್ಥಳ ಹಳೆಯೂರು ಗೇಟ್‌ನಿಂದ ಚಾರಣಿಗರನ್ನು ಕರೆದೊಯ್ಯುವ ವ್ಯವಸ್ಥೆ ಜಾರಿಗೊಳಿಸಲಾಗಿದೆ.

ಸುರಕ್ಷತೆಗೆ ಕ್ರಮ

"ಈ ಹಿಂದೆ ನಾಗಮಲೆಗೆ ಚಾರಣಕ್ಕೆ ರಾತ್ರಿ ವೇಳೆ ಹೋಗುವಾಗ ಆನೆ ದಾಳಿಗೆ ಒಳಗಾಗಿ ಒಬ್ಬರು ಮೃತಪಟ್ಟಿದ್ದರು. ಅಲ್ಲದೆ, ಇಂಡಿಗನತ್ತ ಗ್ರಾಮದವರೆಗೆ ಸಂಚರಿಸುತ್ತಿದ್ದ ವಾಹನಗಳು ಸುಸ್ಥಿತಿಯಲ್ಲಿ ಇರಲಿಲ್ಲ. ಯಾವುದೇ ದಾಖಲೆ ಇಲ್ಲದೆ ಸಂಚರಿಸುತ್ತಿದ್ದ ವಾಹನಗಳನ್ನು ಜನರ ಸುರಕ್ಷತೆಯಿಂದ ತಡೆ ಹಿಡಿಯಲಾಗಿತ್ತು. ಇದೀಗ ಚಾರಣಕ್ಕೆ ಅನುಮತಿ ಸಿಕ್ಕಿದೆ. ಆನ್‌ಲೈನ್ ಮೂಲಕ ಹೆಸರು ನೊಂದಾಯಿಸಿದವರಿಗೆ ಅನುಮತಿ ನೀಡಲಾಗುತ್ತಿದೆ. ಭಕ್ತರು, ಚಾರಣಿಗರ ಸುರಕ್ಷತೆಗಾಗಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ, ಚಾರಣದ ವೇಳೆ ಏಕಬಳಕೆಯ ಪ್ಲಾಸ್ಟಿಕ್ ಬಾಟಲ್, ಪ್ಲಾಸ್ಟಿಕ್ ಕವರ್ ಕಡ್ಡಾಯವಾಗಿ ನಿಷೇಧಿಸಲಾಗಿದೆ. ಈ ಹಿಂದೆ ಮಾರ್ಗದುದ್ದಕ್ಕೂ ಪ್ಲಾಸ್ಟಿಕ್ ರಾಶಿ ಕಂಡು ಬರುತ್ತಿದ್ದ ಹಿನ್ನೆಲೆಯಲ್ಲಿ ವನ್ಯಜೀವಿಗಳಿಗೆ ತೊಂದರೆಯಾಗುತ್ತಿತ್ತು. ಇನ್ನು ಮುಂದೆ ಪ್ಲಾಸ್ಟಿಕ್ ಮುಕ್ತಗೊಳಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ.

-ಸಂತೋಷ್‌ಕುಮಾರ್, ಡಿಸಿಎಫ್, ಮಲೆ ಮಹದೇಶ್ವರ ವನ್ಯಧಾಮ

ಮೈಸೂರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆಗೆ ಆಗ್ರಹಿಸಿ ಪ್ರತಿಭಟನೆ



ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಎಐಡಿಎಸ್‌ಓ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಅ.16(ಎಂಟಿವೈ)- ಮೈಸೂರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸುವುದೂ ಸೇರಿ ದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಎಐಡಿಎಸ್‌ಓ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿ, ಸರ್ಕಾರ ಕೂಡಲೇ ಮೈಸೂರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆಗೆ ಕ್ರಮ ಕೈಗೊಳ್ಳಬೇಕು. ಶೇ.50 ಪೇಮೆಂಟ್ ಕೋಟಾ ರದ್ದು ಮಾಡಬೇಕು. ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹಣಕ್ಕಾಗಿ ಸೀಟುಗಳನ್ನು ಮಾರಾಟ ಮಾಡುತ್ತಿರುವ ಪ್ರಕ್ರಿಯೆ ರದ್ದು ಮಾಡುವಂತೆ ಆಗ್ರಹಿಸಿದರು. ಕಳೆದ ಒಂದು ತಿಂಗಳಿಂದ ದಾವಣಗೆರೆಯ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಕಾಲೇಜನ್ನು ಉಳಿಸಿಕೊಳ್ಳಲು ಹೋರಾಟ ನಡೆಸುತ್ತಿದ್ದಾರೆ. ರಾಜ್ಯದ ಹಳೆಯ ಕಾಲೇಜುಗಳಲ್ಲಿ ಒಂದಾದ ಹಾಗೂ ರಾಜ್ಯದ ಪ್ರಥಮ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಎಂಬ ಕೀರ್ತಿಗೆ ಪಾತ್ರವಾಗಿರುವ ಯುಬಿಡಿಟಿಯಲ್ಲಿ ಶೇ.50ರಷ್ಟು ಸೀಟುಗಳಲ್ಲಿ ಶುಲ್ಕ ಏರಿಕೆ ಮಾಡಿ, ವಿದ್ಯಾರ್ಥಿಗಳಿಂದ 97 ಸಾವಿರ ಪಡೆಯಲು ನಿರ್ಧರಿಸಿ ರುವುದು ಖಂಡನೀಯ ಎಂದು ಅಸಮಾಧಾನ ವ್ಯಕ್ತ ಪಡಿಸಿದರು. ಇದುವರೆಗೆ ಸರ್ಕಾರದ ದೇಣಿಗೆಯಿಂದ ನಡೆಯುವ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಿರ್ವಹಣಾ ಕೋಟಾದ ಸೀಟುಗಳ ಸಂಖ್ಯೆ ಹೆಚ್ಚಾಗಿರಲಿಲ್ಲ. ಆದರೆ, ಇದೀಗ ಶೇ.50ರಷ್ಟು ಹೆಚ್ಚಳ ಮಾಡಿರುವುದು ಸರಿಯಲ್ಲ. ಸರ್ಕಾರಿ ಇಂಜಿನಿಯರಿಂಗ್ ಶುಲ್ಕ 43 ಸಾವಿರ ರೂ. ಭರಿಸುವುದೇ ಕಷ್ಟವಾಗಿದೆ. ಇಂತಹ ಸಂದರ್ಭದಲ್ಲಿ, ಸರ್ಕಾರಿ ಕಾಲೇಜಿನಲ್ಲಿ 97 ಸಾವಿರ ರೂ.ಶುಲ್ಕ ಪಡೆಯುವುದು ವಿದ್ಯಾರ್ಥಿಗಳ ಮೇಲೆ ಪ್ರಹಾರವಾಗಿದೆ ಎಂದು ಆರೋಪಿಸಿದರು. ಎನ್‌ಇಪಿ-2020 ಅನ್ನು ರಾಜ್ಯ ಸರ್ಕಾರ ಹಿಂಪಡೆದಿದೆ. ಆದರೆ ಸರ್ಕಾರಿ ಶಿಕ್ಷಣ ಸಂಸ್ಥೆಗಳ ಶುಲ್ಕ ಏರಿಕೆ, ಅನುದಾನ ಕಡಿತ ಹಾಗೂ ವಿದ್ಯಾರ್ಥಿಗಳ ಶುಲ್ಕದಲ್ಲಿ ಕಾಲೇಜು ನಿರ್ವಹಣೆ ಇವುಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವುದು ವಿಷಾದನೀಯ ಎಂದು ಕಿಡಿ ಕಾರಿದರು.

ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ನಿತಿನ್, ಪದಾಧಿಕಾರಿಗಳಾದ ಚಂದನ, ಹೇಮಾ, ಚಂದ್ರಿಕಾ, ದಿಶ, ಅಂಜಲಿ, ಅಭಿಷೇಕ್, ಬೀರಪ್ಪ, ವಿದ್ಯಾರ್ಥಿಗಳಾದ ಅಭಿಷೇಕ್, ನಂದೀಶ್, ನರಸಿಂಹ, ನಾರಾಯಣ, ನಿತ್ಯ, ರಕ್ಷಿತ, ವಿಜಯ್ ಪಾಲ್ಗೊಂಡಿದ್ದರು.

ಮೈಸೂರು ಮೃಗಾಲಯ, ಕಾರಂಜಿಕೆರೆ ಆಜುಬಾಜು 'ನಿಶಬ್ಧ ವಲಯ'

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅಧಿಸೂಚನೆ





ಮೈಸೂರು, ಅ.16(ಎಸ್‌ಪಿಎನ್)- ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯ ಮತ್ತು ಕಾರಂಜಿಕೆರೆ ಸುತ್ತಲಿನ 50 ಮೀಟರ್ ಸುತ್ತಳತೆಯ ವ್ಯಾಪ್ತಿ ಪ್ರದೇಶವನ್ನು 'ನಿಶ್ಯಬ್ಧ ವಲಯ' ಎಂದು ಪರಿಗಣಿಸಿ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಬುಧವಾರ ಪರಿಷ್ಕೃತ ಅಧಿಸೂಚನೆ ಹೊರಡಿಸಿದ್ದಾರೆ.

ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿ ಕೆರೆಯಲ್ಲಿ ಸೂಕ್ಷ್ಮ, ಅಪರೂಪ ಮತ್ತು ವಿನಾಶದ ಅಂಚಿನಲ್ಲಿರುವ ಪ್ರಾಣಿಪಕ್ಷಿಗಳು ಮತ್ತು ವನ್ಯಜೀವಿಗಳಿದ್ದು, ಇವುಗಳ ಸುರಕ್ಷತೆ ಹಾಗೂ ಮೃಗಾಲಯಕ್ಕೆ ಆಗಮಿಸುವ ವೀಕ್ಷಕರು, ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ 'ನಿಶಬ್ಧ ವಲಯ' ಎಂದು ದಿ:21.12.2023 ರಂದು ಘೋಷಿಸಲಾಗಿತ್ತು.

ಈ ಅಧಿಸೂಚನೆ ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿ ಕೆರೆ ಸುತ್ತಮುತ್ತಲಿನ ಎಂ.ಎಲ್.ಸೋಮಸುಂದರಂ ವೃತ್ತದಿಂದ ಎಸ್.ಲಿಂಗಣ್ಣ ವೃತ್ತದ ಹಾಗೂ ಶಾಲಿವಾಹನ ರಸ್ತೆವರೆಗೆ. ಎಸ್.ಲಿಂಗಣ್ಣ ವೃತ್ತದಿಂದ ಗ್ರೌಂಡ್ ಜಂಕ್ಷನ್ ಮತ್ತು ಲೋಕರಂಜನ್ ರಸ್ತೆವರೆಗೆ. ಸರ್ಕಸ್ ಗ್ರೌಂಡ್ ಜಂಕ್ಷನ್‌ನಿಂದ ಮಹಾರಾಣಾ ಪ್ರತಾಪ ಸಿಂಹ ವೃತ್ತ ಮತ್ತು ಟ್ಯಾಂಕ್ ಬಾಂಡ್ ರಸ್ತೆಯವರೆಗೆ. ಮಹಾರಾಣಾ ಪ್ರತಾಪ ಸಿಂಹ ವೃತ್ತದಿಂದ ಎಂ.ಎಲ್.ಸೋಮಸುಂದರಂ ವೃತ್ತ ಮತ್ತು ಎಂ.ಜಿ.ರಸ್ತೆವರೆಗೆ ಪಟಾಕಿಗಳ ಶಬ್ಧ, ಧ್ವನಿವರ್ಧಕಗಳ ಶಬ್ಧ ಹಾಗೂ ವಾಹನಗಳ ಹಾರ್ನ್ ಶಬ್ಧಗಳನ್ನು ನಿಷೇಧಿಸಿ ಅಧಿಸೂಚನೆ ಹೊರಡಿಸಲಾಗಿತ್ತು. ಇದೀಗ ಮತ್ತೆ ಮೃಗಾಲಯ ಕಾರ್ಯ ನಿರ್ವಾಹಕ ನಿರ್ದೇಶಕರಿಂದ ನಗರ ಪೊಲೀಸ್ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸಿ, ಶ್ರೀ ಚಾಮರಾಜೇಂದ್ರ ಮೃಗಾಲಯ ಮತ್ತು ಕಾರಂಜಿಕೆರೆ ಸುತ್ತಲಿನ 50 ಮೀಟರ್ ವ್ಯಾಪ್ತಿ ಪ್ರದೇಶವನ್ನು ನಿಶ್ಯಬ್ಧ ವಲಯ ಘೋಷಿಸುವಂತೆ ಮನವಿ ಮಾಡಿದ್ದರು. ಈ ಮನವಿಗೆ ನಗರ ಪೊಲೀಸ್ ಆಯುಕ್ತರು ಸ್ಪಂದಿಸಿ, ಮೋಟಾರು ವಾಹನ ಕಾಯ್ದೆ -1989 ನಿಯಮ-218 ಮತ್ತು ಕಲಂ 2(ಸಿ), 5ಎ ರೂಲ್ 2000ರ ಪ್ರಕಾರ ಈ ಮೇಲ್ಕಂಡ ಹೆಚ್ಚುವರಿ ಪರಿಷ್ಕೃತ ಅಧಿಸೂಚನೆಯನ್ನು ಬುಧವಾರ ಹೊರಡಿಸಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಬಯಲು ಶೌಚ ಇನ್ನೂ ಜೀವಂತ

ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆಯಲ್ಲೇ ಹೀನ ಪರಿಸ್ಥಿತಿ

- ಮೈಸೂರು ಜಿಲ್ಲೆಯಲ್ಲಿ 4,44,062 ಕುಟುಂಬ
- 4,28,713 ಕುಟುಂಬದಲ್ಲಿ ಶೌಚಾಲಯ
- 16,349 ಶೌಚಾಲಯ ನಿರ್ಮಾಣ ಬಾಕಿ
- ಸ್ವಾತಂತ್ರ್ಯ ಬಂದು 75 ವರ್ಷವಾದರೂ ಮುಕ್ತವಾಗದ ಅವ್ಯವಸ್ಥೆ



(ಸಂಗ್ರಹ ಚಿತ್ರ)

ಮೈಸೂರು,ಅ.16(ಬಿಎಲ್‌ಯು)-ಬಯಲು ಶೌಚ ಮುಕ್ತ ಎಂದು ಘೋಷಿಸಿ 8 ವರ್ಷವಾದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆ ಮೈಸೂರಲ್ಲಿ ಇನ್ನು ಕೂಡ ಬಯಲು ಶೌಚ ಜೀವಂತವಾಗಿದೆ.

ರಾಷ್ಟ್ರೀಯ ಮಾದರಿ ಸಮೀಕ್ಷೆ ಮತ್ತು ಸ್ವಚ್ಛ ಭಾರತ ಅಭಿಯಾನದ ಪ್ರಕಾರ 2016ರಲ್ಲಿ ಮೈಸೂರನ್ನು ಬಯಲು ಶೌಚಮುಕ್ತ (ಒಡಿಎಫ್) ಎಂದು ಘೋಷಣೆ ಮಾಡಲಾಯಿತು. ಆದರೂ ಮೈಸೂರು ನಗರ, ಬಾಹ್ಯ ಪ್ರದೇಶ ಹಾಗೂ ಗ್ರಾಮಗಳಲ್ಲಿ ಇನ್ನು ಕೂಡ ಬಯಲು ಮಲ ಮತ್ತು ಮೂತ್ರ ವಿಸರ್ಜನೆ ಹೀನ ಪರಿಸ್ಥಿತಿ ಇದ್ದು, ಸರ್ಕಾರ ಸಮರ್ಪಕ ಮೂಲ ಸೌಕರ್ಯ ಕಲ್ಪಿಸಿಲ್ಲ.

ಕೇಂದ್ರ ನಗರಾಭಿವೃದ್ಧಿ ಸಚಿವಾಲಯ 2015ರಲ್ಲಿ ಮೈಸೂರನ್ನು ಭಾರತದ ಅತ್ಯಂತ ಸ್ವಚ್ಛ ನಗರ ಶ್ರೇಯಾಂಕ ಘೋಷಣೆ ಮಾಡಿತು. ಆದರೆ ಮೈಸೂರಿನಲ್ಲಿ ಇನ್ನು ಕೂಡ ಬಯಲು ಶೌಚ ಇದೆ.

ಮೈಸೂರು ನಗರದ ಕೆಲವು ಸ್ಥಳಗಳಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡಿದ್ದರೂ, ಹಲವು ಸ್ಥಳಗಳಲ್ಲಿ ಇದು ಮರೀಚಿಕೆಯಾಗಿದೆ. ಹಾಗಾಗಿ ಹಲವು ಸ್ಥಳಗಳಲ್ಲಿ ಇನ್ನು ಕೂಡ ಬಯಲು ಶೌಚ ತಾಂಡವಾಡುತ್ತಿದೆ. ಇಂತಹ ದುಸ್ಥಿತಿಯಿಂದ ಅತಿಸಾರ, ಕಾಲರಾ, ಟೈಫಾಯಿಡ್‌ನಂತಹ ಸಾಂಕ್ರಾಮಿಕ ಖಾಯಿಲೆಗಳು ಹರಡುತ್ತವೆ. ಸ್ವಾತಂತ್ರ್ಯ ಬಂದು 75 ವರ್ಷವಾದರೂ ಇನ್ನು ಕೂಡ ಇಂತಹ ಅವ್ಯವಸ್ಥೆ ದೊಡ್ಡ ಸವಾಲಾಗಿದೆ.

ಬಯಲು ಶೌಚಕ್ಕೆ ಸರ್ಕಾರವೇ ಒತ್ತಾಸೆ

ಬಯಲು ಶೌಚ ಮಾಡದಂತೆ ಸರ್ಕಾರ ಒಂದು ಕಡೆ ಜಾಗೃತಿ ಮೂಡಿಸಿದರೆ ಮತ್ತೊಂದು ಕಡೆ ಬಯಲು ಶೌಚಕ್ಕೆ ಸರ್ಕಾರವೇ ನೇರ ಕಾರಣವಾಗಿದೆ. ಉದಾಹರಣೆಗೆ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಸರ್ಕಾರ ಸಾವಿರಾರು ಆಶ್ರಯ ಮನೆ ನಿರ್ಮಾಣ ಮಾಡಿದೆ. ಮನೆ ನಿರ್ಮಾಣ ಮಾಡುವಾಗ ಸರ್ಕಾರ ಶೌಚಾಲಯ ನಿರ್ಮಾಣ ಮಾಡಬೇಕಿತ್ತು. ಆದರೆ ಕಳೆದ 25 ವರ್ಷದ ಹಿಂದಿನಿಂದ ಇಲ್ಲಿವರೆಗೆ ನಿರ್ಮಾಣವಾದ ಆಶ್ರಯ ಮನೆಯಲ್ಲಿ ಶೌಚಾಲಯವಿಲ್ಲ. ಮನೆ ಮಂಜೂರಾದ ಫಲಾನುಭವಿಗಳೇ ಶೌಚಾಲಯ ನಿರ್ಮಾಣ ಮಾಡಿಕೊಳ್ಳಬೇಕು ಎಂದು ಸರ್ಕಾರ ತಾಕೀತು ಮಾಡಿದೆ. ಆರ್ಥಿಕವಾಗಿ ಕಷ್ಟದ ಪರಿಸ್ಥಿತಿಯಲ್ಲಿರುವ ಜನರು ಶೌಚಾಲಯ ನಿರ್ಮಾಣಕ್ಕೆ ಸಾವಿರಾರು ರೂಪಾಯಿ ಹೊಂದಿಸಲು ಸಾಧ್ಯವಾಗದೆ ಬಯಲು ಶೌಚ ಮೊರೆ ಹೋಗುತ್ತಾರೆ. ಮನೆ ನಿರ್ಮಾಣ ಮಾಡುವಾಗ ಸರ್ಕಾರವೇ ಶೌಚಾಲಯ ನಿರ್ಮಾಣ ಮಾಡಿದ್ದರೆ ಪ್ರಾಯಶಃ ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಇದರಿಂದ ಬಯಲು ಶೌಚಕ್ಕೆ ಸರ್ಕಾರವೇ ಕಾರಣವಾಗಿದೆ. ಆಶ್ರಯ ಮನೆ ನಿರ್ಮಾಣಕ್ಕೆ ಈ ತನಕ ಸರ್ಕಾರ ಸಾವಿರಾರು ಕೋಟಿ ರೂಪಾಯಿ ವೆಚ್ಚ ಮಾಡಿದೆ. ಸರ್ಕಾರದ ಯಡವಟ್ಟಿನಿಂದ ಇಂದು ಬಯಲು ಶೌಚ ಇನ್ನು ಜೀವಂತವಾಗಿದೆ.

ಸ್ವಚ್ಛ ಬಾರತ್ ಮಿಷನ್ ಪ್ರಕಾರ ಮೈಸೂರು ಜಿಲ್ಲೆಯಲ್ಲಿ ಒಟ್ಟು 4,45,062 ಕುಟುಂಬಗಳಿವೆ. ಇದರಲ್ಲಿ ಹೆಚ್.ಡಿ.ಕೋಟೆಯಲ್ಲಿ 48057, ಹುಣಸೂರಿನಲ್ಲಿ 59692, ಕೆ.ಆರ್.ನಗರದಲ್ಲಿ 24666, ಮೈಸೂರಿನಲ್ಲಿ 54811, ನಂಜನಗೂಡಿನಲ್ಲಿ 89106, ಪಿರಿಯಾಪಟ್ಟಣದಲ್ಲಿ 54878, ಸಾಲಿಗ್ರಾಮದಲ್ಲಿ 20574, ಸರಗೂರಿನಲ್ಲಿ 32938, ತಿ.ನರಸೀಪುರದಲ್ಲಿ 60340 ಕುಟುಂಬಗಳಿವೆ.

ಇದರಲ್ಲಿ ಈಗಾಗಲೇ 4,19,927 ಕುಟುಂಬಗಳಲ್ಲಿ ಶೌಚಾಲಯ ನಿರ್ಮಾಣ ಮಾಡಲಾಗಿದೆ. ಇದರಲ್ಲಿ ಹೆಚ್.ಡಿ.ಕೋಟೆಯಲ್ಲಿ 44618, ಹುಣಸೂರಿನಲ್ಲಿ 58130, ಕೆ.ಆರ್.ನಗರದಲ್ಲಿ 22190, ಮೈಸೂರಿನಲ್ಲಿ 51662, ನಂಜನಗೂಡಿನಲ್ಲಿ 89106, ಪಿರಿಯಾಪಟ್ಟಣದಲ್ಲಿ 53039, ಸಾಲಿಗ್ರಾಮದಲ್ಲಿ 17226, ಸರಗೂರಿನಲ್ಲಿ 29954, ತಿ.ನರಸೀಪುರದಲ್ಲಿ 57909 ಶೌಚಾಲಯಗಳು ನಿರ್ಮಾಣ ಮಾಡಲಾಗಿದೆ.

ಸರ್ಕಾರ ತನ್ನ ಅನುದಾನದಲ್ಲಿ ಶೌಚಾಲಯ ನಿರ್ಮಾಣ ಮಾಡುವುದಕ್ಕಿಂತ ಮುಂಚೆಯೇ ಮೈಸೂರು ಜಿಲ್ಲೆಯ 8786 ಕುಟುಂಬಗಳು ಶೌಚಾಲಯ ನಿರ್ಮಾಣ ಮಾಡಿಕೊಂಡಿತ್ತು. ಈ ಮೂಲಕ ಮೈಸೂರು ಜಿಲ್ಲೆಯಲ್ಲಿ ಒಟ್ಟು 4,28,713 ಶೌಚಾಲಯ ನಿರ್ಮಾಣವಾಗಿದೆ. ಮೈಸೂರು ಜಿಲ್ಲಾ ಪಂಚಾಯತ್ ಸರ್ವೆ ಮಾಡಿರುವ ಪ್ರಕಾರ ಇನ್ನು 16,349 ಶೌಚಾಲಯ ನಿರ್ಮಾಣ ಮಾಡಬೇಕಿದೆ. ಇದರಲ್ಲಿ ಸಿಟಿಜನ್ ಆಪ್ ಮೂಲಕ 13,655 ಶೌಚಾಲಯ ನಿರ್ಮಾಣಕ್ಕೆ ಅರ್ಜಿ ಸ್ವೀಕೃತವಾಗಿದ್ದು, ಶೌಚಾಲಯ ನಿರ್ಮಾಣ ಕಾರ್ಯ ಆರಂಭವಾಗಿದೆ. ಆದರೆ ಇನ್ನು 2,694 ಶೌಚಾಲಯ ನಿರ್ಮಾಣಕ್ಕೆ ಸಿಟಿಜನ್ ಆಪ್ ಮೂಲಕ ಅರ್ಜಿ ಸ್ವೀಕರಿಸಲು ಬಾಕಿ ಇದೆ. ಇವುಗಳ ಅರ್ಜಿ ಸ್ವೀಕೃತವಾದ ನಂತರ ಬಾಕಿ ಶೌಚಾಲಯ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲು ಜಿಲ್ಲಾ ಪಂಚಾಯಿತಿ ತೀರ್ಮಾನಿಸಿದೆ.

2025ರ ಮಾರ್ಚ್ ವೇಳೆಗೆ ಪ್ರತಿ ಮನೆಯಲ್ಲಿ ಶೌಚಾಲಯ

"2025, ಮಾರ್ಚ್ ವೇಳೆಗೆ ಮೈಸೂರು ಜಿಲ್ಲೆಯ ಪ್ರತಿ ಮನೆಯಲ್ಲಿ ಶೌಚಾಲಯ ನಿರ್ಮಾಣ ಮಾಡುವ ಗುರಿ ಹೊಂದಲಾಗಿದೆ. ಮನೆಯಲ್ಲಿ ಅಣ್ಣ ತಮ್ಮಂದಿರು ಭಾಗವಾಗಿ ಹೊಸ ಮನೆ ನಿರ್ಮಾಣ ಮಾಡಿಕೊಂಡ ಸಂದರ್ಭದಲ್ಲಿ ಶೌಚಾಲಯ ಇರುವುದಿಲ್ಲ. ಇದರಿಂದ 16,349 ಶೌಚಾಲಯ ನಿರ್ಮಾಣ ಬಾಕಿ ಇದೆ. ಈಗ ಬಾಕಿ ಇರುವ 16,349 ಶೌಚಾಲಯದಲ್ಲಿ 13,655 ಶೌಚಾಲಯ ನಿರ್ಮಾಣ ಕಾರ್ಯ ಆರಂಭಿಸಲಾಗಿದೆ. ಉಳಿದ 2,694 ಶೌಚಾಲಯ ನಿರ್ಮಾಣ ಪೂರ್ಣ ಮಾಡಲಾಗುವುದು. ಈ ಮೂಲಕ 2025, ಮಾರ್ಚ್ ವೇಳೆ ಮೈಸೂರಿನ ಪ್ರತಿ ಮನೆಯಲ್ಲಿ ಶೌಚಾಲಯ ನಿರ್ಮಾಣ ಮಾಡುವ ಗುರಿ ಹೊಂದಲಾಗಿದೆ.

-ಎಂ.ಕೃಷ್ಣರಾಜು, ಮೈಸೂರು ಜಿಪಂ. ಉಪ ಕಾರ್ಯದರ್ಶಿ (ಅಭಿವೃದ್ಧಿ)

ಚಾಮುಂಡಿಬೆಟ್ಟ ಪಾದದ ಬಳಿ ಜಾಗ ಅತಿಕ್ರಮಣ

- ಎರಡು ಬದಿಗಳಲ್ಲೂ ತಂತಿ ಬೇಲಿ ಹಾಕಿಕೊಂಡಿರುವ ಖಾಸಗಿಯವರು
- ಪ್ರಾಧಿಕಾರ ರಚನೆಯಾದ ನಂತರ ಹೆಚ್ಚಾದ ಅಕ್ರಮ; ಮಾಜಿ ಮೇಯರ್ ಬಿ.ಎಲ್.ಭೈರಪ್ಪ



ಮೈಸೂರು, ಅ.16(ಜಿಎ)–ಚಾಮುಂಡಿ ಬೆಟ್ಟದ ಪಾದದ ಎರಡೂ ಬದಿಯನ್ನು ಕೆಲವು ಖಾಸಗಿ ಸಂಸ್ಥೆಗಳು ಅಕ್ರಮವಾಗಿ ಅತಿಕ್ರಮಿಸಿಕೊಂಡು ತಂತಿಬೇಲಿ ಹಾಕಿಕೊಂಡಿದ್ದು, ಇದರಿಂದ ವಾಹನ ಪಾರ್ಕಿಂಗ್‌ಗೆ ಸ್ಥಳಾವಕಾಶವಿಲ್ಲದೆ ಸಾರ್ವಜನಿಕರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಆರೋಪಿಸಿದರು.


ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದ ನಂತರ ಯಾವುದೇ ಅಕ್ರಮಗಳು ಬೆಟ್ಟದಲ್ಲಿ ನಡೆಯುವುದಿಲ್ಲ ಎಂಬ ಭಾವನೆ ಇತ್ತು. ಆದರೆ, ಪ್ರಾಧಿಕಾರ ರಚನೆಗೊಂಡ ನಂತರವೇ ಹೆಚ್ಚು ಅಕ್ರಮಗಳು ನಡೆಯುತ್ತಿದ್ದು, ಚಾಮುಂಡಿಬೆಟ್ಟದ ಪಾದ ಬಳಿ ಇರುವ ಎರಡು ಭಾಗದಲ್ಲಿ ಖಾಸಗಿ ಸಂಸ್ಥೆಯವರು ಅಕ್ರಮವಾಗಿ ಬೇಲಿ ಹಾಕಿಕೊಂಡಿದ್ದಾರೆ. ಇದನ್ನು ಗಮನಿಸಿದರೆ, ಪ್ರಾಧಿಕಾರ ಬಂದ ನಂತರ ಹೇಳುವವರು, ಕೇಳುವವರು ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಳೆದ 50 ವರ್ಷಗಳಿಂದ ಈ ಸ್ಥಳದಲ್ಲಿ ಯಾವುದೇ ಖಾಸಗಿ ಸ್ವತ್ತು ಇರಲಿಲ್ಲ. ಆದರೆ, ಈಗ ಏಕಾಏಕಿ ಉದ್ಭವವಾಗುತ್ತಿವೆ. ಇದನ್ನು ಪ್ರಶ್ನಿಸಿದರೆ, ನಮ್ಮ ಬಳಿ ಸೂಕ್ತ ದಾಖಲೆಗಳಿವೆ ಎಂಬ ಉತ್ತರ ಕೇಳಿಬರುತ್ತಿದೆ. ಜಿಲ್ಲಾಡಳಿತ ಚಾಮುಂಡಿಬೆಟ್ಟದಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಚಾಮುಂಡಿಬೆಟ್ಟದ ನಂದಿ ಮಾರ್ಗದ ರಸ್ತೆ ಕುಸಿದು 5 ವರ್ಷ ಕಳೆದಿದ್ದು, ಈವರೆಗೂ ಕಾಮಗಾರಿ ನಡೆಯುತ್ತಿದೆ. ಆ ಕಾಮಗಾರಿ ನೋಡುತ್ತಿದ್ದರೆ ಈ ಕಾಲಕ್ಕೆ ಅದು ಪೂರ್ಣಗೊಳ್ಳುವ ರೀತಿ ಕಾಣುತ್ತಿಲ್ಲ. ಅದು ಅವೈಜ್ಞಾನಿಕವಾಗಿ ನಿರ್ಮಾಣವಾಗುತ್ತಿದೆ. ಮೊದಲು ಇದ್ದ ರಸ್ತೆಗೂ ಈ ರಸ್ತೆಗೂ ಅಜಗಜಾಂತರ ವ್ಯತ್ಯಾಸವಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಟೆನಿಸ್ ಅಕಾಡೆಮಿ ಅಧ್ಯಕ್ಷ ವಾಸು, ಜೆ.ಪಿ.ನಗರದ ನಿವಾಸಿ ವೆಂಕಟೇಶ್ ಉಪಸ್ಥಿತರಿದ್ದರು.

ದೀಪಾವಳಿಗೂ ಮುನ್ನ ಕೇಂದ್ರ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಶೇ.3ರಷ್ಟು ಹೆಚ್ಚಳ



ನವದೆಹಲಿ, ಅ.16– ಕೇಂದ್ರ ಸರಕಾರಿ ನೌಕರರಿಗೆ ಮತ್ತು ಪಿಂಚಣಿದಾರರಿಗೆ ದೀಪಾವಳಿ ಹಬ್ಬಕ್ಕೂ ಮುನ್ನವೇ ಕೇಂದ್ರ ಸರ್ಕಾರ ತುಟ್ಟಿ ಭತ್ಯೆಯನ್ನು ಶೇ.3ರಷ್ಟು ಹೆಚ್ಚಿಸಲು ಮುಂದಾಗಿದೆ. ಇಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಕೇಂದ್ರ ಸರ್ಕಾರಿ ನೌಕರರ ತುಟ್ಟಿಭತ್ಯೆ ಏರಿಕೆಗೆ ಅಸ್ತು ಎನ್ನಲಾಗಿದೆ. ಇದರೊಂದಿಗೆ ಕೇಂದ್ರ ಸರಕಾರಿ ನೌಕರರ ಒಟ್ಟಾರೆ ತುಟ್ಟಿಭತ್ಯೆ ಹಾಲಿ ಶೇ.50ರಿಂದ ಶೇ.53ಕ್ಕೆ ಏರಲಿದೆ.

ಇದರಿಂದ 10 ಲಕ್ಷಕ್ಕೂ ಹೆಚ್ಚು ಫಲಾನುಭವಿ ನೌಕರರು ಇದರ ಪ್ರಯೋಜನ ಪಡೆಯಲಿದ್ದಾರೆ. ತಿಂಗಳಿಗೆ ರೂ 18,000 ಗಳಿಸುವ ಉದ್ಯೋಗಿ ಹೆಚ್ಚುವರಿ ರೂ 540 ಅನ್ನು ಟೇಕ್–ಹೋಮ್ ಪೇ ಆಗಿ ಪಡೆಯುತ್ತಾನೆ. ಸಾಮಾನ್ಯವಾಗಿ ವರ್ಷಕ್ಕೆ ಎರಡು ಬಾರಿ ಘೋಷಿಸಲಾಗುವ ಡಿಎ ಪರಿಷ್ಕರಣೆಯ ವಿಳಂಬವು ನೌಕರರ ಸಂಘಗಳ ಅಸಮಾಧಾನಕ್ಕೆ ಕಾರಣವಾಗಿತ್ತು. ಈ ಬಗ್ಗೆ ತ್ವರಿತ ಕ್ರಮ ಕೈಗೊಳ್ಳುವಂತೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಒತ್ತಾಯಿಸಿತ್ತು.

ಈ ಡಿಎ ಹೆಚ್ಚಳವು 7ನೇ ವೇತನ ಆಯೋಗದ ಶಿಫಾರಸುಗಳನ್ನು ಆಧರಿಸಿದ ಸಾವಿರಾರು ಕೇಂದ್ರ ಸರಕಾರಿ ನೌಕರರು ಮತ್ತು ಪಿಂಚಣಿದಾರರಿಗೆ ಪ್ರಯೋಜನ ನೀಡಲಿದೆ. ಕಳೆದ ಮಾರ್ಚ್ 7ರಂದು ಈ ವರ್ಷದ ಮೊದಲ ಡಿಎ ಹೆಚ್ಚಳ ಪ್ರಕಟಿಸಿತ್ತು. ಆ ಸಂದರ್ಭದಲ್ಲಿ ಜನವರಿ 1ರಿಂದ ಪೂರ್ವಾನ್ವಯವಾಗುವಂತೆ ಈ ಏರಿಕೆ ಮಾಡಲಾಗಿತ್ತು. ಕೇಂದ್ರ ಸರ್ಕಾರ ವರ್ಷದಲ್ಲಿ ಎರಡು ಬಾರಿ, ಅಂದರೆ ಜನವರಿ ಹಾಗೂ ಜುಲೈನಲ್ಲಿ ತುಟ್ಟಿಭತ್ಯೆ ಏರಿಕೆ ಮಾಡುತ್ತದೆ. ಆದರೆ, ಸಾಮಾನ್ಯವಾಗಿ ಇದನ್ನು ಅಧಿಕೃತವಾಗಿ ನಂತರದ ತಿಂಗಳುಗಳಲ್ಲಿ ಘೋಷಿಸಲಾಗುತ್ತದೆ. ಡಿಎ ಏರಿಕೆಯಾದರೆ, ಕೇಂದ್ರ ಸರಕಾರಿ ನೌಕರರ ಟೇಕ್–ಹೋಮ್ ವೇತನದಲ್ಲಿ ಹೆಚ್ಚಳವಾಗಲಿದೆ.

ಮೂರನೇ ಪುಟದಿಂದ

ವಿಜೃಂಭಣೆಯ ನಾಡದೇವಿ ರಥೋತ್ಸವ

ಬಾಳೆಹಣ್ಣು–ಜವನ ಎಸೆಯುವ ಮೂಲಕ ವಿಶೇಷವಾಗಿ ಪ್ರಾರ್ಥನೆ ಸಲ್ಲಿಸಿದರು.

ರಾಜವಂಶಸ್ಥರ ಗೈರು: ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ದಂಪತಿಗೆ ಎರಡನೇ ಮಗು ಜನನವಾದ ಹಿನ್ನೆಲೆಯಲ್ಲಿ ರಾಜ ವಂಶಸ್ಥರು ರಥೋತ್ಸವದಲ್ಲಿ ಪಾಲ್ಗೊಳ್ಳಲಿಲ್ಲ. ನವರಾತ್ರಿ ಪೂಜಾ ಮಹೋತ್ಸವ ನುಗಿದ ನಂತರ ಕಂಕಣ ವಿಸರ್ಜನೆ ಮಾಡಿರುವುದರಿಂದ ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಳ್ಳಲು ಸೂತಕ ಅಡ್ಡಿಯಾಗುವುದರಿಂದ ಇಂದು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಆದ್ಯವೀರ್ ಒಡೆಯರ್ ಸೇರಿದಂತೆ ರಾಜಮನೆತದವರು ಬೆಟ್ಟಕ್ಕೆ ಬಂದಿರಲಿಲ್ಲ. ರಾಜಮನೆತನದ ಪರವಾಗಿ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ಪೂಜೆ ಸಲ್ಲಿಸಿದರು.

ಬಿಗಿ ಭದ್ರತೆ: ರಥೋತ್ಸವದ ಅಂಗವಾಗಿ ಬೆಟ್ಟದಲ್ಲಿ ಜನಸಾಗರವೇ ಸೇರಿತ್ತು. ರಥೋತ್ಸವದ ಸಾಗುವ ಮಾರ್ಗ ಹಾಗೂ ರಥದ ಸುತ್ತಲೂ ಜನ ಸೇರದಂತೆ ಕಟ್ಟೆಚ್ಚರ ವಹಿಸಲಾಗಿತ್ತು. ಅಲ್ಲದೆ, ನೂಕುನುಗ್ಗಲು ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿತ್ತು.

ರಥೋತ್ಸವದ ವೇಳೆ ಶಾಸಕ ಜಿ.ಟಿ.ದೇವೇಗೌಡ, ಲಲಿತಾ ಜಿ.ಟಿ. ದೇವೇಗೌಡ ಕುಟುಂಬದ ಸದಸ್ಯರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ. ರೂಪ ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟದಲ್ಲಿ ರಾಜಕೀಯ ಮಾತಾಡಲ್ಲ: ಶಾಸಕ ಜಿಟಿಡಿ

ಚಾಮುಂಡಿಬೆಟ್ಟದಲ್ಲಿ ರಾಜಕೀಯ ಮಾತನಾಡಿ ಅಪವಿತ್ರ ಮಾಡಿದ್ದಾರೆ ಎಂದು ಸ್ವಪಕ್ಷೀಯರು ಸೇರಿದಂತೆ ಕೆಲ ಮುಖಂಡರು ಆರೋಪಿಸಿರುವ ಹಿನ್ನೆಲೆಯಲ್ಲಿ ನಾನು ಇಂದು ರಾಜಕೀಯ ಮಾತನಾಡುವುದಿಲ್ಲ ಎಂದು ಶಾಸಕ ಜಿ.ಟಿ.ದೇವೇಗೌಡ ಬೇಸರ ವ್ಯಕ್ತಪಡಿಸಿದ್ದಾರೆ. ಚಾಮುಂಡಿಬೆಟ್ಟದಲ್ಲಿ ರಥೋತ್ಸವದಲ್ಲಿ ಪಾಲ್ಗೊಂಡ ಬಳಿಕ ಪತ್ರಕರ್ತರು ಮುಡಾ ಅಧ್ಯಕ್ಷರ ರಾಜೀನಾಮೆ ಹಾಗೂ ಚನ್ನಪಟ್ಟಣ ಉಪ ಚುನಾವಣೆ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಲು ನಿರಾಕರಿಸಿದರು. ನಾಡಹಬ್ಬ ದಸರಾ ಮಹೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ್ದಕ್ಕೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಚಾಮುಂಡಿ ಬೆಟ್ಟದಲ್ಲಿ ರಾಜಕೀಯ ಮಾತನಾಡೋದಿಲ್ಲ. ನಾನು ದಸರಾ ವೇಳೆ ವೇದಿಕೆಯಲ್ಲಿ ಮಾತನಾಡಿದ್ದು ಅಪವಿತ್ರ ಎಂದರು. ಸಾಕಷ್ಟು ಜನ ನನಗೆ ಬುದ್ಧಿ ಹೇಳಿದ್ದಾರೆ. ಜಿ.ಟಿ.ದೇವೇಗೌಡ ಚಾಮುಂಡಿ ಸನ್ನಿಧಿಯನ್ನು ಅಪವಿತ್ರ ಮಾಡಿಬಿಟ್ಟರು ಎಂದು ಮಾತನಾಡಿದ್ದಾರೆ. ಅದಕ್ಕಾಗಿ ನಾನು ಇಲ್ಲಿ ಯಾವುದೇ ರಾಜಕಾರಣ ಮಾತನಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ನಾಡಿನ ಜನರಿಗೆ ತಾಯಿ ಚಾಮುಂಡೇಶ್ವರಿ ಒಳ್ಳೆಯದು ಮಾಡಲಿ ಎಂದಷ್ಟೇ ಹೇಳಿ ನಿರ್ಗಮಿಸಿದರು.

ಅಂಬಾರಿ ಅಟ್ಟಕ್ಕೇರಿ ವಿದ್ಯುತ್ ದೀಪಗಳ ಶೃಂಗಾರ ಕಣ್ತುಂಬಿಕೊಳ್ಳಲು ಉತ್ಸುಕತೆ!

ಅಂಬಾರಿ ಬಸ್ ಅಪ್ಪರ್ ಡೆಕ್‌ನಲ್ಲಿ ಸಂಚರಿಸಲು ಅ.22ರವರೆಗೂ ಶೇ.100ರಷ್ಟು ಬುಕಿಂಗ್





ಅಪ್ಪರ್ ಡೆಕ್‌ಗೆ ತಲಾ 500 ಹಾಗೂ ಲೋಯರ್ ಡೆಕ್‌ಗೆ ತಲಾ 250 ರೂ. ಟಿಕೆಟ್ ದರವಿದೆ (5 ವರ್ಷ ಮೇಲ್ಪಟ್ಟ ಮಕ್ಕಳಿಗೂ ಸಂಪೂರ್ಣ ಶುಲ್ಕ). ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಿಗಮದ ಹೋಟೆಲ್ ಮಯೂರ ಹೊಯ್ಸಳ ಆವರಣದಿಂದ ಸಂಚಾರ ಪ್ರಾರಂಭವಾಗಲಿದೆ. ಹಳೆ ಡಿಸಿ ಕಚೇರಿ, ಕ್ರಾಫರ್ಡ್ ಹಾಲ್, ಓರಿಯೆಂಟಲ್ ಸೆಂಟ್ರಲ್ ಲೈಬ್ರರಿ, ರಾಮಸ್ವಾಮಿ ವೃತ್ತ, ಸಂಸ್ಕೃತ ಪಾಠಶಾಲಾ, ಅರಮನೆ ದಕ್ಷಿಣ ದ್ವಾರ, ಜಯಮಾರ್ತಾಂಡ ದ್ವಾರದ ಸರ್ಕಲ್ ಗೇಟ್, ಹಾರ್ಡಿಂಜ್ ಸರ್ಕಲ್, ಕೆಆರ್ ಸರ್ಕಲ್, ಸಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ವೃತ್ತ ರೈಲ್ವೆ ನಿಲ್ದಾಣ ವೃತ್ತದ ಮಾರ್ಗದಲ್ಲಿ ಸಂಚಾರ ಮಾಡಲಿರುವ ಅಂಬಾರಿ ಬಸ್‌ಗಳು ಅಂತಿಮವಾಗಿ ಮಯೂರ ಹೊಯ್ಸಳ ಹೋಟೆಲ್ ಆವರಣಕ್ಕೆ ಮರಳಿ ಒಂದು ತಾಸಿನ ಸಂಚಾರ ಕೊನೆಗೊಳಿಸಲಿವೆ. ಪ್ರತಿದಿನ ಸಂಜೆ 6.30, 8 ಮತ್ತು 9 ಗಂಟೆಗೆ ಅಂಬಾರಿ ಬಸ್‌ಗಳ ಸಂಚಾರ ಪ್ರಾರಂಭವಾಗಲಿದೆ (ಆನ್‌ಲೈನ್ ಬುಕಿಂಗ್–**www.kstdc.co**, ದೂರವಾಣಿ ಸಂಖ್ಯೆ–0821–2423652).

ಮೈಸೂರು,ಅ.16(ಪಿಎಂ)– ಅಂಬಾರಿ ಅಟ್ಟಕ್ಕೇರಲು ಉತ್ಸುಕತೆ ಕಂಡು ಬಂದಿದ್ದು, ಮೈಸೂರು ನಗರದಲ್ಲಿನ ದಸರಾ ದೀಪಾಲಂಕಾರ ಕಣ್ತುಂಬಿಕೊಳ್ಳಲು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ) ಕಲ್ಪಿಸಿರುವ ಅಂಬಾರಿ ಡಬಲ್ ಡೆಕ್ಕರ್ ಬಸ್ ಪ್ರಯಾಣಕ್ಕೆ ಆರಂಭದಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅದರಲ್ಲಿಯೂ ಈ ಬಸ್‌ನ ಅಪ್ಪರ್ ಡೆಕ್‌ನಲ್ಲಿ ಪ್ರಯಾಣಿಸಲು ಅ.22ರವರೆಗೆ ಶೇ.100ರಷ್ಟು ಬುಕಿಂಗ್ ಪೂರ್ಣಗೊಂಡಿದೆ.

ಬಸ್‌ನ ಮೇಲ್ಭಾಗದ (ಅಪ್ಪರ್ ಡೆಕ್) ಸೀಟುಗಳಲ್ಲಿ ಆಸೀನರಾಗಿ ಓಪನ್ ಟಾಪ್‌ನಲ್ಲಿ ದೀಪಾಲಂಕಾರ ಸವಿಯಲು ಪೂರ್ಣ ಪ್ರಮಾಣದಲ್ಲಿ ಬುಕಿಂಗ್ ಆಗಿದೆ. ಅಂತೆಯೇ ಈ ಮಾದರಿಯ ಬಸ್‌ಗಳ ಲೋಯರ್ ಡೆಕ್‌ನಲ್ಲಿ (ಬಸ್‌ನ ಕೆಳಭಾಗ) ಪ್ರಯಾಣ ಮಾಡುವ ಮೂಲಕ ನಗರದ ದೀಪಾಲಂಕಾರ ಆಸ್ವಾದಿಸಲೂ ಶೇ.65ರಷ್ಟು ಬುಕಿಂಗ್ ಆಗಿದೆ.

ನಾಡಹಬ್ಬ ಮೈಸೂರು ದಸರಾದಲ್ಲಿ ನಗರದ ವೃತ್ತ, ರಸ್ತೆಗಳನ್ನು ವಿದ್ಯುತ್ ದೀಪಗಳಿಂದ ಆಕರ್ಷಣೀಯವಾಗಿ ಶೃಂಗರಿಸುವುದೂ ಒಂದು ವಿಶೇಷ. ಪ್ರತಿ ವರ್ಷದಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಸೆಸ್ಕ್)ದಿಂದ ದಸರಾ ದೀಪಾಲಂಕಾರ ಮಾಡಲಾಗಿದ್ದು, ಅರಮನೆ ಸುತ್ತಲಿನ ರಸ್ತೆಗಳು ಸೇರಿದಂತೆ ನಗರದ 130 ಕಿ.ಮೀ. ವ್ಯಾಪ್ತಿಯಲ್ಲಿ ರಸ್ತೆಗಳಿಗೆ ದೀಪಾಲಂಕಾರ ಮಾಡಲಾಗಿದೆ. ಜೊತೆಗೆ ವಿವಿಧೆಡೆ ವಿದ್ಯುತ್ ದೀಪಗಳಿಂದಲೇ ನಿರ್ಮಿಸಿರುವ 65ಕ್ಕೂ ಹೆಚ್ಚು ಕಲಾಕೃತಿಗಳು ಆಕರ್ಷಿಸುತ್ತಿವೆ.

ಅ.3ರಿಂದ ಇಂತಹ ಮನಮೋಹಕ ದೃಶ್ಯಾವಳಿ ನಗರದಲ್ಲಿ ಮನಸೆಳೆಯುತ್ತಿದ್ದು, ದಸರಾ ಮುಗಿದರೂ ದೀಪಾಲಂಕಾರ ಅ.23ರವರೆಗೆ (21 ದಿನಗಳು) ಮುಂದುವರೆದಿದೆ. ಅಂತೆಯೇ ದೀಪಾಲಂಕಾರ ನೋಡುವ ಜನರ ಕ್ರೇಜ್ ಸಹ ಮುಂದುವರೆದಿದೆ. ಹಾಗಾಗಿಯೇ ಅಂಬಾರಿ ಬಸ್‌ಗಳಲ್ಲಿ ಪ್ರಯಾಣಿಸಲು ಬೇಡಿಕೆ ಹೆಚ್ಚಾಗಿದೆ.

'ಅಂಬಾರಿ ದಸರಾ ದೀಪಾಲಂಕಾರ ಸುತ್ತಾಟದ ಪ್ರಯಾಣ' ಶೀರ್ಷಿಕೆಯಡಿ ಕೆಎಸ್‌ಟಿಡಿಸಿ ಈ ಪ್ರವಾಸ ಸೌಲಭ್ಯ ಕಲ್ಪಿಸಿದೆ. 2021ರಿಂದ ಈ ಪ್ರವಾಸ ಕಾರ್ಯಕ್ರಮ ನಡೆಯುತ್ತಿದ್ದು, ಪ್ರಸ್ತುತ ನಾಲ್ಕನೇ ವರ್ಷದ ಅಂಬಾರಿ ಬಸ್ ಸುತ್ತಾಟ ನಡೆಯುತ್ತಿದೆ. ಸಂಜೆ ಹೊತ್ತಿನಲ್ಲಿ ಒಂದು ತಾಸು ಈ ಬಸ್‌ಗಳಲ್ಲಿ ಸಂಚರಿಸಿ ದೀಪಾಲಂಕಾರದ ಸೊಬಗು ಸವಿಯಲು ಜನ ಮನಸೋತಿದ್ದಾರೆ. ಪ್ರತಿದಿನ ಒಟ್ಟು 6 ಬಸ್‌ಗಳು ಈ ರೀತಿಯಲ್ಲಿ ಸಂಚರಿಸುತ್ತಿದ್ದು, ಪ್ರತಿ ಬಸ್‌ನ ಅಪ್ಪರ್ ಡೆಕ್ 20, ಲೋಯರ್ ಡೆಕ್ 20 ಆಸನಗಳನ್ನು ಹೊಂದಿವೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕೆಎಸ್‌ಟಿಡಿಸಿ ಮೈಸೂರು ಸಾರಿಗೆ ವಿಭಾಗದ ವ್ಯವಸ್ಥಾಪಕ ಕೆ.ಆರ್.ಮಧುರಾಜ್, ಪ್ರತಿದಿನ ಸಂಜೆ 6.30, 8 ಮತ್ತು 9 ಗಂಟೆಗೆ ಅಂಬಾರಿ ಬಸ್‌ಗಳ ಸಂಚಾರ ಆರಂಭಗೊಳ್ಳಲಿದೆ. ಈ ಬಸ್‌ಗಳಲ್ಲಿ ಪ್ರಯಾಣಿಸಲು ಆನ್‌ಲೈನ್ ಮೂಲಕ ಬುಕ್ ಮಾಡಿಕೊಳ್ಳಬೇಕು. ಒಂದು ಬಸ್‌ನಲ್ಲಿ ಅಪ್ಪರ್ ಡೆಕ್ ಮತ್ತು ಲೋಯರ್ ಡೆಕ್ ಸೇರಿದಂತೆ 40 ಆಸನಗಳಿದ್ದು, 6 ಬಸ್‌ಗಳಲ್ಲಿ ಒಮ್ಮೆಗೆ 240 ಮಂದಿ ಪ್ರಯಾಣಿಸಲು ಅವಕಾಶವಿದೆ. ಇದಲ್ಲದೆ, ಆನ್‌ಲೈನ್ ಬುಕಿಂಗ್ ಮಾಡಿಕೊಳ್ಳದವರಿಗೆ ಕೌಂಟರ್‌ನಲ್ಲಿ ಟಿಕೆಟ್ ನೀಡಿ ಪ್ರಯಾಣಿಸಲೂ ಅವಕಾಶ ಮಾಡಿಕೊಡಲಾಗಿದೆ. ಒಂದು ಬಸ್‌ಗೆ ಇಂತಹ 6 ಮಂದಿಗೆ ಅವಕಾಶ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ಪ್ರತಿವರ್ಷದಂತೆ ಈ ಬಾರಿಯೂ ಆರಂಭದಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅಪ್ಪರ್ ಡೆಕ್‌ನಲ್ಲಿ ಪ್ರಯಾಣಿಸಲು ಅ.22ರವರೆಗೆ ಶೇ.100ರಷ್ಟು ಬುಕಿಂಗ್ ಸಂಪೂರ್ಣವಾಗಿದೆ. ಅದೇ ರೀತಿ ಲೋಯರ್ ಡೆಕ್‌ಗೆ ಶೇ.65ರಷ್ಟು ಬುಕಿಂಗ್ ಆಗಿದೆ. ಇದು ಸಹ ವಾರಾಂತ್ಯದಲ್ಲಿ ಪೂರ್ಣ ಬುಕಿಂಗ್ ಆಗಿದೆ ಎಂದು ಹೇಳಿದರು.

ರಾಜ್ಯಮಟ್ಟದ ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಬೆಂಗಳೂರು ಸೌತ್, ನಾರ್ತ್ ಚಾಂಪಿಯನ್

ಮೈಸೂರು, ಅ.16(ಎಂಕೆ)– ಮೈಸೂರು ವಿವಿ ಮಾನಸಗಂಗೋತ್ರಿಯಲ್ಲಿರುವ ಮಾನಸ ಒಳಾಂಗಣ ಕ್ರೀಡಾಂಗಣದಲ್ಲಿ ಶಾಲಾ ಶಿಕ್ಷಣ ಇಲಾಖೆ(ಪ.ಪೂ) ಮೈಸೂರು ಜಿಲ್ಲೆ, ಶ್ರೀ ರಾಮಕೃಷ್ಣ ವಿದ್ಯಾಶಾಲಾ ಮೈಸೂರು ಸಂಯುಕ್ತಾಶ್ರಯದಲ್ಲಿ ನಡೆದ ರಾಜ್ಯಮಟ್ಟದ ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಬಾಲಕರ ವಿಭಾಗದಲ್ಲಿ ಬೆಂಗಳೂರು ಸೌತ್(ದಕ್ಷಿಣ) ಹಾಗೂ ಬಾಲಕಿಯರ ವಿಭಾಗದಲ್ಲಿ ಬೆಂಗಳೂರು ನಾರ್ತ್ (ಉತ್ತರ) ಚಾಂಪಿಯನ್ ಆಯಿತು.

ಬಾಲಕರ ವಿಭಾಗದ ಡಬಲ್ಸ್ ಫೈನಲ್ ಪಂದ್ಯದಲ್ಲಿ ದಕ್ಷಿಣ ಕನ್ನಡ ತಂಡದ ವಿರುದ್ಧ ಬೆಂಗಳೂರು ಸೌತ್ ತಂಡ 1–2(21–18, 14–21, 13–21) ಅಂತರದಲ್ಲಿ ಜಯ ಗಳಿಸುವ ಮೂಲಕ ಚಾಂಪಿಯನ್ ಆದರೆ ಗೆಲುವಿಗಾಗಿ ಹೋರಾಟ ನಡೆಸಿದ ದಕ್ಷಿಣ ಕನ್ನಡ ತಂಡ ರನ್ನರ್ ಅಪ್ ಆಯಿತು. ಹಾಗೆಯೇ ಬಾಲಕಿಯರ ವಿಭಾಗದ ಡಬಲ್ಸ್‌ನಲ್ಲಿ ಮೈಸೂರು ತಂಡದ ವಿರುದ್ಧ ಬೆಂಗಳೂರು ನಾರ್ತ್ 0–2(13–21, 13–21) ಅಂತರದಲ್ಲಿ ಜಯ ಗಳಿಸಿತು.

ಬಾಲಕರ ಸಿಂಗಲ್ಸ್‌ನಲ್ಲಿ ದಕ್ಷಿಣ ಕನ್ನಡದ ಅಂಶುಲ್ ವಿರುದ್ಧ ಬೆಂಗಳೂರು ಸೌತ್‌ನ ಧ್ಯಾನ್ 05–21, 05–21 ನೇರ ಸೆಟ್‌ಗಳ ಮೂಲಕ ಜಯ ಗಳಿಸಿದರೆ, ಬಾಲಕಿಯರ ವಿಭಾಗದಲ್ಲಿ ಸಿಂಗಲ್ಸ್‌ನಲ್ಲಿ ಬೆಂಗಳೂರು ನಾರ್ತ್‌ನ ಅನನ್ಯ ವಿರುದ್ಧ ಮೈಸೂರಿನ ದಿವ್ಯ 08–21, 08–21 ಅಂತರದಲ್ಲಿ ಗೆಲುವು ದಾಖಲಿಸಿದರು.

ಬಳಿಕ ನಡೆದ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ವಿಜೇತ ತಂಡಗಳಿಗೆ ಟ್ರೋಫಿ, ಪದಕಗಳು ಹಾಗೂ ಪ್ರಮಾಣ ಪತ್ರ ನೀಡಿ ಅಭಿನಂದಿಸಲಾಯಿತು. ಸಮಾರೋಪ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶಾಲಾ ಶಿಕ್ಷಣ ಇಲಾಖೆ(ಮಾನ್ಯತೆ ಮತ್ತು ಅನುದಾನ) ಬೆಂಗಳೂರು ಉಪ ನಿರ್ದೇಶಕ ಸಿದ್ದರಾಜು ಮಾತನಾಡಿ, ರಾಜ್ಯಮಟ್ಟದ ಪಂದ್ಯಾವಳಿಯಲ್ಲಿ ಜಯಗಳಿಸಿರುವ ಪಟುಗಳು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲೂ ಗೆಲ್ಲಬೇಕು. ಆಟದಲ್ಲಿ ಶಕ್ತಿಯ ಜೊತೆಗೆ ಯುಕ್ತಿಯ ಪ್ರದರ್ಶನವೂ ಮುಖ್ಯವಾಗಿದ್ದು, ಎಲ್ಲಾ ಬ್ಯಾಡ್ಮಿಂಟನ್ ಉತ್ತಮವಾಗಿ ಆಟವಾಡಿದ್ದೀರಿ. ಯಾವುದಾದರೂ ಒಂದು ಕ್ರೀಡೆಯಲ್ಲಿ ರಾಜ್ಯ, ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದರೆ, ಸರ್ಕಾರಿ ಉದ್ಯೋಗಗಳನ್ನು ಪಡೆದುಕೊಳ್ಳಲು ಅನುಕೂಲವಾಗುತ್ತದೆ. ಆದ್ದರಿಂದ ಪಠ್ಯದ ಜೊತೆಗೆ ಕ್ರೀಡೆಗೂ ಗಮನ ಹರಿಸಿ ಎಂದು ಕಿವಿಮಾತು ಹೇಳಿದರು.

ರಾಜ್ಯಕ್ಕೆ ಕೀರ್ತಿ ತನ್ನಿ: ಎರಡು ದಿನಗಳ ಕಾಲ ನಡೆದ ರಾಜ್ಯಮಟ್ಟದ ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ಯಶಸ್ವಿಯಾಗಿದೆ. ಎಲ್ಲಾ ಜಿಲ್ಲೆಗಳ ತಂಡದ ಮ್ಯಾನೇಜರ್‌ಗಳು ಉತ್ತಮ ಸಹಕಾರ ನೀಡಿದ್ದಾರೆ. ಇದೇ ರೀತಿ ಸ್ಫೂರ್ತಿಯುತವಾಗಿ ರಾಷ್ಟ್ರಮಟ್ಟದಲ್ಲಿಯೂ ಆಟವಾಡಿ ಗೆದ್ದು ರಾಜ್ಯಕ್ಕೆ ಕೀರ್ತಿ ತನ್ನಿ ಎಂದು ಕರೆ ನೀಡಿದರು.

ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ಡಾ.ಸಿ. ವೆಂಕಟೇಶ್, ಶ್ರೀ ರಾಮಕೃಷ್ಣ ವಿದ್ಯಾಶಾಲಾ ಪ್ರಾಂಶುಪಾಲ ಟಿ.ಕೆ.ಚಂದ್ರಶೇಖರ್, ದೈಹಿಕ ಶಿಕ್ಷಣ ಉಪನ್ಯಾಸಕ ಸುದರ್ಶನ್, ಬೆಂಗಳೂರು ಸೌತ್ ತಂಡದ ಮ್ಯಾನೇಜರ್ ಎಸ್.ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಕಲಿಯಬೇಕು.. ಗೆಲ್ಲಬೇಕು...

ಪಂದ್ಯಾವಳಿಯ ಪ್ರತಿಯೊಂದು ಪಂದ್ಯಗಳು ರೋಚಕವಾಗಿದ್ದವು. ಪ್ರಬಲ ಪೈಪೋಟಿಯಿಂದ ಕೂಡಿದ್ದವು. ಗೆದ್ದವರು ಮತ್ತು ಸೋತವರಿಬ್ಬರು ನಿಮ್ಮ ನಿಮ್ಮ ಗುರುಗಳನ್ನು ಭೇಟಿ ಮಾಡಿ ಆಟದಲ್ಲಿ ತಮ್ಮಿಂದಾದ ಲೋಪಗಳೇನು, ಎಲ್ಲಿ ಎಡವಿದೆವೂ ಎಂಬುದನ್ನು ಕೇಳಿ ಕಲಿತು ಗೆಲ್ಲಬೇಕು. ಮುಂದಿನ ದಿನಗಳಲ್ಲಿ ನಿಮ್ಮ ಪ್ರದರ್ಶನ ಇನ್ನೂ ಉತ್ತಮವಾಗಿರಲಿ.

– ಸ್ವಾಮಿ ಯುಕ್ತೇಶಾನಂದಜೀ, ಕರೆಸ್ಪಾಂಡೆಂಟ್, ಶ್ರೀ ರಾಮಕೃಷ್ಣ ವಿದ್ಯಾಶಾಲಾ



ರಾಜ್ಯಮಟ್ಟದ ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ವಿಜೇತ ತಂಡಗಳಿಗೆ ಟ್ರೋಫಿ ನೀಡಿ, ಅಭಿನಂದಿಸಲಾಯಿತು.

ನಾಗವಾಲದಲ್ಲಿ ಕಸ ನಿರ್ವಹಣಾ ಘಟಕ, ಕಲಿಕಾ ಕೇಂದ್ರ ಉದ್ಘಾಟನೆ



ಮೈಸೂರು ತಾಲೂಕಿನ ನಾಗವಾಲ ಗ್ರಾಮದಲ್ಲಿ ಕಸ ನಿರ್ವಹಣಾ ಘಟಕ ಹಾಗೂ ಕಲಿಕಾ ಕೇಂದ್ರವನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು. ಜಿಪಂ ಸಿಇಒ ಕೆ.ಎಂ.ಗಾಯತ್ರಿ, ತಾಪಂ ಇಓ ಸಿ.ಕೃಷ್ಣ, ನಾಗವಾಲ ಗ್ರಾಪಂ ಅಧ್ಯಕ್ಷೆ ಕಾಮಾಕ್ಷಮ್ಮ ಬಸವನಾಯಕ, ಮಾಜಿ ಅಧ್ಯಕ್ಷ ಆರ್.ನರೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು: ನಗರ ಪ್ರದೇಶಗಳಂತೆ ಗ್ರಾಮೀಣ ಪ್ರದೇಶದಲ್ಲಿ ಹಸಿ–ಒಣ ಕಸವನ್ನು ವಿಂಗಡಣೆ ಮಾಡಿ ವೈಜ್ಞಾನಿಕವಾಗಿ ನಿರ್ವಹಣೆ ಮಾಡಬೇಕು. ಗಾಂಧೀಜಿ ಕಂಡ ಗ್ರಾಮ ಸ್ವರಾಜ್ಯದ ಕಲ್ಪನೆಯ ಕನಸು ನನಸಾಗಬೇಕಾದರೆ ಗ್ರಾಪಂಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಸಲಹೆ ನೀಡಿದರು.

ಮೈಸೂರು ತಾಲೂಕಿನ ನಾಗವಾಲ ಗ್ರಾಮದಲ್ಲಿ ಹಸಿರುದಳ, ಆಶ್ರಯ ಹಸ್ತ ಟ್ರಸ್ಟ್ ಸಹಯೋಗದೊಂದಿಗೆ ಸುಸ್ಥಿರ ಕಸ ನಿರ್ವಹಣಾ ಘಟಕ ಹಾಗೂ ಕಲಿಕಾ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿ, ಇಡೀ ದೇಶದಲ್ಲಿ ಸ್ವಚ್ಛತೆಯ ಬಗ್ಗೆ ಮಹತ್ವ ಪಡೆದುಕೊಂಡಿದೆ. ಗಾಂಧೀಜಿ ಅವರು ಶ್ರಮದಾನದ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರು ಕಸಪೊರಕೆ ಹಿಡಿದು ಸ್ವಚ್ಛಗೊಳಿಸಿ ಸ್ವಚ್ಛ ಭಾರತ್ ಆಂದೋಲನ ದೊಡ್ಡ ಮಟ್ಟದಲ್ಲಿ ಯಶಸ್ವಿಯಾಗುವಂತೆ ಮಾಡಿದರು. ಈಗ ಹಳ್ಳಿಗಳಲ್ಲೂ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡುತ್ತಿದೆ ಎಂದರು.

ವೈಜ್ಞಾನಿಕವಾಗಿ ಕಸ ನಿರ್ವಹಣೆ ಮಾಡುವ ಬಗ್ಗೆ ಮಹಿಳೆಯರಿಗೆ ತರಬೇತಿ ನೀಡಬೇಕು. ವಿದ್ಯಾರ್ಥಿಗಳ ನೆರವಿನಿಂದ ಗ್ರಾಮ ಮಟ್ಟದಲ್ಲಿ ಅರಿವು ಮೂಡಿಸಬೇಕು. ಹಸಿಕಸದಿಂದ ಎರೆಹುಳು, ಕಾಂಪೋಸ್ಟ್ ಮೊದಲಾದ ವಸ್ತುಗಳನ್ನು ತಯಾರು ಮಾಡಬಹುದು. ಪ್ಲಾಸ್ಟಿಕ್ ತ್ಯಾಜ್ಯವನ್ನು ಮರುಬಳಕೆ ಮಾಡಿಕೊಂಡು ಅನೇಕ ರೀತಿಯ ಸ್ಥಳೀಯ ವಸ್ತುಗಳನ್ನು ಉತ್ಪಾದಿಸಿ ಮಾರಾಟ ಮಾಡಬಹುದು. ಹಾಗಾಗಿ, ನಿರಂತರವಾಗಿ ತರಬೇತಿ ನೀಡಬೇಕು ಎಂದು ಹೇಳಿದರು.

ಆರೋಗ್ಯ ಸಮಾಜ: ನಮ್ಮ ಮನೆಯೊಂದನ್ನು ಸ್ವಚ್ಛವಾಗಿಟ್ಟರೆ ಪ್ರಯೋಜನವಾಗಲ್ಲ. ನಮ್ಮ ಬೀದಿ, ಊರನ್ನು ಸ್ವಚ್ಛವಾಗಿರಿಸಿದರೆ ಆರೋಗ್ಯ ಸಮಾಜವಾಗಲಿದೆ. ಮಕ್ಕಳು ಆರೋಗ್ಯಕರವಾಗಿದ್ದು ಉತ್ತಮ ವ್ಯಕ್ತಿತ್ವ, ನಾಯಕತ್ವವನ್ನು ಹೊಂದಲು ಸಹಕಾರಿಯಾಗಲಿದೆ. ಭವಿಷ್ಯದ ನಾಯಕತ್ವ ರೂಪುಗೊಳ್ಳುವುದು ಹಳ್ಳಿಯ ಕೆಲಸದಿಂದಲೇ ಎನ್ನುವುದನ್ನು ಮರೆಯಬಾರದು ಎಂದು ಹೇಳಿದರು.

ಗ್ರಾಮ ಪಂಚಾಯಿತಿಗಳಿಗೆ ಕೇಂದ್ರ ಸರ್ಕಾರದಿಂದ ನೇರವಾಗಿ ಅನುದಾನ ಹೊರತುಪಡಿಸಿದರೆ ಜಿಲ್ಲಾ, ತಾಲೂಕು, ರಾಜ್ಯ ಸರ್ಕಾರದಿಂದ ಬರುವ ಅನುದಾನ ಸ್ಥಗಿತಗೊಂಡಿದೆ. ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಬಳಸಿಕೊಳ್ಳಬೇಕು. ಶಾಲಾ, ಅಂಗನವಾಡಿ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಳ್ಳಬೇಕು. ಮನ್ರೇಗಾ ಅನುದಾನ ಶಾಶ್ವತವಾಗಿ ಬರುವುದಿಲ್ಲ. ಮುಂದಿನ ದಿನಗಳಲ್ಲಿ ಯೋಜನೆ ಅನುದಾನ ಬಾರದಿದ್ದರೆ ಕುಡಿಯುವ ನೀರು ಕೊಡುವುದಕ್ಕೂ ಕಷ್ಟವಾಗಲಿದೆ. ಹಾಗಾಗಿ, ತಮ್ಮ ಪಂಚಾಯಿತಿ ವ್ಯಾಪ್ತಿಗೆ ಆಗಬೇಕಿರುವ ಕೆಲಸಗಳ ಬಗ್ಗೆ ಕ್ರಿಯಾ ಯೋಜನೆ ರೂಪಿಸಿ ಒಪ್ಪಿಗೆ ಪಡೆಯಬೇಕು ಎಂದು ಕಿವಿಮಾತು ಹೇಳಿದರು.

ನಮಗೆ ಪಂಚಾಯಿತಿ ಮಟ್ಟದಿಂದಲೂ ಸಾಕಷ್ಟು ದೂರುಗಳು ಬರುತ್ತವೆ. ಗ್ರಾಪಂ ಸದಸ್ಯರು ಒಟ್ಟಾಗಿ ಬಡವರ ಕೆಲಸ ಮಾಡಬೇಕು. ಸೇವಾ ಮನೋಭಾವ ರೂಪಿಸಿಕೊಳ್ಳಬೇಕು. ಜಿಪಂ ಸಿಇಒ ಕೆ.ಎಂ.ಗಾಯತ್ರಿ ಅವರು ಎಲ್ಲದಕ್ಕೂ ಸ್ಪಂದಿಸುತ್ತಾರೆ. ಯಾವುದೇ ಕೆಲಸ ಹೇಳಿದರೂ ತಕ್ಷಣಕ್ಕೆ ಸ್ಪಂದಿಸಿ ಒಪ್ಪಿಗೆ ಕೊಡುತ್ತಾರೆ. ಇಂತಹ ಅಧಿಕಾರಿಗಳು ಸಿಗುವುದು ಕಷ್ಟ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ತಾಪಂ ಕಾರ್ಯನಿರ್ವಹಕಾಧಿಕಾರಿ ಸಿ.ಕೃಷ್ಣ, ನಾಗವಾಲ ಗ್ರಾಪಂ ಅಧ್ಯಕ್ಷರಾದ ಕಾಮಾಕ್ಷಮ್ಮ ಬಸವನಾಯಕ, ಮಾಜಿ ಅಧ್ಯಕ್ಷ ಆರ್.ನರೇಂದ್ರ, ಆಶ್ರಯ ಹಸ್ತ ಟ್ರಸ್ಟ್ ನಿರ್ದೇಶಕ ಎನ್.ಕೆ. ಶರ್ಮ, ಹಸಿರುದಳ ಸಂಸ್ಥೆ ನಿರ್ದೇಶಕಿ ನಳಿನಿ ಶೇಖರ್ ಇನ್ನಿತರರು ಹಾಜರಿದ್ದರು.

> ಮೈಸೂರು ನಗರದ ಸುತ್ತಮುತ್ತಲ ಗ್ರಾಮಗಳಲ್ಲಿ ಇದ್ದ ಜಮೀನನ್ನು ಮಾರಾಟ ಮಾಡಿಕೊಂಡಿದ್ದಾರೆ. ತಮ್ಮ ಮಕ್ಕಳನ್ನು ಮದುವೆ ಮಾಡಲು ಒಂದು ಎಕರೆಗೆ 5ರಿಂದ 10 ಲಕ್ಷಕ್ಕೆ ಮಾರಿಕೊಂಡಿದ್ದಾರೆ. ಈಗ ಒಂದು ಕೋಟಿಗೆ ಬೆಲೆ ಬಾಳುತ್ತದೆ ಅಂತ ಹೇಳಿದರೆ ಏನು ಪ್ರಯೋಜನ. ಮಾರಾಟ ಮಾಡದೆ ಉಳಿಸಿಕೊಂಡಿದ್ದರೆ ಇಂದು ಬೆಲೆ ಸಿಗುತ್ತದೆ. ನನ್ನ ಮಕ್ಕಳಿಗೆ ಸರಳವಾಗಿ ಮದುವೆ ಮಾಡಿದೆ. ಇಂದು ಕೆಲವರು ಜಮೀನು ಮಾರಿ ಅದ್ದೂರಿಯಾಗಿ ಮದುವೆ ಮಾಡುತ್ತಾರೆ. ಎಷ್ಟು ಹೇಳಿದರೂ ಕೆಲವರು ಕೇಳುವುದಿಲ್ಲ.
>
> –ಜಿ.ಟಿ.ದೇವೇಗೌಡ, ಶಾಸಕರು

ದೇಶ – ವಿದೇಶ


ಬಿಷ್ಣೋಯ್ ಗ್ಯಾಂಗ್‌ಗೆ ಭಾರತೀಯ ಏಜೆಂಟ್‌ಗಳ ಸಾಥ್: ಕೆನಡಾ ಪೊಲೀಸ್

ಕೆನಡಾ: ಎನ್‌ಸಿಪಿ ನಾಯಕ ಹಾಗೂ ಮಹಾರಾಷ್ಟ್ರ ಮಾಜಿ ಸಚಿವ ಬಾಬಾ ಸಿದ್ದಿಕಿ ಹತ್ಯೆ ವಿಚಾರ ಭಾರತದಲ್ಲಿ ವ್ಯಾಪಕ ಸುದ್ದಿಗೆ ಗ್ರಾಸವಾಗಿರುವಂತೆಯೇ ಈ ಹತ್ಯೆಗೆ ಜವಾಬ್ದಾರಿ ಹೊತ್ತಿರುವ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ಜೊತೆ ಭಾರತೀಯ ಏಜೆಂಟ್‌ಗಳು ಸಂಬಂಧ ಹೊಂದಿದ್ದಾರೆ ಎಂದು ಕೆನಡಾ ಪೊಲೀಸರು ಗಂಭೀರ ಆರೋಪ ಮಾಡಿದ್ದಾರೆ.

ಇತ್ತೀಚೆಗಷ್ಟೇ ಸ್ವತಃ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೋ ಆ್ಯಂಟಿ ಖಲಿಸ್ತಾನಿ ಬಂಡುಕೋರರೊಂದಿಗೆ ಭಾರತೀಯ ಗೂಢಚಾರ ಅಧಿಕಾರಿಗಳು ಸಂಬಂಧ ಹೊಂದಿದ್ದಾರೆ ಎಂಬ ಆರೋಪದ ಬೆನ್ನಲ್ಲೇ ಕೆನಡಾ ಪೊಲೀಸರು ಭಾರತದ ವಿರುದ್ಧ ಇಂತಹುದೇ ಮತ್ತೊಂದು ಆರೋಪ ಮಾಡಿದ್ದಾರೆ.

ರಾಯಲ್ ಕೆನಡಿಯನ್ ಮೌಂಟೆಡ್ ಪೊಲೀಸ್ (ಕೆನಡಾ ಪೊಲೀಸ್) ಭಾರತ ಸರ್ಕಾರದ ಏಜೆಂಟರು ಅಪರಾಧಿಗಳನ್ನು ತಮ್ಮ ಕಾರ್ಯಕ್ಕೆ ಬಳಸಿಕೊಳ್ಳುತ್ತಿದ್ದಾರೆ ಎಂದು ನೇರವಾಗಿ ಬಿಷ್ಣೋಯ್ ಗ್ಯಾಂಗ್ ಅನ್ನು ಉಲ್ಲೇಖಿಸಿ ಆರೋಪಿಸಿದ್ದಾರೆ.

ಭಾರತ ಮತ್ತು ಅದರ ಏಜೆಂಟ್‌ಗಳು ದಕ್ಷಿಣ ಏಷ್ಯಾದ ಸಮುದಾಯ ಮತ್ತು ಕೆನಡಾದಲ್ಲಿರುವ ಖಲಿಸ್ತಾನ ಸಮುದಾಯವನ್ನು ಗುರಿಯಾಗಿಸಿಕೊಂಡು ಅಪರಾಧ ಕೃತ್ಯಗಳಲ್ಲಿ ತೊಡಗಿದ್ದಾರೆ.



ಎದೆಯಲ್ಲಿ ಟ್ಯಾಟೂ ಬಿಡಿಸಿ ಗೌರವ ಸಲ್ಲಿಸಿದ ಅಭಿಮಾನಿ

ನವದೆಹಲಿ: ಇತ್ತೀಚೆಗೆ ಭಾರತದ ಅತೀ ದೊಡ್ಡ ಕೈಗಾರಿಕೋದ್ಯಮಿ ರತನ್ ಟಾಟಾ ಅವರು ನಿಧನರಾದರು. ಎಲ್ಲರೂ ರತನ್ ಟಾಟಾ ಅವರಿಗೆ ತಮ್ಮದೇ ಆದ ರೀತಿಯಲ್ಲಿ ಶ್ರದ್ಧಾಂಜಲಿ ಸಲ್ಲಿಸುತ್ತಿದ್ದಾರೆ. ಇತ್ತೀಚೆಗೆ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿರುವ ವಿಡಿಯೋದಲ್ಲಿ ರತನ್ ಟಾಟಾ ಅಭಿಮಾನಿಯೊಬ್ಬರು ರತನ್ ಟಾಟಾರ ಚಿತ್ರವನ್ನು ತನ್ನ ಎದೆಯ ಮೇಲೆ ಹಚ್ಚೆ ಹಾಕಿಕೊಳ್ಳುವ ಮೂಲಕ ಅವರಿಗೆ ಹೃದಯದಲ್ಲಿ ಸ್ಥಾನಮಾನವನ್ನೂ ನೀಡಿದ್ದಾರೆ. ವೈರಲ್ ವಿಡಿಯೋವನ್ನು ಭಾರತದ ಪ್ರಸಿದ್ಧ ಟ್ಯಾಟೂ ಆರ್ಟಿಸ್ಟ್ ಥೆಮ್‌ಸ್ವಾಚೆ_ಟ್ಯಾಟೂ ಅವರು ತಮ್ಮ ಇನ್‌ಸ್ಟಾಗ್ರಾಮ್ ಪೇಜ್‌ನಲ್ಲಿ ಹಂಚಿಕೊಂಡಿದ್ದಾರೆ. ಅಲ್ಲಿ ಅವರು ವ್ಯಕ್ತಿಯೊಬ್ಬನ ಎದೆಯ ಮೇಲೆ ರತನ್ ಟಾಟಾ ಚಿತ್ರ ಹಚ್ಚೆ ಮಾಡಿದ್ದಾರೆ. ವ್ಯಕ್ತಿ ರತನ್ ಟಾಟಾ ಅವರ ಚಿತ್ರವನ್ನು ತಂದು ಎದೆಯ ಮೇಲೆ ಹಚ್ಚೆ ಹಾಕಿಕೊಡುವಂತೆ ಕೇಳಿಕೊಂಡಿದ್ದಾರೆ. ನೀವು ಯಾಕೆ ಹೀಗೆ ಮಾಡಿದಿರಿ ಎಂದು ವ್ಯಕ್ತಿಯನ್ನು ಕೇಳಿದಾಗ, ಆ ವ್ಯಕ್ತಿ ರತನ್ ಟಾಟಾ ನಿಮ್ಮ ಮತ್ತು ನಮ್ಮಂತಹ ಅನೇಕ ಜನರಿಗೆ ಉಚಿತ ಚಿಕಿತ್ಸೆ ನೀಡುತ್ತಿದ್ದರು. ರತನ್ ಟಾಟಾ ಅವರಂತೆ ಎಲ್ಲರೂ ಸಹಾಯ ಮಾಡಲು ಸಾಧ್ಯವಿಲ್ಲ. ಅವರೇ ನನಗೆ ನಿಜವಾದ ಜೀವದ ದೇವರು ಎಂದು ಆ ವ್ಯಕ್ತಿ ಹೇಳಿದ್ದಾರೆ.

ತೈಲ ಟ್ಯಾಂಕರ್ ಸ್ಫೋಟ: ನೂರು ಮಂದಿ ಸಜೀವ ದಹನ



ನೈಜೀರಿಯಾ: ತೈಲ ತುಂಬಿದ್ದ ಟ್ಯಾಂಕರ್ ಸ್ಫೋಟಗೊಂಡು ನೂರು ಮಂದಿ ಸಾವನ್ನಪ್ಪಿದ್ದು, 50 ಜನರು ಗಾಯಗೊಂಡಿರುವ ಘಟನೆ ಉತ್ತರ ನೈಜೀರಿಯಾದಲ್ಲಿ ಮಂಗಳವಾರ ತಡರಾತ್ರಿ (ಅ.15) ನಡೆದಿರುವುದಾಗಿ ವರದಿ ತಿಳಿಸಿದೆ.

ನೈಜೀರಿಯಾದ ಉತ್ತರ ಜಿಗಾವಾ ಪ್ರದೇಶದಲ್ಲಿ ಟ್ಯಾಂಕರ್ ಟ್ರಕ್‌ವೊಂದಕ್ಕೆ ಡಿಕ್ಕಿ ಹೊಡೆದಿತ್ತು. ಈ ಸಂದರ್ಭದಲ್ಲಿ ಜನರು ತೈಲ ಸಂಗ್ರಹಿಸಲು ಪ್ರಯತ್ನಿಸುತ್ತಿದ್ದ ವೇಳೆ ಸ್ಫೋಟಗೊಂಡ ಪರಿಣಾಮ ಈ ದುರ್ಘಟನೆ ನಡೆದಿರುವುದಾಗಿ ಪೊಲೀಸ್ ವಕ್ತಾರ ಲವಾನ್ ಶಿಸು ಅದಾಂ ತಿಳಿಸಿದ್ದಾರೆ. ಜಿಗಾವಾ ನಗರದಲ್ಲಿ ಟ್ಯಾಂಕರ್ ಚಾಲಕ ಟ್ರಕ್‌ಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಪ್ರಯತ್ನಿಸಿದ್ದ. ಆದರೆ ನಿಯಂತ್ರಣ ತಪ್ಪಿ ಡಿಕ್ಕಿ ಹೊಡೆದಿತ್ತು. ಆಗ ವಾಹನದ ಸುತ್ತ ನಿವಾಸಿಗಳು ಸೇರಿದ್ದು, ಇಂಧನ ಸಂಗ್ರಹಿಸಲು ಮುಗಿಬಿದ್ದಿದ್ದರು. ಈ ಸಂದರ್ಭದಲ್ಲಿ ಟ್ಯಾಂಕರ್ ಸ್ಫೋಟಗೊಂಡಿರುವುದಾಗಿ ವರದಿ ವಿವರಿಸಿದೆ. ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ನೈಜೀರಿಯನ್ ಮೆಡಿಕಲ್ ಅಸೋಸಿಯೇಶನ್ ವೈದ್ಯರಲ್ಲಿ ಮನವಿ ಮಾಡಿಕೊಂಡಿದೆ.

ಅಗ್ರೋಟೆಕ್ ಸಂಸ್ಥೆಯಲ್ಲಿ ಟ್ಯಾಂಕ್ ಸ್ವಚ್ಛಗೊಳಿಸುವಾಗ ಉಸಿರುಗಟ್ಟಿ ಐವರು ಸಾವು

ಭುಜ್: ಗುಜರಾತ್‌ನ ಕಛ್ ಜಿಲ್ಲೆಯ ಅಗ್ರೋಟೆಕ್ ಕಂಪನಿಯೊಂದರಲ್ಲಿ ಬುಧವಾರ ಬೆಳಗ್ಗೆ ಟ್ಯಾಂಕ್ ಸ್ವಚ್ಛಗೊಳಿಸುವ ವೇಳೆ ಐವರು ಕಾರ್ಮಿಕರು ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಂದು ಬೆಳಗಿನ ಜಾವ 1 ಗಂಟೆ ಸುಮಾರಿಗೆ ಕಾರ್ಮಿಕರು ಕಂಪನಿಯ ಕೊಳಚೆ ಸಂಸ್ಕರಣಾ ಘಟಕವನ್ನು ಸ್ವಚ್ಛಗೊಳಿಸುತ್ತಿದ್ದಾಗ ಈ ಘಟನೆ ಸಂಭವಿಸಿದೆ ಎಂದು ಕಛ್(ಪೂರ್ವ) ಪೊಲೀಸ್ ವರಿಷ್ಠಾಧಿಕಾರಿ ಸಾಗರ್ ಬಾಗ್ಮಾರ್ ಹೇಳಿದ್ದಾರೆ. ಕೊಳಚೆ ಸಂಸ್ಕರಣಾ ಘಟಕ ಸ್ವಚ್ಛಗೊಳಿಸಲು ಕಾರ್ಮಿಕರೊಬ್ಬರು ಟ್ಯಾಂಕ್‌ಗೆ ಇಳಿದಾಗ ಅವರು ಉಸಿರುಗಟ್ಟಿ ಪ್ರಜ್ಞೆ ತಪ್ಪಿದ್ದಾರೆ. ಈ ವೇಳೆ ಇನ್ನಿಬ್ಬರು ಕಾರ್ಮಿಕರು ಆತನನ್ನು ರಕ್ಷಿಸಲು ಟ್ಯಾಂಕ್ ಒಳಗೆ ಇಳಿದಿದ್ದಾರೆ. ಆದರೆ ಅವರು ಸಹ ಮೂರ್ಛೆ ಹೋಗಿದ್ದಾರೆ. ಅವರನ್ನು ಅನುಸರಿಸಿ ಇನ್ನೂ ಇಬ್ಬರು ಟ್ಯಾಂಕ್‌ಗೆ ಇಳಿದಿದ್ದು, ಎಲ್ಲಾ ಐವರು ಮೃತಪಟ್ಟಿದ್ದಾರೆ ಎಂದು ಬಾಗ್ಮಾರ್ ತಿಳಿಸಿದ್ದಾರೆ.

ಈ ಸಂಬಂಧ ಕಾಂಡ್ಲಾ ಪೊಲೀಸ್ ಠಾಣೆಯಲ್ಲಿ ಆಕಸ್ಮಿಕ ಸಾವು ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಹೇಳಿದ್ದಾರೆ. ಮೃತ ಕಾರ್ಮಿಕರನ್ನು ಸಿದ್ಧಾರ್ಥ್ ತಿವಾರಿ, ಅಜ್ಮತ್ ಖಾನ್, ಆಶಿಶ್ ಗುಪ್ತಾ, ಆಶಿಶ್ ಕುಮಾರ್ ಮತ್ತು ಸಂಜಯ್ ಠಾಕೂರ್ ಎಂದು ಗುರುತಿಸಲಾಗಿದೆ.

ದಕ್ಷಿಣ ಲೆಬನಾನ್‌ನಲ್ಲಿ ಇಸ್ರೇಲ್ ವೈಮಾನಿಕ ದಾಳಿ: ಮೇಯರ್ ಸೇರಿ ಐವರು ಸಾವು



ನಬಾತಿಯೆಹ್: ದಕ್ಷಿಣ ಲೆಬನಾನಿನ ಪಟ್ಟಣವಾದ ನಬಾತಿಯೆಹ್‌ನಲ್ಲಿರುವ ಪುರಸಭೆ ಕಟ್ಟಡದ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಐವರು ಸಾವಿಗೀಡಾಗಿದ್ದಾರೆ ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ಬುಧವಾರ ತಿಳಿಸಿದೆ. ದಕ್ಷಿಣ ನಗರದ ಮಾರುಕಟ್ಟೆಯನ್ನು ನಾಶಪಡಿಸಿದ ದಿನಗಳ ನಂತರ ಇಸ್ರೇಲ್ ನಬಾತಿಯೆಹ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ 11 ವೈಮಾನಿಕ ದಾಳಿ ನಡೆಸಿತು ಎಂದು ಲೆಬನಾನಿನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ದಾಳಿಯಲ್ಲಿ ಮೃತಪಟ್ಟವರಲ್ಲಿ ನಗರದ ಮೇಯರ್ ಕೂಡ ಸೇರಿದ್ದಾರೆ ಎಂದು ಭದ್ರತಾ ಮೂಲಗಳನ್ನು ಉಲ್ಲೇಖಿಸಿ ರಾಯಿಟರ್ಸ್ ವರದಿ ಮಾಡಿದೆ. ರಕ್ಷಣಾ ಕಾರ್ಯಾಚರಣೆಗಳು ನಡೆಯುತ್ತಿದ್ದು, ಅವಶೇಷಗಳಡಿ ಸಿಲುಕಿರುವ ಬದುಕುಳಿದವರಿಗಾಗಿ ರಕ್ಷಣಾ ತಂಡಗಳು ಹುಡುಕಾಟ ನಡೆಸುತ್ತಿವೆ. ಇಸ್ರೇಲ್–ಲೆಬನಾನ್ ಗಡಿಯಲ್ಲಿ ಉದ್ವಿಗ್ನತೆ ಉಲ್ಬಣಗೊಳ್ಳುತ್ತಿರುವಾಗ ಈ ವೈಮಾನಿಕ ದಾಳಿ ನಡೆದಿದೆ. ಲೆಬನಾನ್‌ನಲ್ಲಿನ ಇಸ್ರೇಲಿ ಆಕ್ರಮಣದ ಬಗ್ಗೆ ಅಮೆರಿಕ ಕಳವಳ ವ್ಯಕ್ತಪಡಿಸಿದೆ.

ಕಾವೇರಿ ಸುಪ್ರಭಾತ ಕೃತಿ ಬಿಡುಗಡೆ



ಮಡಿಕೇರಿಯಲ್ಲಿ ಸಾಹಿತಿ ನಾಗೇಶ್ ಕಾಲೂರು ಅವರ ಕಾವೇರಿ ಸುಪ್ರಭಾತ ಕೃತಿಯನ್ನು ಬಿಡುಗಡೆಗೊಳಿಸಲಾಯಿತು.

ಮಡಿಕೇರಿ, ಅ.16–ಕೊಡವ ಮಕ್ಕಡ ಕೂಟದ 97ನೇ ಪುಸ್ತಕ, ಹಿರಿಯ ಸಾಹಿತಿ ನಾಗೇಶ್ ಕಾಲೂರು ಅವರು ರಚಿಸಿರುವ 'ಶ್ರೀ ಕಾವೇರಿ ಸುಪ್ರಭಾತ' ಕೃತಿಯನ್ನು ಬುಧವಾರ ಬಿಡುಗಡೆಗೊಳಿಸಲಾಯಿತು.

ನಗರದ ಪತ್ರಿಕಾ ಭವನದಲ್ಲಿ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಕೊಡವ, ಕನ್ನಡ ಚಿತ್ರ ನಿರ್ದೇಶಕಿ ಹಾಗೂ ನಿರ್ಮಾಪಕಿ ಕೊಟ್ಟುಕತ್ತೀರ ಯಶೋಧಾ ಪ್ರಕಾಶ್, ಸುಪ್ರಭಾತ ಎಂಬ ಶಬ್ಧವೇ ಮನಸ್ಸಿಗೆ ಧನಾತ್ಮಕ ಭಾವನೆ ತುಂಬುತ್ತದೆ. ಕಾವೇರಿ ಕುರಿತು ಕೃತಿ ರಚನೆ ದೇವರ ಕೆಲಸವಾಗಿದ್ದು, ಹಾಡಿನ ರೂಪದಲ್ಲಿರುವುದನ್ನು ಅಕ್ಷರ ರೂಪದಲ್ಲಿ ಹೊರತರಲಾಗಿದೆ. ಇದನ್ನು ಮಕ್ಕಳು ಸುಲಭವಾಗಿ ಕಲಿಯಬಹುದು ಮತ್ತು ಪ್ರತಿಯೊಬ್ಬರಿಗೂ ಕಾವೇರಿ ಮಾತೆಯ ಹಿನ್ನೆಲೆ ತಿಳಿಯಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಶ್ರೀ ಕಾವೇರಿ ಸುಪ್ರಭಾತ ಪುಸ್ತಕ ರಚಿಸಿರುವ ಹಿರಿಯ ಸಾಹಿತಿ ನಾಗೇಶ್ ಕಾಲೂರು ಮಾತನಾಡಿ, ನಮ್ಮ ದೇಶದ ಪವಿತ್ರ ನದಿಗಳಲ್ಲೊಂದಾದ ಕಾವೇರಿ ಕೇವಲ ಒಂದು ನದಿಯಲ್ಲ. ಅದು ಪ್ರತ್ಯಕ್ಷವಾದ ಜಲದೇವತೆ. ಆ ಪವಿತ್ರ ದೇವಿಯ ಮಹಿಮೆಯನ್ನು ಹಾಡಿನ ಮೂಲಕ ವರ್ಣಿಸಲಾಗುತ್ತಿತ್ತು. ಇದೀಗ ಅದಕ್ಕೆ ಅಕ್ಷರ ರೂಪ ನೀಡಲಾಗಿದೆ ಎಂದರು.

ಕಾವೇರಿ ಸುಪ್ರಭಾತ ಕೊಡವ ಹಾಗೂ ಕನ್ನಡ ಅನುವಾದ ಪುಸ್ತಕವಾಗಿದ್ದು, 2004ರಲ್ಲಿ ಸಿಡಿ ರೂಪದಲ್ಲಿ ಈ ಸುಪ್ರಭಾತವನ್ನು ರವೀಂದ್ರ ಕೆ.ಸುಬ್ರಹ್ಮಣ್ಯ ಹೊರತಂದಿದ್ದರು. ನಂತರ ಮಡಿಕೇರಿ ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿತ್ತು. ಇದನ್ನು ಪುಸ್ತಕ ರೂಪದಲ್ಲಿ ಹೊರತರಬೇಕೆಂಬ ಆಶಯ ನಮ್ಮದಾಗಿತ್ತು. ಇದೀಗ ಕೊಡವ ಮಕ್ಕಡ ಕೂಟದ ಸಹಕಾರದೊಂದಿಗೆ ಪುಸ್ತಕ ಹೊರತರಲಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಾತನಾಡಿ, ಕನ್ನಡಿಗರಿಗೆ ಓದಲು ಸಹಕಾರಿಯಾಗುವ ನಿಟ್ಟಿನಲ್ಲಿ ಕಾವೇರಿ ಸುಪ್ರಭಾತ ಪುಸ್ತಕವವನ್ನು ಕನ್ನಡದಲ್ಲೂ ಅನುವಾದ ಮಾಡಲಾಗಿದೆ. ಒಟ್ಟು 500 ಪ್ರತಿಗಳನ್ನು ಮುದ್ರಣ ಮಾಡಲಾಗಿದೆ. ಅವುಗಳಲ್ಲಿ 250 ಪುಸ್ತಕವನ್ನು ತಲಕಾವೇರಿಯಲ್ಲಿ ವಿತರಿಸಲಾಗುವುದು ಎಂದು ಹೇಳಿದರು.

ಅಂತಾರಾಷ್ಟ್ರೀಯ ಹಿರಿಯ ಶೆಟಲ್ ಬ್ಯಾಡ್ಮಿಂಟನ್ ಆಟಗಾರ್ತಿ ತಾತಪಂಡ ಜ್ಯೋತಿ ಸೋಮಯ್ಯ ಮಾತನಾಡಿ, ಕಾವೇರಿ ತುಲಾ ಸಂಕ್ರಮಣದ ಸಂದರ್ಭ ಈ ಪುಸ್ತಕವನ್ನು ಹೊರತಂದಿರುವುದು ಶ್ಲಾಘನೀಯ. ಇದು ಕೊಡಗಿನ ಪ್ರತಿಯೊಬ್ಬರ ಮನೆಗಳಲ್ಲಿ ಇಡಲೇಬೇಕಾದ ಪುಸ್ತಕವಾಗಿದೆ ಎಂದು ಸಲಹೆ ನೀಡಿದರು.

ವಕೀಲೆ ಕನ್ನಂಡ ನಳಿನಿ ಪೊನ್ನಪ್ಪ ಶುಭ ಹಾರೈಸಿದರು. ಈ ಸಂದರ್ಭ ಸಮಾಜ ಸೇವಕ ತೆನ್ನಿರ ಗಿರಿ ಚಂಗಪ್ಪ ಉಪಸ್ಥಿತರಿದ್ದರು.

ರಂಗದ ಅನ್ನದಾನ ಸಭಾಂಗಣ ಉದ್ಘಾಟನೆ



ಕೊಡಗು ಏಕೀಕರಣ ರಂಗದ ಅನ್ನದಾನ ಸಭಾಂಗಣವನ್ನು ಶಾಸಕ ಎ.ಎಸ್.ಪೊನ್ನಣ್ಣ ಭಕ್ತರಿಗೆ ಅನ್ನ ಬಡಿಸುವ ಮೂಲಕ ಉದ್ಘಾಟಿಸಿದರು.

ಮಡಿಕೇರಿ: ಪವಿತ್ರ ಕಾವೇರಿ ತೀರ್ಥೋದ್ಭವ ಸಂದರ್ಭ ಕಳೆದ 30 ವರ್ಷಗಳಿಂದ ಭಕ್ತಾದಿಗಳಿಗೆ 1 ತಿಂಗಳು ಅನ್ನಸಂತರ್ಪಣೆ ನೆರವೇರಿಸುತ್ತಿರುವ ಕೊಡಗು ಏಕೀಕರಣ ರಂಗದ ಅನ್ನದಾನ ಸಭಾಂಗಣವನ್ನು ಶಾಸಕ ಎ.ಎಸ್.ಪೊನ್ನಣ್ಣ ಭಕ್ತರಿಗೆ ಅನ್ನ ಬಡಿಸುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿದ ಶಾಸಕ ಪೊನ್ನಣ್ಣ, ಭಾಗಮಂಡಲದ ಗಜಾನನ ಯುವಕ ಸಂಘದ ವತಿಯಿಂದ ಸುಮಾರು 2 ಸಾವಿರ ಭಕ್ತರಿಗೆ ಬೆಳಗಿನ ಉಪಹಾರ ವ್ಯವಸ್ಥೆ ಕಲ್ಪಿಸಲಾಗಿದೆ. ಅಲ್ಲದೆ, ಈ ಬಾರಿಯೂ ಭಾಗಮಂಡಲದ ಭಗಂಡೇಶ್ವರನ ಸನ್ನಿಧಿಯಿಂದ ತಲಕಾವೇರಿ ಕ್ಷೇತ್ರದವರೆಗೆ ಭಕ್ತರೊಂದಿಗೆ ನಾನು ಪಾದಯಾತ್ರೆಯಲ್ಲಿ ಭಾಗವಹಿಸಲಿದ್ದೇನೆ ಎಂದರು.

ಈ ಸಂದರ್ಭ ಜಿಲ್ಲಾಧಿಕಾರಿ ವೆಂಕಟ ರಾಜಾ, ಅಪರ ಜಿಲ್ಲಾಧಿಕಾರಿ ಐಶ್ವರ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್ ಮತ್ತಿತರರು ಹಾಜರಿದರು.

ಅರ್ಜಿ ವಿಲೇವಾರಿಗೆ ಆಗ್ರಹಿಸಿ ಕಟ್ಟಡ ಕಾರ್ಮಿಕರ ಮನವಿ ಸಲ್ಲಿಕೆ



ಕೂಡಲೇ ಅರ್ಜಿ ವಿಲೇವಾರಿಗೊಳಿಸುವಂತೆ ಆಗ್ರಹಿಸಿ ಕಟ್ಟಡ ಕಾರ್ಮಿಕ ಸಂಘದ ವತಿಯಿಂದ ವಿರಾಜಪೇಟೆ ಹಿರಿಯ ಕಾರ್ಮಿಕ ನಿರೀಕ್ಷಕ ಪಿ.ಎಂ.ನಿಖಿಲ್ ಚಂದ್ರ ಅವರಿಗೆ ಮನವಿ ಸಲ್ಲಿಸಲಾಯಿತು.

ವಿರಾಜಪೇಟೆ, ಅ.16– ಕಟ್ಟಡ ನಿರ್ಮಾಣ ಕಾರ್ಮಿಕರ ಅರ್ಜಿಗಳನ್ನು ಸರ್ಕಾರ ಕೂಡಲೇ ವಿಲೇವಾರಿಗೊಳಿಸಬೇಕು ಎಂದು ಆಗ್ರಹಿಸಿ ಜಿಲ್ಲಾ ಮತ್ತು ತಾಲೂಕು ಕಟ್ಟಡ ಕಾರ್ಮಿಕ ಸಂಘದ ವತಿಯಿಂದ ಹಿರಿಯ ಕಾರ್ಮಿಕ ನಿರೀಕ್ಷಕ ಪಿ.ಎಂ.ನಿಖಿಲ್ ಚಂದ್ರ ಅವರಿಗೆ ಮನವಿ ಸಲ್ಲಿಸಲಾಯಿತು.

ಇದೇ ವೇಳೆ ಸಂಘದ ಜಿಲ್ಲಾಧ್ಯಕ್ಷ ಎ.ಸಿ. ಸಾಬು ಮಾತನಾಡಿ, ನೈಜ ಕಾರ್ಮಿಕರ ನೋಂದಣಿ ಅರ್ಜಿಗಳನ್ನು ಕಾರಣವಿಲ್ಲದೆ ತಿರಸ್ಕರಿಸಬಾರದು. ಕಾರ್ಮಿಕರಿಗೆ ಕೂಡಲೇ ಗುರುತಿನ ಕಾರ್ಡ್ ವಿತರಿಸಬೇಕು. ಶೈಕ್ಷಣಿಕ ಸಹಾಯಧನ ಕಡಿತ ಆದೇಶವನ್ನು ವಾಪಸ್ ಪಡೆದು ಹೈಕೋರ್ಟ್ ಆದೇಶದಂತೆ ಬಾಕಿ ಸಹಾಯಧನ ಪಾವತಿಸಬೇಕು ಎಂದು ಒತ್ತಾಯಿಸಿದರು.

ಪಿಂಚಣಿದಾರರಿಗೆ ಶೀಘ್ರ ಹಣ ಬಿಡುಗಡೆಗೊಳಿಸಬೇಕು ಮತ್ತು ಪಿಂಚಣಿ ಅರ್ಜಿಗಳ ತಾಂತ್ರಿಕ ತೊಂದರೆ ನಿವಾರಿಸಬೇಕು. ಕಲ್ಯಾಣ ಹಾಗೂ ಸಲಹಾ ಮಂಡಳಿಯನ್ನು ಮರು ರಚಿಸಿ, ಕೇಂದ್ರ ಕಾರ್ಮಿಕ ಸಂಯೋಜಿತ ಸಂಘಗಳಿಗೆ ಮಾತ್ರ ಪ್ರಾತಿನಿಧ್ಯ ನೀಡಬೇಕು. ಹಿಂದೆ ನಡೆದಿರುವ ಖರೀದಿ ಅವ್ಯವಹಾರದ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಸಂಘದ ನಗರಾಧ್ಯಕ್ಷ ಕೆ.ಕೆ.ಹರಿದಾಸ್, ಪೊನ್ನಂಪೇಟೆ ತಾಲೂಕು ಅಧ್ಯಕ್ಷ ಎಂ.ಮಹೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎಸ್.ರತೀಶ್, ಖಜಾಂಚಿ ಸಿ.ಎ.ಹಮೀದ್, ಪದಾಧಿಕಾರಿಗಳಾದ ಖಾಸಿಂ, ತೋಮಸ್, ಸುಬ್ರಮಣಿ, ಸುದರ್ಶನ್, ಸದಸ್ಯರಾದ ಸುಭಾಶ್, ನಿತೀನ್, ಚಂದ್ರು, ಗಣೇಶ್, ಇಂದ್ರ ಕುಮಾರ್ ಮತ್ತಿತರರು ಹಾಜರಿದ್ದರು.

ರವೀಂದ್ರ ನಿಧನ



ನಾಪೋಕ್ಲು, ಅ.16–ಕೊಳ್ಳಿಗೆ ಗ್ರಾಮದ ದುಗ್ಗಳ ಮುಂಡಕಜೆ ದಿವಂಗತ ನಾರ್ಣಪ್ಪ ಅವರ ಪುತ್ರ ರವೀಂದ್ರ (ರವಿ (45) ಬುಧವಾರ ನಿಧನರಾದರು.

ಮೃತರು ತಾಯಿ, ಪತ್ನಿ, ಇಬ್ಬರು ಸಹೋದರರು, ಇಬ್ಬರು ಸಹೋದರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮುಂಡಕಜೆ ಸ್ವಗೃಹ ಆವರಣದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ಮುತ್ತಮ್ಮ



ನಾಪೋಕ್ಲು, ಅ.16–ಸಮೀಪದ ಪಾಲೂರು ಗ್ರಾಮದ ಬಕ್ಕದ ಪುದಿಯನೆರವನ ದಿವಂಗತ ಪೊನ್ನಪ್ಪನವರ ಪತ್ನಿ ಮುತ್ತಮ್ಮ(75) ಬುಧವಾರ ನಿಧನರಾದರು.

ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗುರುವಾರ ಮೃತರ ಸ್ವಗೃಹ ಆವರಣದಲ್ಲಿ ಅಂತ್ಯಕ್ರಿಯೆ ಜರುಗಲಿದೆ.

ಮೇಕೆದಾಟು ಯೋಜನೆಗೆ ಡಿಪಿಆರ್ ಸಿದ್ಧ, ಕೇಂದ್ರ ಅನುಮತಿ ಕೊಟ್ಟರೆ ಕಾಮಗಾರಿ ಆರಂಭ

ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಿಗೆ ನೀರೊದಗಿಸುವ ಕಾವೇರಿ ಐದನೇ ಹಂತದ ಯೋಜನೆಗೆ ಸಿಎಂ, ಡಿಸಿಎಂ ಚಾಲನೆ



ಸಮಾರಂಭ ಉದ್ಘಾಟಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್.

ಹಲಗೂರು/ಮಂಡ್ಯ,ಅ.16(ಮೋಹನ್ ರಾಜ್)–ರಾಜ್ಯದ ಮಹತ್ವದ ಎತ್ತಿನಹೊಳೆ ಯೋಜನೆ ಪೂರ್ಣಗೊಳಿಸಿದ್ದು ನಮ್ಮ ಸರ್ಕಾರ. ಮೇಕೆದಾಟು ಯೋಜನೆ ಪೂರ್ಣಗೊಳಿಸುವುದು ನಮಗೆ ದೊಡ್ಡ ವಿಷಯವಲ್ಲ. ಈಗಾಗಲೇ ಮೇಕೆದಾಟು ಯೋಜನೆಗೆ ಡಿಪಿಆರ್ ಸಿದ್ಧವಾಗಿದೆ. ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಕೇಂದ್ರ ಮಂತ್ರಿಗಳು ಅನುಮತಿ ಕೊಡಿಸಿದರೆ ಶೀಘ್ರದಲ್ಲೇ ಯೋಜನೆಯನ್ನು ಪ್ರಾರಂಭ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಹಲಗೂರು ಸಮೀಪವಿರುವ ತೊರೆಕಾಡನಹಳ್ಳಿಯ ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ವತಿಯಿಂದ ಬುಧವಾರ ಆಯೋಜಿಸಿದ್ದ ಬಿಬಿ ಎಂಪಿ ವ್ಯಾಪ್ತಿಯ 110 ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಕಾವೇರಿ ಐದನೇ ಹಂತದ ಯೋಜನೆಯ ಬೆಂಗಳೂರು ಜಲಮಂಡಳಿ ಜಲಶುದ್ಧೀಕರಣ ಘಟಕದ ಬಟನ್ ಪ್ರೆಸ್ ಮಾಡುವುದರ ಮೂಲಕ ಚಾಲನೆ ನೀಡಿ, ತುಂಬಿದ ಕೊಡಗಳ ನೀರನ್ನು ಕಾವೇರಿ ಮಾತೆಗೆ ಸಮರ್ಪಿಸಿ ಬಳಿಕ ಸಮಾರಂಭವನ್ನುದ್ದೇಶಿಸಿ ಮಾತನಾಡಿದರು.

ಮೇಕೆದಾಟು ಯೋಜನೆ ಮಾಡುವುದರಿಂದ ನಮಗಿಂತ ತಮಿಳುನಾಡಿಗೆ ಹೆಚ್ಚಿನ ಅನುಕೂಲ. ಆದರೂ ರಾಜಕೀಯಕ್ಕಾಗಿ ತಮಿಳುನಾಡು ಕ್ಯಾತೆ ತೆಗೆಯುತ್ತಿದೆ. ಕೇಂದ್ರ ಸರ್ಕಾರ ಮನಸ್ಸು ಮಾಡಿದರೆ ಈ ಯೋಜನೆ ಸಾಧ್ಯ. ಕೇಂದ್ರದ ಮಂತ್ರಿಗಳು ಮೋದಿ ಅವರಿಂದ ಯೋಜನೆಗೆ ಅನುಮತಿ ಕೊಡಿಸುವ ಕೆಲಸ ಮಾಡಲಿ ಎಂದು ಮನವಿ ಮಾಡಿದರು.

ಜಪಾನ್‌ನ ಜೈಕಾ ಅವರಿಂದ ಆರ್ಥಿಕ ಸಹಾಯ ಪಡೆದು ಯೋಜನೆ ಮಾಡಲಾಗಿದೆ. ಅಂದು ನಾನೇ ಶಂಕುಸ್ಥಾಪನೆ ಮಾಡಿದ ಯೋಜನೆ ಇದಾಗಿದ್ದು, ಇಂದು ನಾನೇ ಸಿಎಂ ಆಗಿ ಉದ್ಘಾಟಿಸಿದ್ದೇನೆ. ಕುಮಾರಸ್ವಾಮಿ ಸಿಎಂ ಆಗಿದ್ದಾಗ ಈ 110 ಹಳ್ಳಿಗಳನ್ನು ಬೆಂಗಳೂರು ನಗರಕ್ಕೆ ಸೇರಿಸಿದರು. ಆಗ ಅವರು ಈ ಹಳ್ಳಿಗಳಿಗೆ ಯಾವುದೇ ಮೂಲ ಸೌಕರ್ಯ ಕಲ್ಪಿಸಲಿಲ್ಲ. ಆನಂತರ ಬಂದ ಬಿಜೆಪಿ ಕೂಡ ಪ್ರಯತ್ನ ಮಾಡಲಿಲ್ಲ. ಹೀಗಾಗಿ ಈ ಯೋಜನೆ ವಿಳಂಬಕ್ಕೆ ಕಾರಣವಾಯಿತು. 80 ಪರ್ಸೆಂಟ್ ಮಾತ್ರ ಜೈಕಾ ಅನುದಾನ ಕೊಟ್ಟಿತು. ಉಳಿದ ಅನುದಾನವನ್ನ ರಾಜ್ಯ ಸರ್ಕಾರ, ಬಿಡಬ್ಲ್ಯೂಎಸ್ಎಸ್‌ಬಿ ಕೊಡಲಿಲ್ಲ. ಈ ಹಿಂದೆ ಬೆಂಗಳೂರಿಗೆ ಕೆರೆಗಳಿಂದ ನೀರು ಕೊಡಲಾಗುತ್ತಿತ್ತು. 1974ರಿಂದ ಕಾವೇರಿ ನದಿಯಿಂದ ನೀರ ದೊಗಿಸುತ್ತಿದ್ದು, ಸಂಪೂರ್ಣ ಬೆಂಗಳೂರಿಗೆ ನೀರು ಕೊಡಲು ಹಂತ ಹಂತವಾಗಿ ಕೆಲಸಗಳನ್ನು ಮಾಡುತ್ತಿದ್ದೇವೆ ಎಂದರು.

ವೇದಿಕೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಇಂಧನ ಸಚಿವ ಕೆಜೆ ಜಾರ್ಜ್, ಶಾಸಕರಾದ ಎಸ್.ಟಿ.ಸೋಮಶೇಖರ್, ಯಲಹಂಕ ವಿಶ್ವನಾಥ್, ಅಶೋಕ್‌ಪಟ್ಟಣ್, ಕೆ.ಎಂ.ಉದಯ್‌ಗೌಡ, ದಿನೇಶ್‌ಗೂಳಿಗೌಡ, ರಮೇಶ್ ಬಂಡಿಸಿದ್ದೇಗೌಡ, ರವಿಕುಮಾರ್ ಗಣಿಗ, ಮಧು ಜಿ.ಮಾದೇಗೌಡ, ಕೆವಿವೇಕಾನಂದ, ಎನ್.ಎ.ಹ್ಯಾರೀಸ್, ಸುಧಾಮ್ ದಾಸ್, ಜಿಲ್ಲಾಧಿಕಾರಿ ಡಾ.ಕುಮಾರ ಉಪಸ್ಥಿತರಿದ್ದರು.

ವಿದ್ಯುತ್ ವ್ಯತ್ಯಯ

ಮಂಡ್ಯ,ಅ.16–ಉಪ್ಪಾರಕನಹಳ್ಳಿ ಎನ್‌ಜೆವೈ ಫೀಡರ್‌ನಲ್ಲಿ ತುರ್ತು ಕಾರ್ಯನಿರ್ವಹಣೆ ಕೆಲಸ ಹಮ್ಮಿಕೊಂಡಿರುವುದರಿಂದ ಅ.18 ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಉಪ್ಪಾರಕನಹಳ್ಳಿ, ಗಂಟೆಗೌಡನಹಳ್ಳಿ, ದೊಡ್ಡಗರುಡನಹಳ್ಳಿ, ಗುಡಿಗೇನಹಳ್ಳಿ, ಮಾಯಪ್ಪನಹಳ್ಳಿ, ಹಂಪಾಪುರ, ಹಬ್ಬದಮಾರನಹಳ್ಳಿ, ಹನಗನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆಯಿಂದ ಎರಡು ದಿನಗಳ ಕಾಲ ಮಂಡ್ಯದಲ್ಲಿ ಉದ್ಯೋಗ ಮೇಳ

ಮಂಡ್ಯ ಯುವಕರಿಗೆ ಉದ್ಯೋಗ ಕಲ್ಪಿಸಲು ದೇಶದ ಪ್ರತಿಷ್ಠಿತ ಕಂಪನಿಗಳು ಭಾಗಿ: ಸಿ.ಎಸ್.ಪುಟ್ಟರಾಜು



ಉದ್ಯೋಗ ಮೇಳ ನಡೆಯುವ ಸ್ಥಳ ಪರಿಶೀಲಿಸುತ್ತಿರುವ ಮಾಜಿ ಸಚಿವ ಪುಟ್ಟರಾಜು.

ಮಂಡ್ಯ,ಅ.16–ಅಕ್ಟೋಬರ್ 18 ಮತ್ತು 19ರಂದು ಮಂಡ್ಯ ನಗರದ ಸರ್ ಎಂ. ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ ಎಂದು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ತಿಳಿಸಿದರು.

ಉದ್ಯೋಗ ಮೇಳ ನಡೆಯುವ ಜಾಗವಾದ ನಗರದ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣವನ್ನು ಬುಧವಾರ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಅವರಿಗೆ ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಲಕ್ಷಾಂತರ ಮಂದಿ ಯುವ ಮತದಾರರು ಮತ ನೀಡಿದ್ದಾರೆ. ಅವರಿಗೆ ಉದ್ಯೋಗ ಕಲ್ಪಿಸುವ ಸಲುವಾಗಿ ಎರಡು ದಿನಗಳ ಕಾಲ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಕುಮಾರಸ್ವಾಮಿ ಅವರು ಚುನಾವಣೆಗೆ ಸ್ಪರ್ಧೆ ಮಾಡಿ, ಕ್ಷೇತ್ರ ಪ್ರವಾಸ ಮಾಡುವಾಗ ನಿರುದ್ಯೋಗ ಸಮಸ್ಯೆ ಅವರ ಗಮನಕ್ಕೆ ಬಂದಿತ್ತು. ಅದರಲ್ಲೂ ಕೇಂದ್ರ ಕೈಗಾರಿಕಾ ಮಂತ್ರಿಯಾದ ಮೇಲೂ ಸಹ ಯುವಕರ ನಿರುದ್ಯೋಗ ಸಮಸ್ಯೆ ಬಗ್ಗೆ ತೀವ್ರ ಚರ್ಚೆಯಾಯಿತು. ಇದನ್ನು ಹೋಗಲಾಡಿಸುವ ಸಲುವಾಗಿ ಸ್ವತಃ ಕುಮಾರಸ್ವಾಮಿ ಅವರು ಚಿಂತನೆ ನಡೆಸಿ ಮಂಡ್ಯದಲ್ಲಿ ಉದ್ಯೋಗ ಮೇಳ ಆಯೋಜಿಸಿದ್ದಾರೆ ಎಂದರು.

ದೇಶದ ಪ್ರತಿಷ್ಠಿತ ಕಾರ್ಪೋರೇಟ್ ಕಂಪನಿಗಳು ಸೇರಿದಂತೆ ರಾಜ್ಯ ಹಾಗೂ ಹೊರ ರಾಜ್ಯದ ನೂರಾರು ಕಂಪನಿಗಳು ಭಾಗಿಯಾಗಲಿದ್ದು, 200ಕ್ಕೂ ಅಧಿಕ ಕೌಂಟರ್‌ಗಳಲ್ಲಿ ನಿರುದ್ಯೋಗಿ ಯುವಕರ ಸಂದರ್ಶನ ನಡೆಯಲಿದೆ. ಈಗಾಗಲೇ ಎರಡು ಸಾವಿರಕ್ಕೂ ಅಧಿಕ ಮಂದಿ ನೋಂದಾಯಿತರಾಗಿದ್ದು, ಇನ್ನೂ ಒಂದು ಸಾವಿರ ಮಂದಿ ನೋಂದಾಯಿತರಾಗುವ ನಿರೀಕ್ಷೆ ಇದೆ ಎಂದು ಹೇಳಿದರು.

ಮಂಡ್ಯ ಜಿಲ್ಲೆಯ ಪ್ರತಿ ಯುವಕ, ಯುವತಿಯರಿಗೆ ಉದ್ಯೋಗ ಕಲ್ಪಿಸಬೇಕೆಂಬುದು ಕುಮಾರಸ್ವಾಮಿ ಅವರ ಚಿಂತನೆಯಾಗಿದೆ. ಈ ನಿಟ್ಟಿನಲ್ಲಿ ಯೋಜನೆಯನ್ನು ಕೈಗೊಂಡಿದ್ದು, ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು. ಜೊತೆಗೆ ಅಂದು ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಭಾಗಿಯಾಗಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಭಾಗವಹಿಸಿದ ಬಹುತೇಕರಿಗೆ ಉದ್ಯೋಗ ದೊರೆಯುವ ವಿಶ್ವಾಸವಿದ್ದು, ಹಾಗೊಂದು ವೇಳೆ ಉದ್ಯೋಗ ಸಿಗದವರಿಗೂ ದಾಖಲಾತಿ ಪಡೆದುಕೊಂಡು ನಂತರದ ದಿನಗಳಲ್ಲಿ ಉದ್ಯೋಗ ಕಲ್ಪಿಸಲು ಕಂಪನಿ ಮೂಲಕ ನಾವು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಸ್ಪಷ್ಟಪಡಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಡಾ.ಕೆ.ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ, ಕೆ.ಸುರೇಶ್‌ಗೌಡ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್, ಉಪಾಧ್ಯಕ್ಷ ಎಂ.ಪಿ.ಅರುಣ್ ಕುಮಾರ್, ಮುಖಂಡ ಬೇಲೂರು ಸೋಮಶೇಖರ್, ನವೀನ್ ಇತರರಿದ್ದರು.

ಒಳಮೀಸಲಾತಿ ಜಾರಿಗೊಳಿಸುವಂತೆ ಆಗ್ರಹಿಸಿ ಮನವಿ ಸಲ್ಲಿಕೆ



ಒಳಮೀಸಲಾತಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ವತಿಯಿಂದ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ, ಅ.16– ಒಳಮೀಸಲಾತಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ವತಿಯಿಂದ ಬುಧವಾರ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು.

ಸರ್ವೋಚ್ಚ ನ್ಯಾಯಾಲಯದ ಪೂರ್ಣ ಪೀಠ ಆ.1ರಂದು ಎಸ್‌ಸಿ ಮೀಸಲಾತಿಯಲ್ಲಿ ಉಪವರ್ಗೀಕರಿಸಲು ಆಯಾ ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ ಎಂದು ತೀರ್ಪು ನೀಡಿದೆ. ಒಳಮೀಸಲಾತಿ ಜಾರಿಗೊಳಿಸಲು 2023ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ 6ನೇ ಗ್ಯಾರಂಟಿ ಘೋಸಿಸಿದಂತೆ ಒಳಮೀಸಲಾತಿ ಜಾರಿಗೊಳಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ಕರ್ನಾಟಕ ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಚಾ.ಗು.ನಾಗರಾಜ್, ವಕೀಲ ರಾಜೇಂದ್ರ, ಮೂಡಹಳ್ಳಿ ಮೂರ್ತಿ, ಶಿವು ರಾಮಸಮುದ್ರ, ಪುಟ್ಟಸ್ವಾಮಿ ಅಮಚವಾಡಿ, ಮಳವಳ್ಳಿ ಮಹದೇವಯ್ಯ, ಗುರುಲಿಂಗಯ್ಯ, ಚನ್ನಬಸವಯ್ಯ, ಯ.ಮಹದೇವಯ್ಯ, ಲಿಂಗರಾಜು, ಶಿವಕುಮಾರ್, ಚಿನ್ನಸ್ವಾಮಿ, ದೇವರಾಜು, ಅರಕಲವಾಡಿ ಮಹದೇವಯ್ಯ ಇತರರು ಹಾಜರಿದ್ದರು.

ಜೋರು ಮಳೆಗೆ ವಿವಿಧೆಡೆ ಮನೆ ಗೋಡೆ ಕುಸಿತ



ಯಳಂದೂರು ತಾಲೂಕು ಉಪ್ಪಿನಮೋಳೆ ಗ್ರಾಮದ ಮನೆಯೊಂದರ ಗೋಡೆ ಕುಸಿದಿರುವುದು.

ಯಳಂದೂರು: ನಾಲ್ಕು ದಿನಗಳಿಂದ ಸುರಿಯುತ್ತಿರುವ ಜೋರು ಮಳೆಗೆ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಮನೆಗಳ ಗೋಡೆ ಕುಸಿದು ಅಪಾರ ಪ್ರಮಾಣದ ಹಾನಿಯಾಗಿದೆ.

ತಾಲೂಕಿನ ಹೊನ್ನೂರು, ಉಪ್ಪಿನ ಮೋಳೆ, ಕೊಮಾರನಪುರ, ಅಂಬಳೆ, ವೈ.ಕೆ. ಮೋಳೆ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಮಳೆಯಿಂದ ಮನೆಗಳ ಗೋಡೆ ಕುಸಿದಿವೆ. ಇದರಿಂದ ಮನೆಯಲ್ಲಿದ್ದ ವಸ್ತುಗಳಿಗೆ ಹಾನಿಯಾಗಿದೆ.

ಉಪ್ಪಿಮೋಳೆ ಗ್ರಾಮದ ಪುಟ್ಟಸಿದ್ದಮ್ಮ, ಅಂಬಳೆ ಗ್ರಾಮದ ಚರಣ್ ರಾಜ್ ಹಾಗೂ ಹೊನ್ನೂರು ಗ್ರಾಮದ ಮಹದೇವಸ್ವಾಮಿ ಅವರ ಮನೆಯ ಗೋಡೆಗಳು ಕುಸಿದಿವೆ. ಅಲ್ಲದೆ, ಕೊಮಾರನಪುರ ಗ್ರಾಮದಲ್ಲೂ ಮನೆ ಗೋಡೆ ಕುಸಿದಿರುವ ಬಗ್ಗೆ ಮಾಹಿತಿ ಇದೆ. ಸ್ಥಳಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದರು.

ಪೊಲೀಸ್ ಪೇದೆ ಮನೆಯಲ್ಲೇ ಕಳ್ಳತನ

80 ಗ್ರಾಂ ಚಿನ್ನ, 1 ಕೆಜಿ ಬೆಳ್ಳಿ, 40 ಸಾವಿರ ನಗದು ಕಳವು

ಚಾಮರಾಜನಗರ, ಅ.16–ಪೊಲೀಸ್ ಪೇದೆಯೊಬ್ಬರ ಮನೆಗೆ ಖದೀಮರು ನುಗ್ಗಿ ಚಿನ್ನ, ಬೆಳ್ಳಿ ಹಾಗೂ ನಗದು ಕಳ್ಳತನ ಮಾಡಿರುವ ಘಟನೆ ನಗರದ ಚೆನ್ನಿಪುರದ ಮೋಳೆಯಲ್ಲಿ ಮಂಗಳವಾರ ತಡರಾತ್ರಿ ನಡೆದಿದೆ.

ಚಾಮರಾಜನಗರ ಪಟ್ಟಣ ಪೊಲೀಸ್ ಠಾಣೆಯ ಪೇದೆ ಮನು ಕುಮಾರ್ ಅವರ ಮನೆಯಲ್ಲಿ ಕಳ್ಳತನವಾಗಿದ್ದು, 80 ಗ್ರಾಂ ಚಿನ್ನ, 1 ಕೆಜಿ ಬೆಳ್ಳಿ ಹಾಗೂ 40 ಸಾವಿರ ರೂ. ನಗದನ್ನು ಖದೀಮರು ದೋಚಿ ದ್ದಾರೆ. ಪೇದೆ ಮನುಕುಮಾರ್ ಹಾಗೂ ಕುಟುಂಬದವರು ಮಂಗಳವಾರ ಮಹದೇಶ್ವರ ಬೆಟ್ಟಕ್ಕೆ ತೆರಳಿದ್ದರು. ಹೀಗಾಗಿ ರಾತ್ರಿ ಮನೆಯಲ್ಲಿ ಯಾರೂ ಇಲ್ಲದನ್ನು ಅರಿತ ಖದೀಮರು ಮನೆಗೆ ನುಗ್ಗಿ ಕಳ್ಳತನ ಮಾಡಿದ್ದಾರೆ.

ಬುಧವಾರ ಮಧ್ಯಾಹ್ನ ಮನು ಕುಮಾರ್ ಹಾಗೂ ಕುಟುಂಬದವರು ಬಂದು ನೋಡಿದಾಗ ಮನೆಯ ಬೀರುವಿನಲ್ಲಿದ್ದ ಚಿನ್ನಾಭರಣ, ನಗದು ಕಳ್ಳತನವಾಗಿರುವುದು ಪತ್ತೆಯಾಗಿದೆ. ಈ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಸ್ಪಿ ಭೇಟಿ: ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಭೇಟಿ ನೀಡಿ, ಪರಿಶೀಲನೆ ನಡೆಸಿ, ಪೇದೆ ಮನು ಅವರಿಂದ ಮಾಹಿತಿ ಪಡೆದರು. ಇನ್ಸ್‌ಪೆಕ್ಟರ್ ಎ.ಕೆ.ರಾಜೇಶ್ ಇದ್ದರು.

ಕಳವಾದ ಚಿನ್ನ ಪತ್ತೆ ಹಚ್ಚಿ ವಾಪಸ್ ನೀಡಿದ ಪೊಲೀಸರು



ಕಳವಾಗಿದ್ದ ಚಿನ್ನವನ್ನು ಪತ್ತೆ ಹಚ್ಚಿದ ಬೇಗೂರು ಪೊಲೀಸರು ಮಹಿಳೆಗೆ ವಾಪಸ್ ನೀಡಿದರು.

ಬೇಗೂರು: ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ಸಾರಿಗೆ ಬಸ್ ನಿಲ್ದಾಣ ಬಳಿಯ ಸೋಮು ಹೋಟೆಲ್‌ನಲ್ಲಿ ಕಳವಾದ ಚಿನ್ನವನ್ನು ಮರುದಿನವೇ ಪತ್ತೆ ಹಚ್ಚಿ ಪೊಲೀಸರು ವಾರಸುದಾರರಿಗೆ ವಾಪಸ್ ನೀಡಿದ್ದಾರೆ.

ಮಾದಾಪಟ್ಟಣ ಗ್ರಾಮದ ನಿವಾಸಿ ಮಾಯಮ್ಮ ಅವರು ಬೇಗೂರಿನ ಸೋಮು ಹೋಟೆಲ್‌ನಲ್ಲಿ ತಿಂಡಿ ತಿನ್ನುವಾಗ 30 ಗ್ರಾಂ ಚಿನ್ನದ ಸರ ಮತ್ತು 550 ರೂ. ನಗದು ಕಳೆದುಕೊಂಡಿದ್ದರು. ಈ ಸಂಬಂಧ ಬೇಗೂರು ಪೊಲೀಸ್ ಠಾಣೆಗೆ ಮಾಯಮ್ಮ ದೂರು ನೀಡಿದ್ದರು.

ತಕ್ಷಣ ಸ್ಥಳಕ್ಕೆ ಆಗಮಿಸಿದ ಪಿಎಸ್‌ಐ ಚರಣ್‌ಗೌಡ ಮತ್ತು ಸಿಬ್ಬಂದಿ ಹೋಟೆಲ್‌ನ ಸಿಸಿ ಕ್ಯಾಮರಾ ಪರಿಶೀಲಿಸಿದರು. ನೆಲಕ್ಕೆ ಬಿದ್ದ ಚಿನ್ನದ ಸರವನ್ನು ವ್ಯಕ್ತಿ ಎತ್ತಿಕೊಂಡು ಪರಾರಿಯಾಗಿದ್ದ. ಈ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿತ್ತು. ನಂತರ ಪೊಲೀಸರು ಈ ವಿಡಿಯೋವನ್ನು ಕೆಲ ವಾಟ್ಸ್ಆ್ಯಪ್ ಗ್ರೂಪ್‌ಗಳಿಗೆ ಕಳುಹಿಸಿದ್ದರು. ಇದನ್ನು ಗಮನಿಸಿದ ವ್ಯಕ್ತಿಯೊಬ್ಬರು ಸರ ಎತ್ತಿಕೊಂಡ ವ್ಯಕ್ತಿಯ ಬಗ್ಗೆ ಮಾಹಿತಿ ನೀಡಿದ್ದರು.

ನಂತರ ಪೊಲೀಸರು ಆತನನ್ನು ಪತ್ತೆ ಹಚ್ಚಿ ಸರ ಮತ್ತು ಹಣವನ್ನು ಪಡೆದು ಮಾಯಮ್ಮಗೆ ವಾಪಸ್ ನೀಡಿದರು. ಈ ಸಂದರ್ಭದಲ್ಲಿ ವೃತ್ತ ನಿರೀಕ್ಷಕ ವನರಾಜ್ ಮತ್ತು ಪಿಎಸ್‌ಐ ಚರಣ್‌ಗೌಡ, ಎಎಸ್‌ಐ ಅರಸ್, ಸಿಬ್ಬಂದಿ ಮಹೇಶ್, ಪುಟ್ಟರಾಜು, ಮಹೇಶ್, ಮಾದಪಟ್ಟಣ ಡೈರಿ ಮಲ್ಲೇಶ್, ಸುರೇಶ್ ಹಾಜರಿದ್ದರು.

ದೊಡ್ಡತಾಯಮ್ಮ ನಿಧನ



ಕೊಳ್ಳೇಗಾಲ, ಅ.16– ತಾಲೂಕಿನ ಸಿದ್ದಯ್ಯನಪುರ ಗ್ರಾಮದ ನಿವಾಸಿ, ಭಾರತೀಯ ಸೇನೆಯಲ್ಲಿದ್ದ ದಿವಂಗತ ಮುದ್ದುಮಾರಯ್ಯ ಅವರ ಪತ್ನಿ ದೊಡ್ಡತಾಯಮ್ಮ (70) ಬುಧವಾರ ನಿಧನರಾದರು.

ಮೃತರು ಸಂಬಂಧಿಕರು, ಅಪಾರ ಬಂಧು–ಬಳಗದವರನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ(ಅ.17) ಬೆಳಗ್ಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ರಂಗರಾಮಯ್ಯ ನಿಧನ



ಯಳಂದೂರು, ಅ.16– ತಾಲೂಕಿನ ಹೊನ್ನೂರು–ಬೀಚಹಳ್ಳಿ ಗ್ರಾಮದ ರಂಗರಾಮಯ್ಯ(60) ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿ ಹಾಗೂ ಬಂಧು– ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮದಲ್ಲಿ ಬುಧವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಜಿ.ನಾಗಲಿಂಗಸ್ವಾಮಿ



ಚಾಮರಾಜನಗರ, ಅ.16–ತಾಲೂಕಿನ ಬದನಗುಪ್ಪೆ ಗ್ರಾಮದ ಜಿ.ನಾಗಲಿಂಗಸ್ವಾಮಿ (70) ಬುಧವಾರ ರಾತ್ರಿ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗುರುವಾರ ಮಧ್ಯಾಹ್ನ 2 ಗಂಟೆಗೆ ಬದನಗುಪ್ಪೆ ಗ್ರಾಮದ ಮೃತರ ತೋಟದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITE FOR SALE
30X50 WEST FACING
PRICE - 63 LAKHS
30X40 SITE-51 LAKHS
PLACE: NEAR INFOSYS
MUDA APPROVALS
90% LOAN AVAILABLE
9538003006

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಬೇಕಾಗಿದ್ದಾರೆ
ವೆಂಕಟೇಶ್ವರ ಫುಟ್‌ವೇರ್ ಅಂಗಡಿಯಲ್ಲಿ ಕೆಲಸ ನಿರ್ವಹಿಸಲು ಸೇಲ್ಸ್‌ಮೆನ್ಸ್ (ಮಹಿಳಾ/ಪುರುಷ) ಬೇಕಾಗಿದ್ದಾರೆ.
ಮೊ.: 8971378377

ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ ಕುಕ್ ಬೇಕಾಗಿದ್ದಾರೆ. ತಂದೂರಿ ಹಾಗೂ ಚೈನೀಸ್ ಕುಕ್
ALROUND COOK
6366725494, 9901618261

ಬೇಕಾಗಿದ್ದಾರೆ
ಎಮ್.ಎನ್.ಸಿ. ಕಂಪನಿಗೆ 30 ರಿಂದ 65 ವರ್ಷದೊಳಗಿನ ಗೃಹಿಣಿಯರು, ನಿವೃತ್ತ ವ್ಯಕ್ತಿ, ಬಿಸಿನೆಸ್ ವ್ಯಕ್ತಿಯರು ಬೇಕಾಗಿದ್ದಾರೆ.
ಅರ್ಹತೆ: ಪಿಯುಸಿ / ಯಾವುದೇ ಪದವೀಧರರು.
ಸಂಪರ್ಕಿಸಿ: ಟಿ.ಎಸ್. ರವೀಂದ್ರನಾಥ್
Mob: 6361386598

New House for Sale
20x30 E/F
G + 1st Floor
Sathagalli 'B' Zone
Near Ring Road, Opp. VTU Engg. College.
Rs. 72 Lakh final.
Owner: 9945252782

ನಿವೇಶನ ಮಾರಾಟಕ್ಕಿದೆ
ನಿವೇಶನ ಸಂಖ್ಯೆ 117, 36x50 ಪೂರ್ವ ದಿಕ್ಕು (ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಶಿಕ್ಷಕರ ಬಡಾವಣೆ) (ಮೈಸೂರು ನಗರ ಪಾಲಿಕೆಗೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ). ಡಾ|| ರಾಜ್‌ಕುಮಾರ್ ರಸ್ತೆ, 1ನೇ ಹಂತ, ಮೈಸೂರು. ಸಂಪರ್ಕಿಸಿ:
9341299699, 990066189

WANTED
ಫರ್ನಿಶಿಂಗ್ ಅಂಗಡಿಯಲ್ಲಿ ಅಕೌಂಟೆಂಟ್ ಕೆಲಸಕ್ಕೆ
1 Year Experience ಇರುವವರು ಮಹಿಳೆಯರು ಮತ್ತು ಹುಡುಗರು ಬೇಕಾಗಿದ್ದಾರೆ.
Language-Hindi & Kannada Compulsory, Address: Akbar Road, Near Ashoka Road
9916514950

ಬೇಕಾಗಿದೆ
ಮೈಸೂರು ನಗರದ ಮುಖ್ಯ ರಸ್ತೆಗಳಲ್ಲಿ ಫ್ಯಾಮಿಲಿ ವೆಜ್ ರೆಸ್ಟೋರೆಂಟ್ ನಡೆಸಲು ಉತ್ತಮವಾದ ಜಾಗ ಬಾಡಿಗೆಗೆ ಬೇಕಾಗಿದೆ.
9900661620

SITES FOR SALE @ IT Park
30x40 @ Rs. 16 Lakhs
9880055095

SITE FOR SALE
MUDA 40x60
North Facing Heritage Housing Layout
Hadjana, Bandipalya
Price 2750/- per sqft
7026700056

ಬೇಕಾಗಿದ್ದಾರೆ
ನಿಮಗೆ ಕೆಲಸದ ಅವಶ್ಯಕತೆ ಇದೆಯಾ ? ಬೆಳಿಗ್ಗೆ 11 ರಿಂದ ರಾತ್ರಿ 10 ರವರೆಗೆ ಕುವೆಂಪುನಗರದಲ್ಲಿ ಜ್ಯೂಸ್, ಸ್ಯಾಂಡ್‌ವಿಚ್ ಮಾಡಲು ಪುರುಷರು 30 ರಿಂದ 40 ಮಾತ್ರ. ಸಂಪರ್ಕಿಸಿ:
Mob: 9448054151

"Built to Suit"
3500 square feet
Near BSNL office, opp. to jyothi hospital, Rajkumar Road, Mysuru.
Contact : 9663062222, 9448294483

WANTED
Accountant
Helper boys
Tata ace Driver
Contact 9448067939 | 9739569260

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್–(ಬೆಳವಾಡಿ, ವಿಜಯನಗರ 4ನೇ ಹಂತ, ಹೂಟಗಳ್ಳಿ)
2) ಮಹಿಳೆಯರು–ಹೋಟೆಲ್ ಕೆಲಸಕ್ಕೆ (ಒಂಟಿಕೊಪ್ಪಲ್, ಹಿನಕಲ್, ವಿಜಯನಗರ) ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ.
9739166772

ಈ ತಕ್ಷಣವೇ ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು, ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು, ಟೈಲರುಗಳು ಮತ್ತು ಹೆಲ್ಪರ್‌ಗಳು, ಮತ್ತು ಅಕೌಂಟೆಂಟ್ ಹಾಗೂ ಐಟಿಐ (ITI) ಆದವರು ಬೇಕಾಗಿದ್ದಾರೆ.
ESI & PF ವಾರದ ರಜೆ ಇರುತ್ತದೆ.
7795285485, 8105249880

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

TNI TECHNOLOGIES
Dr. Rajkumar Road & Bogadi, MYSORE
100% Job Oriented Courses
SAP FICO/MM/SD/HR
JAVA PYTHON Full Stack Development
TALLY With GST
Wanted Computer Trainer Proficient in Word, Excel & Tally Prime with GST
8951208347

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಶೀಘ್ರ ವಿವಾಹಕ್ಕಾಗಿ ವರ ಬೇಕಾಗಿದೆ
*(ಬ್ರಾಹ್ಮಣ ವಧು) ವಯಸ್ಸು 25, SSLC ಕಲಿತಿರುವ *(ಲಿಂಗಾಯುತ ವಧು) ವಯಸ್ಸು 28, SSLC ಕಲಿತಿರುವ *(GSB, RSB, ಕೊಂಕಣಿ) ವಯಸ್ಸು 26 SSLC ಕಲಿತಿರುವ *(ಬ್ರಾಹ್ಮಣ ವಧು) ವಯಸ್ಸು 33 PUC ಕಲಿತಿರುವ * (ಬ್ರಾಹ್ಮಣ ವಧು) ವಯಸ್ಸು 38, SSLC ಕಲಿತಿರುವ ವಧುವಿಗೆ ವರ ಬೇಕಾಗಿದೆ
ಸಂಪರ್ಕಿಸಿ: 8792731562

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

WANTED
Tellecallers- Female Candidates, Work - Interior showroom
Salary - 12k to 15k
Time: 10:30am to 7pm
Add: Irwin road Mysore
8050744784

ನಿವೇಶನ ಮಾರಾಟಕ್ಕಿದೆ
259
ಪೂರ್ವ ದಿಕ್ಕು, 40x60
ಶಾರದಾ ಬಡಾವಣೆ
ಜೆ.ಪಿ.ನಗರ
9900146468

ಸೈಟುಗಳು ಮತ್ತು ಜಮೀನಿಗೆ ಫೆನ್ಸಿಂಗ್ ಕಲ್ಲುಗಳು ಹಾಗೂ ಕಾಂಪೌಂಡ್ ಹಾಕಿ ಕೊಡಲಾಗುತ್ತದೆ ಮತ್ತು ಗ್ರಾವೆಲ್ ಮಣ್ಣು ದೊರೆಯುತ್ತದೆ.
7259407518, 8310220458

ನಿವೇಶನ ಮಾರಾಟಕ್ಕಿದೆ
40x20 W/F 2ನೇ ಹಂತ ಶ್ರೀರಾಂಪುರ Sqft 6300
11 ಗುಂಟೆ ಜಮೀನು ದೇವಗಳ್ಳಿ ಮುಖ್ಯರಸ್ತೆ, 100x115 ಶ್ರೀರಾಂಪುರ ರಿಂಗ್ ರಸ್ತೆಯಿಂದ 5 Km.
9342288281

Job's @ Mysore
Meet today, join tomorrow. ಯುವಕ, ಯುವತಿಯರು Age (18-24), 10th, PUC, BBM Diploma. Earn (10,400 to 18600) PM. Only fresher. ಪರಸ್ಥಳದವರಿಗೆ ಮಾತ್ರ ವಸತಿ 'No Fee' ನೇರ ಸಂದರ್ಶನ.
Impulse, Agrahara, Mysore
Call: Kavvy
Mob: 9342827788

FOR SALE
MUDA APPROVED
30x40 North Facing Site
35 lakhs
3 kms from Ring Road
NEW HOUSE
20x30 North Facing - 85 lakhs
Opp IPS Nagar, Mysore
98800 65122, 98459 84587

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆ – ಜಯಲಕ್ಷ್ಮೀಪುರಂದಲ್ಲಿ ಇರುವ ಶುದ್ಧ ಸಸ್ಯಾಹಾರಿ ಹೋಟೆಲ್‌ಗೆ ಅನುಭವ ಇರುವ ದೋಸಾ ಭಟ್ರು (Dosa Chef), ಕೌಂಟರ್ (Parcel packing) ಸರ್ವಿಸ್ (Waiter - supplier), ಸೌತ್ ಕಿಚನ್ allrounder (South Assistant) ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ, ಊಟ ಮತ್ತು ವಸತಿ ಸೌಲಭ್ಯ ಇದೆ.
90199 16266

ಬೇಕಾಗಿದ್ದಾರೆ
ಮೈಸೂರಿನ ಲ್ಯಾಂಡ್ ಡೆವಲಪ್ಪರ್ಸ್ ಮತ್ತು ರಿಯಲ್ ಎಸ್ಟೇಟ್ ಕಛೇರಿಯಲ್ಲಿ ಕೆಲಸ ಮಾಡಲು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ PUC ಕೆಲಸದ ಸಮಯ ಬೆಳಿಗ್ಗೆ 11 ರಿಂದ ಸಂಜೆ 4 ಗಂಟೆ ಸಂಪರ್ಕಿಸಿ
8105213239

ಸೈಟ್ ಫಾರ್ ಸೇಲ್
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್, 28.5x40 ಸೈಟ್ ನಂ.349, ದಡದಹಳ್ಳಿ ಜ್ಞಾನಭಾರತಿ ಲೇಔಟ್, ಏರ್ ಪೋರ್ಟ್ ಹಿಂಭಾಗದ ಹೈವೇ ಮುಡಾ ಖಾತೆ, ಡೈರೆಕ್ಟ್ ಓನರ್, 36 ಲಕ್ಷ
9342123373

ಉಚಿತ ತರಬೇತಿ
ಮನೆಯಿಂದಲೇ ಬತ್ತಿಗಳು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
7411565140, 7892046990

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, ಜೆಎಸ್‌ಎಸ್ ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ.
Mob: 9844436672

MUDA APPROVED
SITES FOR SALE
30x35 W/F, ನಂ. 8 ಸುವರ್ಣನಗರ, ಬೆಲೆ 26 ಲಕ್ಷಗಳು. 30x40 N/F, No. 1031, ಸುವರ್ಣನಗರ, ಬೆಲೆ 33 ಲಕ್ಷಗಳು. 30x40 W/F No. 249 ವಿಶ್ವಪ್ರಜ್ಞ ಬಡಾವಣೆ ಬೆಲೆ 33 ಲಕ್ಷಗಳು. ಮರಟಿಕ್ಯಾತನಹಳ್ಳಿ ಹತ್ತಿರ.
Mob: 8880787811

SITE FOR SALE
West facing
30 X 40 SITE
MMG Grand City
KRS road. Mysuru
Muda approved site
8971100199

Construction and interior work
New construction residential / commercial / industrial MS/SS fabrication work
8296698852

ತಕ್ಷಣ ಬೇಕಾಗಿದ್ದಾರೆ
ಟೆಲಿಕಾಲಿಂಗ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. ಮಂಡ್ಯ ಹಾಗೂ ಮೈಸೂರು. 8000 ರಿಂದ 10,000 fixed salary. ಟಾರ್ಗೆಟ್ ಇರುವುದಿಲ್ಲ.
9036489760, 9036489767

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Aniketana Road, kuvempunagar, Mysuru
9611028523, 9343142258

Change of Name
I, Riaz Uddin, S/o Abdul Gaffar Tamkin, residing at Maachagondanahalli, Sathihalli, Gullanpet, Chikkamagalur, have changed my father's name from Abdul Gaffar Tamkeen to Abdul Gaffar Tamkin on 19-9-2024 in front of Notary K.S. Adithya.
Sd/- Riaz Uddin

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
Mob: 6360884930

ತಕ್ಷಣ ಬೇಕಾಗಿದ್ದಾರೆ
ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಕಂಪನಿ ಆಫೀಸ್ ಕೆಲಸಕ್ಕೆ 7, 10 ಮತ್ತು ಡಿಗ್ರಿ ಪಾಸ್ ಫೇಲ್ ಆದ ಗ್ರಾಮೀಣ ಭಾಗದ ಯುವಕ ಯುವತಿಯರಿಗೆ ವಸತಿಯೂಟದೊಂದಿಗೆ ಸಂಬಳ 18,000, ESI, PF ಸೌಲಭ್ಯ ದೊಂದಿಗೆ ಬಂದ ದಿನವೇ ಕೆಲಸ ಸಂಪರ್ಕಿಸಿ:
Mob: 8884075899

WANTED
Sales Boys to Work in A Store
Time: 10 am to 7 pm
(Full time), Mysore
7760109047, 8105368325

SITES FOR SALE @ IT PARK
CALL 9108606262

Commercial Sites for Immediate Sale
Direct Developer Sites
* MUDA / RERA Approved
* Ready for Registration
* Bank loan available.
* Behind Infosys, Mysuru
* 1200 - 3500 (2999 sq.ft. rate).
9060495010 / 9900674179

ಹೊಸ ಮನೆ ಮಾರಾಟಕ್ಕಿದೆ
20x30, 2 BHK ಮನೆ
ಬೆಲೆ: ರೂ. 46 ಲಕ್ಷ,
ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಮೈಸೂರು
Mob: 8453030560

Change of Name
I, Pooja Jain, residing at #404/B, Ahimsa Marga, Siddartha Layout, Mysuru-570 011, have changed my name from Pooja to Pooja Jain on my own free will, sworn in before Notary Geetha, Mysuru, vide affidavit dated 16-10-2024.
Aadhar No. 420314328724
Sd/- Pooja Jain

ಚಾಮುಂಡೇಶ್ವರಿ ದೇವಾಂಗ ಮ್ಯಾರೇಜ್ ಬ್ಯೂರೋ
BE, MBA, M.Tech, MCA, India, USA, UK, Canada, B'lore / Mysore, ST B.Ed., Doctors, Engg. Software Engg ಎಲ್ಲಾ ಜಾತಿಯ ವಧುವರರಿಗೆ ನೇರವಾಗಿ ಸಂಪರ್ಕಿಸಿ:
Mob: 8951241381
ವಿಧುರ, ವಿಧವೆಯರು, 2ನೇ ಸಂಬಂಧ. ನೇರವಾಗಿ ಭೇಟಿ ಮಾಡಿ.

ಬೇಕಾಗಿದ್ದಾರೆ
ಪುರುಷ ಸಸ್ಯಾಹಾರಿ ಅಡುಗೆ ತಯಾರಕರು ESI, PF ಮತ್ತು ವಸತಿ ಸೌಲಭ್ಯವಿರುತ್ತದೆ.
ವಿಕ್ರಂ ಕಾಲೇಜ್ ಆಫ್ ನರ್ಸಿಂಗ್, ಮೈಸೂರು
8310846772, 9535096161

ಬೇಕಾಗಿದ್ದಾರೆ
ಅನುಭವವುಳ್ಳ ವಿದ್ಯಾವಂತ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಹಿನಕಲ್ ಮೇಟಗಳ್ಳಿ ಬೋಗಾದಿ ಮತ್ತು ಜೆ.ಪಿ.ನಗರ, ವರ್ಣ ಹಾಗೂ ಮೈಸೂರಿನ ಸುತ್ತ ಮುತ್ತ
9035269781, 9538886328

ಮಾರಾಟಕ್ಕಿದೆ
20x30 ಮನೆ
50 ಲಕ್ಷ ದಟ್ಟಗಳ್ಳಿ
30x40 ಸೈಟ್ ಆದಿತ್ಯ ಸರ್ಕಲ್ ಹತ್ತಿರ
40x60 ಸೈಟ್ ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ
9945042875

ಮೈಸೂರು ಲ್ಯಾಂಡ್ ಮಾರ್ಟ್
ಬನ್ನೂರು ರಸ್ತೆ, ಹಂಚ್ಯಾ ಸಾತಗಳ್ಳಿ ಹಾಗೂ ಟಿ.ನರಸೀಪುರ ರಸ್ತೆಗಳಲ್ಲಿ ಮುಡಾ ಹಾಗೂ ಮುಡಾ ಅನುಮೋದಿತ ಬಡಾವಣೆಯಲ್ಲಿ ಎಲ್ಲಾ ಅಳತೆಯ ನಿವೇಶನಗಳು ಲಭ್ಯವಿದೆ.
Mob: 9448447035

SITE FOR SALE
50x80 MUDA allotted site, West facing, 60 Ft. Road at Vijayanagar 4th Stage, 2nd Phase, near SVEI School.
Call: 9620349543

WANTED
Executives - for Stock Market
Accounts Assistants
(Computer knowledge must)
Salary: Rs. 10 - 20K
9060109063, 7795301535

ಬೇಕಾಗಿದ್ದಾರೆ
ಶ್ರೀರಂಗಪಟ್ಟಣದ ಅತಿಥಿ ಗೃಹಕ್ಕೆ ತೋಟಗಾರ ಕುಟುಂಬದ ಆದ್ಯತೆ. ಒದಗಿಸಿದ ಸೌಲಭ್ಯಗಳೊಂದಿಗೆ ಉತ್ತಮ ವಸತಿ.
Mob: 98802 60295

House for Rent
Two bedrooms house for rent, ground floor, near Nirmala Convent, 55, 6th Cross, Gokulam 1st Stage, Mysore.
9986589770, 9986724216

ಸುವರ್ಣಾವಕಾಶ
ಸರ್ಕಾರದಿಂದ ನಿವೃತ್ತಿ ಹೊಂದಿರುವ ಹಾಗೂ ಸ್ವಯಂ ನಿವೃತ್ತಿ ಪಡೆದುಕೊಂಡಿರುವ ಸರ್ಕಾರಿ ಅಧಿಕಾರಿಗಳಿಗೆ ಮತ್ತು ಗೃಹಿಣಿಯರಿಗೆ ಅರ್ಜಿಗಳನ್ನು ಆಫೀಸರ್ ಹುದ್ದೆಗೆ ಆಹ್ವಾನಿಸಲಾಗಿದೆ. ಫಿಕ್ಸೆಡ್ ತಿಂಗಳ ಸಂಬಳ
9110676257, 9739239004

ಮನೆ ಬಾಡಿಗೆಗೆ
2BHK (20x50)
Ground Floor
Near Kuvempungar Complex
9141576014

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training.
www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SITES for SALE
JP Nagar Ring Road
30x40,34Lakhs
Near Gurur Bus Stop, Ramabainagar,Mysore.
DTCP approved (Corporation limits)
8660105902

HOUSE SALE Kuvempunagar
MUDA,2+1 BHK, Residential Old House, 35x55,N/F,Park Opposite,
Price -2.10 Cr,
Near Vijaya Bank Circle,
Contact Owner.Brokers Excuse
9035412545

ಪ್ರಮಾಣ ಪತ್ರ
ಮೈಸೂರು ಸಿಟಿ, ಜನತಾನಗರ, ಸರಸ್ವತಿಪುರಂ ಪೋಸ್ಟ್, 2ನೇ ಕ್ರಾಸ್, ಮನೆ ನಂ. 1124ರಲ್ಲಿ ವಾಸವಾಗಿರುವ ಮಹೇಶ್ ಎಂ. ರವರ ಮಗನಾದ ನವೀನ್ ಎಂ. ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಆಧಾರ್‌ನಲ್ಲಿ (ಆಧಾರ್ ನಂ. 4444 9736 4817) ನನ್ನ ತಂದೆಯ ಹೆಸರು ಮಹೇಶ್ ಎಂ. ಎಂದು ನಮೂದಾಗಿದ್ದು, ನನ್ನ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ (ನೋಂದಣಿ ಸಂಖ್ಯೆ 20130666309) ರಲ್ಲಿ ನನ್ನ ತಂದೆಯವರ ಹೆಸರು ಮಹೇಶ್ ಎಸ್. ಎಂದು ನಮೂದಾಗಿರುತ್ತದೆ. ಆದ್ದರಿಂದ ಮೇಲ್ಕಂಡ ಮಹೇಶ್ ಎಂ. ಮತ್ತು ಮಹೇಶ್ ಎಸ್. ಎಂಬ ಎರಡೂ ಹೆಸರುಗಳು ನನ್ನ ತಂದೆಯವರದ್ದೇ ಆಗಿರುತ್ತದೆ ಎಂದು ನೋಟರಿ ರಮಾದೇವಿ ಎಂ. ರವರು ಎದುರು ದಿನಾಂಕ 5–10–2024ರಂದು ಪ್ರಮಾಣೀಕರಿಸುತ್ತೇನೆ.
ಸಹಿ/– ನವೀನ್ ಎಂ.

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್ ಕ್ಯಾಶಿಯರ್ಸ್ ಹಾಗೂ ಕ್ಲೀನಿಂಗ್ ಮತ್ತು ಪ್ಯಾಕಿಂಗ್‌ಗೆ ಬೇಕಾಗಿದ್ದಾರೆ. ಉತ್ತಮ ಸಂಬಳ ಕೊಡಲಾಗುವುದು. ಊಟದ ವ್ಯವಸ್ಥೆ ಇರುವುದು ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು
9739816440

ದೈವಕೃಪ
ಎಲ್ಲಾ ಜನಾಂಗದ ಎಲ್ಲಾ ವಿದ್ಯೆ ನೌಕರಿಯ ವಧು, ವರರಿಗೆ ಮತ್ತು 5.7.8, SSLC, PUC Any Degree ಗ್ರಾಮಾಂತರ ಬಡ ಕುಟುಂಬದಿಂದ ಇರುವ ವಧುಗಳಿಗೆ ಉತ್ತಮ ವರಗಳನ್ನು ಹುಡುಕಿ ಕೊಡುತ್ತೇವೆ. 2ನೇ ಸಂಬಂಧಕ್ಕೆ Cast No Bar ಮತ್ತು ಹೊರದೇಶದಲ್ಲಿರುವವರಿಗೂ ಕೂಡಲೇ ಸಂಪರ್ಕಿಸಿ ಮುಂಗಡ ಹಣ ಬೇಕಾಗಿಲ್ಲ.
9902802154

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Laboratory Technician	CMLT / DMLT
Pharma Assistant	PUC / Degree

0821-2499188, 9880186386

REQUIRED
Marketing Executive required for Land Developer
* Hiring Marketing Executive & Customer Relationship Executive (Both male & female preferred).
* Minimum 1 year experience in real estate with god communication.
* Monthly salary + commission.
Mob: 7899798479

SITE FOR SALE
40x60 West face site at Tranquil Layout (Attach RT Nagar)
Call: 9740088990

Houses & Office Space for Rent
@ Saraswathipuram, Kuvempunagar & surroundings.
S.S. Property Services
(Opp. Kuvempu School)
S.S. Puram, Mysore
Mob: 93421-25252

WANTED SITES
@ Bogadi, Dattagalli, Vijayanagar, Nagawala, Yelwala & Mysore surroundings. Quick Regn.
Mob: 95388-39926

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿಗಾರ್ಡ್ಸ್ (ಬೋಗಾದಿ, ದಾಸನಕೊಪ್ಪಲು) ಸುನಂದಾಗೇಟ್, ಹೆಬ್ಬಾಳು, ಹೂಟಗಳ್ಳಿ, ಹುಣಸೂರು, ಜಯಲಕ್ಷ್ಮೀಪುರಂ, ದಟ್ಟಗಳ್ಳಿ) ಫೀಲ್ಡ್ ಆಫೀಸರ್, ಮಾರ್ಕೆಟಿಂಗ್ ಮ್ಯಾನೇಜರ್‌ಗಳು ಬೇಕಾಗಿದ್ದಾರೆ.
9632049421

ಕಳೆದಿದೆ
ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ದೊಡ್ಡಕೌಲಂದೆ ಹೋಬಳಿ ರಾಮಶೆಟ್ಟಿಪುರ ಗ್ರಾಮದ ಸರ್ವೆ ನಂಬರ್ 1 ರಲ್ಲಿ 4 ಎಕರೆ 2 ಗುಂಟೆ ಜಮೀನು ಬಾಬ್ತು ಮೂಲ ದಾಖಲಾತಿ ಗ್ರ್ಯಾಂಟ್/ಸಾಗುವಳಿ ಪತ್ರ 5 & 6 ಕಾಪಿ MR ಕಾಪಿ EX ದಾವೆ ನಂಬರ್ 909 1996ರ ದಾವೆ ಕಾಪಿಂಸು ಮೂಲ ದಾಖಲಾತಿಗಳು ಕಳೆದಿವೆ ಸಿಕ್ಕಿದವರು. ತಂದು ಕೊಟ್ಟರೆ ಸೂಕ್ತ ಬಹುಮಾನ
9036455766

MUDA APPROVED
SITE FOR SALE
Near Infosys, Mysore
2999 / Sq.ft. Negotiable
Bank loan available.
Direct Developer
No Commission
Mob: 7899798479

HOUSE FOR SALE
20x40 East Face
3 BHK with pillars
MUDA, clear documents, own borewell, Vaastu, Police Layout.
Call: 9380284276

ಬೇಕಾಗಿದ್ದಾರೆ
ಮಾರ್ಕೆಟಿಂಗ್ ಕೆಲಸಕ್ಕೆ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. (ದ್ವಿಚಕ್ರ ವಾಹನ ಹೊಂದಿರುವವರಿಗೆ ಆದ್ಯತೆ) ಆಕರ್ಷಕ ವೇತನ ಮತ್ತು ಭತ್ಯೆ ಸಂಪರ್ಕಿಸಿ:
9686616899

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮುಂದಿನ ವರ್ಷದಿಂದ ಹಾಲು ಉತ್ಪಾದಕರಿಗೆ 5 ರೂ. ಪ್ರೋತ್ಸಾಹ ಧನ

ತಿ.ನರಸೀಪುರದಲ್ಲಿ ಮೈಮುಲ್ ಉಪಕಚೇರಿ ಉದ್ಘಾಟನೆಯಲ್ಲಿ ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್ ಭರವಸೆ



ತಿ.ನರಸೀಪುರ ಪಟ್ಟಣದ ಎಪಿಎಂಸಿ ಆವರಣದಲ್ಲಿ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರಿ ಸಂಘದ ವತಿಯಿಂದ ನಿರ್ಮಿಸಲಾದ ಮೈಮುಲ್ ಉಪ ಕಚೇರಿಯನ್ನು ಪಶುಸಂಗೋಪನ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು.

ತಿ.ನರಸೀಪುರ, ಅ.16– ಮುಂದಿನ ವರ್ಷ ಜನವರಿಯಿಂದ ಹಾಲು ಉತ್ಪಾದಕರಿಗೆ ಲೀಟರ್ ಹಾಲಿಗೆ 5 ರೂ. ಪ್ರೋತ್ಸಾಹ ಧನ ನೀಡಲಾಗುವುದು ಎಂದು ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್ ತಿಳಿಸಿದ್ದಾರೆ.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಮೈಸೂರು ಜಿಲ್ಲಾ ಸಹಕಾರಿ ಉತ್ಪಾದಕರ ಸಂಘಗಳ ಒಕ್ಕೂಟದಿಂದ 1.15 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಮೈಸೂರು ಹಾಲು ಒಕ್ಕೂಟದ ಉಪ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರೈತರು ಹೈನುಗಾರಿಕೆಯಲ್ಲಿ ತೊಡಗಿದ್ದು, ಸಹಕಾರ ಸಂಘಗಳಿಂದ ಹೆಚ್ಚಿನ ನೆರವು ಬೇಕು ಎಂದು ಕೇಳುತ್ತಿದ್ದಾರೆ. ರೈತರಿಗೆ ಅಗತ್ಯ ಸಹಕಾರ ನೀಡುವ ದೃಷ್ಟಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರು 5 ರೂಪಾಯಿ ಪ್ರೋತ್ಸಾಹ ಧನ ನೀಡಲು ಚಿಂತಿಸಿದ್ದಾರೆ. ಈ ಬಗ್ಗೆ ಚರ್ಚಿಸಿದ್ದು, ಮುಂದಿನ ಜನವರಿಯಿಂದ ಇದು ಜಾರಿಯಾಗಲಿದೆ ಎಂದು ಹೇಳಿದರು.

ಒಕ್ಕೂಟದಲ್ಲಿ ಹೆಚ್ಚು ನಷ್ಟವಾಗುತ್ತಿದೆ ಎಂದು ಹೇಳುತ್ತಾರೆ. ನಾವು ಒಕ್ಕೂಟ ಮಾಡಿರುವುದು ರೈತರ ನೆರವಿಗೆ ನಿಲ್ಲಲು. ಆದರೆ ಒಕ್ಕೂಟದ ನಷ್ಟಕ್ಕೆ ರೈತರಿಗೆ ನೀಡುವ ಅನುದಾನದಲ್ಲಿ ಕಡಿತಗೊಳ್ಳಬಾರದು. ಒಕ್ಕೂಟದಲ್ಲಿ ದುಂದು ವೆಚ್ಚವನ್ನು ಕಡಿಮೆ ಮಾಡುವಂತೆ ಆ ಮೂಲಕ ರೈತರಿಗೆ ಹೆಚ್ಚು ಆರ್ಥಿಕ ನೆರವು ನೀಡುವಂತೆ ಅವರು ಒಕ್ಕೂಟದ ಅಧ್ಯಕ್ಷರಿಗೆ ಸಲಹೆ ಮಾಡಿದರು.

ಹಾಲಿನ ಸಬ್ಸಿಡಿಗೆ ಕಳೆದ ವರ್ಷ 1200 ಕೋಟಿ ಮೀಸಲಿಟ್ಟು ವಿತರಿಸಿದ್ದೇವೆ. ಈ ಬಾರಿ 1300 ಕೋಟಿ ಮೀಸಲಿಟ್ಟು 700 ಕೋಟಿ ವಿತರಣೆಯಾಗಿದೆ. ಪ್ರೋತ್ಸಾಹ ಧನ ವಿಳಂಬಕ್ಕೆ ಹಿಂದಿನ ಬಿಜೆಪಿ ಸರ್ಕಾರ ರೈತರಿಗೆ 700 ಕೋಟಿ ಬಾಕಿ ಉಳಿಸಿತ್ತು. ಈಗ ಅದರ ಬಾಬ್ತು 300 ಕೋಟಿ ನಾವು ಪಾವತಿಸಿದ್ದೇವೆ. ಇನ್ನೂ 400 ಕೋಟಿ ಬಾಕಿ ಇದೆ. ಆದರಿಂದ ವಿಳಂಬವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ, ಹೈನುಗಾರಿಕೆ ಹಳ್ಳಿಗಳ ಜನರ ಸ್ವಾವಲಂಬನೆಗೆ ಪೂರಕವಾಗಿದೆ. ಸ್ವರಾಜ್ಯ ಮತ್ತು ಸ್ವಾವಲಂಬನೆ ಗಾಂಧೀಜಿಯವರ ಕನಸು. ಇತ್ತೀಚೆಗೆ ಹಳ್ಳಿಗಳು ನಗರೀಕರಣಗೊಳ್ಳುತ್ತಿವೆ. ಹಳ್ಳಿಯ ಆರ್ಥಿಕ ಸುಧಾರಣೆಗೆ ಸರ್ಕಾರ ಹಲವಾರು ಯೋಜನೆಗಳನ್ನು ನೀಡುತ್ತಿವೆ. ಹಳ್ಳಿಗಳಲ್ಲಿ ನಗರಗಳಲ್ಲಿ ಸಿಗುವ ಸೌಲಭ್ಯಗಳು ಸಿಗಬೇಕು ಎಂದು ಅಬ್ದುಲ್ ಕಲಾಂ ಅವರು ಒಮ್ಮೆ ಹೇಳಿದ್ದರು. ಈ ಹಿನ್ನೆಲೆಯಲ್ಲಿ ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಿದರೆ ಸ್ವರಾಜ್ಯದ ಪರಿಕಲ್ಪನೆ ಈಡೇರುತ್ತದೆ ಎಂದು ಹೇಳಿದರು.

ತಾಲೂಕಿನಲ್ಲಿ 146 ಸಹಕಾರ ಸಂಘಗಳಿವೆ. 34 ಮಹಿಳಾ ಸಂಘಗಳು ಹಾಗೂ 110 ಪುರುಷರ ಸಹಕಾರ ಸಂಘಗಳಿವೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಸದಸ್ಯರ ಸಂಖ್ಯೆ ಬಹಳ ಕಡಿಮೆ ಇದ್ದು, ಅವರ ಸಂಖ್ಯೆ ಹೆಚ್ಚು ಮಾಡುವ ನಿಟ್ಟಿನಲ್ಲಿ ಕ್ರಮ ವಹಿಸಬೇಕು. ವರ್ಷಕ್ಕೆ 1600 ಕೋಟಿ ಇನ್‌ಸೆಂಟಿವ್ ನೀಡುತ್ತಿದ್ದೇವೆ. ಇದರಿಂದ ರೈತರ ಕುಟುಂಬಗಳಿಗೆ ಕನಿಷ್ಠ ಆದಾಯ ಸಿಗಬೇಕು ಎಂಬುದು ಸರ್ಕಾರದ ಆಶಯವಾಗಿದೆ. ಗ್ಯಾರಂಟಿ ಮೂಲಕ ನಾವು ಕುಟುಂಬಗಳಿಗೆ ಆರ್ಥಿಕ ಭದ್ರತೆ ನೀಡಿದ್ದೇವೆ ಎಂದು ತಿಳಿಸಿದರು.

ಈ ತಿಂಗಳ ಅಂತ್ಯದಲ್ಲಿ ಹಾಗೂ ಮುಂದಿನ ತಿಂಗಳಲ್ಲಿ ನೂರಾರು ಕೋಟಿ ಯೋಜನೆಗಳಿಗೆ ಚಾಲನೆ ನೀಡಲಾಗುತ್ತಿದೆ. ಮುಖ್ಯಮಂತ್ರಿಗಳು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ ಎಂದರು.

ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ. ವಜ್ರೇಗೌಡ, ಪುರಸಭಾ ಅಧ್ಯಕ್ಷೆ ವಸಂತ ಶ್ರೀಕಂಠ, ಮಾಜಿ ಅಧ್ಯಕ್ಷ ಟಿ.ಎಂ. ನಂಜುಂಡ ಸ್ವಾಮಿ, ಸದಸ್ಯ ಸಿ.ಪ್ರಕಾಶ್, ಬಾದಾಮಿ ಮಂಜು, ಮೈಮುಲ್ ಎಂ.ಡಿ. ಸುರೇಶ ನಾಯಕ್, ಮೈಮುಲ್ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕ ಸಿ. ಓಂಪ್ರಕಾಶ್ ಕಾರ್ಯಕ್ರಮದಲ್ಲಿ ಸ್ವಾಗತಿಸಿದರು. ಮಾಜಿ ಅಧ್ಯಕ್ಷರಾದ ಕೆ.ಜಿ. ಮಹೇಶ್, ಕೆ. ಉಮಾ ಶಂಕರ್, ನಿರ್ದೇಶಕರಾದ ಬಿ.ಎಸ್.ಸದಾನಂದ, ಈರೇಗೌಡ, ಬಸವಣ್ಣ, ಕೆ.ಎಸ್. ಕುಮಾರ, ಪ್ರಕಾಶ್, ನೀಲಾಂಬಿಕ, ಶಿವಗಾಮಿನಿ, ಮಲ್ಲಿಕಾ, ಲೀಲಾ ನಾಗರಾಜು, ದ್ರಾಕ್ಷಿಯಿನಿ, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕಿ ಲತಾ ಜಗದೀಶ್, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್, ಮುಖ್ಯಾಧಿಕಾರಿ ಬಿ.ಕೆ. ವಸಂತ ಕುಮಾರಿ, ಬನ್ನೂರು ಮುಖ್ಯಾಧಿಕಾರಿ ಹೇಮಂತ್‌ರಾಜ್, ಆರೋಗ್ಯ ಅಧಿಕಾರಿ ಮಧು, ಮಾಜಿ ಜಿಪಂ ಅಧ್ಯಕ್ಷ ಸಿದ್ದಾರ್ಥ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಡಿ.ಬಸವರಾಜು, ರಮೇಶ, ಮುದ್ದೇಗೌಡ, ಮಾಡ್ರಹಳ್ಳಿ ಶಿವಮೂರ್ತಿ, ಮೈಮುಲ್ ವಿಸ್ತರಣಾಧಿಕಾರಿ ಆರ್.ಪ್ರಮೋದ್, ಕೊಳತ್ತೂರು ಡೈರಿ ಅಧ್ಯಕ್ಷ ಕೆ.ಎನ್. ಕುಮಾರ್, ಡೇರಿ ಗುರುಮೂರ್ತಿ ಹಾಜರಿದ್ದರು.

ಚಾಕೊಲೇಟ್, ಪನ್ನೀರ್ ಘಟಕ ಆರಂಭಿಸಲು ಅನುದಾನಬೇಕು

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಲು ಉತ್ಪಾದಕರಿಗೆ 5 ರೂ.ಪ್ರೋತ್ಸಾಹ ಧನ ನೀಡಲು ಮುಂದಾಗಿದ್ದು, ಅವರಿಗೆ ಒಕ್ಕೂಟ ಮತ್ತು ರೈತರ ಪರವಾಗಿ ಅಭಿನಂದಿಸುತ್ತೇನೆ. ಮೈಸೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ ಪ್ರತಿ ದಿನ 9 ಲಕ್ಷ ಲೀಟರ್ ಹಾಲು ಬರುತ್ತಿದ್ದು, ಅದರಲ್ಲಿ 4.5 ಲಕ್ಷ ಲೀಟರ್ ಹಾಲು ಮಾರಾಟವಾಗುತ್ತಿದ್ದು, ಉಳಿದ ಹಾಲನ್ನು ವಿವಿಧ ಉತ್ಪನ್ನಗಳನ್ನು ತಯಾರು ಮಾಡಲು ಬಳಸಲಾಗುತ್ತಿದೆ ಎಂದು ಮೈಮುಲ್ ಅಧ್ಯಕ್ಷ ಆರ್. ಚೆಲುವರಾಜು ತಿಳಿಸಿದರು.

ಹಾಲು ಒಕ್ಕೂಟದಿಂದ ವಿವಿಧ ರೀತಿಯ ಚಾಕಲೇಟ್ ಮತ್ತು ಪನ್ನೀರ್ ಘಟಕಗಳನ್ನು ತಯಾರಿಸಲು ಸರ್ಕಾರದಿಂದ ಅನುದಾನ ಬೇಕು ಮತ್ತು ರೈತರಿಗೆ ಬೇಕಾಗುವಂತಹ ಉಪಯುಕ್ತ ಸಲಕರಣೆಗಳು ನೀಡಲು ಸರ್ಕಾರದಿಂದ ಹೆಚ್ಚಿನ ನೆರವು ಬೇಕು ಎಂದು ಸಚಿವರಲ್ಲಿ ಇದೇ ವೇಳೆ ಮನವಿ ಮಾಡಿದರು.

ಹಾಲು ಉತ್ಪಾದಕರಿಗೆ, ಸಹಕಾರ ಸಂಘಗಳಿಗೆ ನೆರವು ನೀಡುವ ದೃಷ್ಟಿಯಿಂದ ತಾಲೂಕು ಹಂತದಲ್ಲಿ ಉಪ ಕಚೇರಿಗಳನ್ನು ಸ್ಥಾಪಿಸಲಾಗುತ್ತಿದೆ. 1.15 ಕೋಟಿ ವೆಚ್ಚದಲ್ಲಿ ಇಲ್ಲಿ ಕೂಡ ಸ್ವಂತ ಕಟ್ಟಡ ನಿರ್ಮಿಸಿ ಇಂದು ಉದ್ಘಾಟಿಸಲಾಗಿದೆ. ಈ ಕಚೇರಿಯಲ್ಲಿ ಡಿಸಿಎಸ್ ಸಾಮಾಗ್ರಿಗಳು, ರಬ್ಬರ್ ಮ್ಯಾಟ್, ಹಾಲು ಕರೆಯುವ ಯಂತ್ರಗಳು, ವಿತರಿಸಲು ವಿವಿಧ ಹಂತದಲ್ಲಿ ರೈತರಿಗೆ ತಾಂತ್ರಿಕ ಮಾಹಿತಿ ನೀಡಲು, ಪಶು ಆಹಾರ, ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲು ಉಪ ಕಚೇರಿಗಳು ಕಾರ್ಯ ನಿರ್ವಹಿಸುತ್ತವೆ ಎಂದು ಮಾಹಿತಿ ನೀಡಿದರು.

ಹೆಚ್.ಡಿ.ಕೋಟೆ ಬಳಿ ಬೋನಿಗೆ ಬಿದ್ದ ಚಿರತೆ



ಹೆಚ್.ಡಿ.ಕೋಟೆ, ಅ.16– ಜನ–ಜಾನುವಾರುಗಳಿಗೆ ಉಪಟಳ ನೀಡುತ್ತಿದ್ದ ಚಿರತೆಯೊಂದು ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಬಿದ್ದಿದೆ.

ಪಟ್ಟಣದ ಹೌಸಿಂಗ್ ಬೋರ್ಡ್‌ಗೆ ಹೊಂದಿಕೊಂಡಂತಿರುವ ಜಮೀನಿನ ರೈತರಾದ ದಶರಥ, ವಿವೇಕ, ಗುರುಮಲ್ಲು, ಸಣ್ಣಪ್ಪ, ಸೋಮಣ್ಣ, ಸಣ್ಣಯ್ಯರ ಜಮೀನುಗಳಲ್ಲಿ 2–3 ವರ್ಷಗಳಿಂದ ಚಿರತೆಗಳ ಹಾವಳಿ ಹೆಚ್ಚಾಗಿತ್ತು. ಈ ಚಿರತೆಗಳು ಈ ಭಾಗದಲ್ಲಿ ರೈತರ ಸಾಕಿರುವ ಹಸು, ಕರು, ಮೇಕೆ, ನಾಯಿಗಳನ್ನು ತಿಂದು ಹಾಕಿತ್ತು. ರೈತರು ರಾತ್ರಿ ಸಮಯದಲ್ಲಿ ಜಮೀನುಗಳಲ್ಲಿ ನೀರು ಹರಿಸಲು ಭಯಪಡುತ್ತಿದ್ದರು.

ಹೆಚ್.ಡಿ.ಕೋಟೆ ಅರಣ್ಯ ಇಲಾಖೆಯ ಆರ್‌ಎಫ್‌ಓ ಪೂಜಾ ಅವರಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಅಧಿಕಾರಿಗಳು ಈ ಜಮೀನಿನಲ್ಲಿ ಬೋನ್ ಇರಿಸಿದ್ದರು. ಮಂಗಳವಾರ ರಾತ್ರಿ ಬೋನಿನಲ್ಲಿ ಇರಿಸಿದ್ದ ನಾಯಿಯನ್ನು ತಿನ್ನಲು ಬಂದ ಭಾರಿ ಗಾತ್ರದ ಏಳು ವರ್ಷದ ಗಂಡು ಚಿರತೆ ಬೋನಿಗೆ ಬಿದ್ದಿದೆ.

ಅರಣ್ಯ ಇಲಾಖೆ ಅಧಿಕಾರಿಗಳು ಇಟ್ಟಿದ್ದ ಬೋನಿಗೆ ಹದಿನೈದು ದಿನಗಳ ಹಿಂದೆ ಎರಡು ಗಂಡು ಚಿರತೆ ಸೆರೆಯಾಗಿದ್ದವು. ಆದರೂ ಮತ್ತೆ ಈ ಭಾಗದ ಜಮೀನುಗಳಲ್ಲಿ ಮತ್ತು ಮನೆಗಳ ಸಮೀಪ ಚಿರತೆಗಳು ಓಡಾಡುತ್ತ ರೈತರಿಗೆ ಭಯ ಹುಟ್ಟಿಸಿತ್ತು. ಆಗ ಇಲ್ಲಿನ ರೈತ ದಶರಥ ಬೇರೆ ಜಮೀನಿನಲ್ಲಿ ಇರಿಸಿದ್ದ ಬೋನನ್ನು ಸ್ವತಃ ತಾವೆ ಜಮೀನಿಗೆ ತಂದಿದ್ದರು. ಮತ್ತೋಬ್ಬ ರೈತ ಸಣ್ಣಯ್ಯ ಪ್ರತಿ ದಿನ ಬೋನಿನಲ್ಲಿ ನಾಯಿಯನ್ನು ಕಟ್ಟಿ ಹಾಕುತ್ತಿದ್ದರು. ಮಂಗಳವಾರ ರಾತ್ರಿ ಚಿರತೆ ಬೋನಿಗೆ ಸೆರೆಯಾಗಿದೆ. ಚಿರತೆ ಸೆರೆಯಾಗುತ್ತಿದ್ದಂತೆ ಜೊತೆಯಲ್ಲಿದ್ದ ಚಿರತೆ ಮತ್ತು ಮರಿಗಳು ಬೋನಿನ ಸುತ್ತ ಸುತ್ತಾಡಿ ಬೋನಿನ ಮೇಲೆ ಹಾಕಿದ್ದ ಹುಲ್ಲನ್ನು ಎಳೆದು ಹಾಕಿವೆ.

ಸ್ಥಳಕ್ಕೆ ಬಂದ ಅರಣ್ಯಾಧಿಕಾರಿಗಳಿಗೆ ಈ ಭಾಗದಲ್ಲಿ ಮೂರ್ನಾಲ್ಕು ಚಿರತೆಗಳಿದ್ದು, ಬೋನನ್ನು ತಂದು ಜಮೀನಿನಲ್ಲಿ ಇರಿಸುವಂತೆ ಮನವಿ ಮಾಡಿದರು. ಭಾರಿ ಗಾತ್ರದ ಚಿರತೆ, ಬೋನಿಗೆ ಬಿದ್ದ ವಿಚಾರ ತಿಳಿದು ಚಿರತೆಯನ್ನು ನೋಡಲು ಜನಸಾಗರವೇ ಹರಿದುಬಂದಿತ್ತು. ವಲಯಾರಣ್ಯಾಧಿಕಾರಿ ಪೂಜಾ ಮಾತನಾಡಿ, ವೈದ್ಯರು ಚಿರತೆಯ ಆರೋಗ್ಯ ಪರೀಕ್ಷಿಸಿದ ನಂತರ ಕಾಡಿಗೆ ಬಿಡಲಾಗುವುದು ಎಂದರು. ಈ ಸಂದರ್ಭದಲ್ಲಿ ಉಪ ವಲಯಾರಣ್ಯಾಧಿಕಾರಿ ಪರಮೇಶ್ ಮತ್ತು ಚಿರತೆ ಕ್ಷಿಪ್ರ ರಕ್ಷಣಾ ಪಡೆ ಸಿಬ್ಬಂದಿಗಳು ಇದ್ದರು.

ಆಟೋ ಡಿಕ್ಕಿ: ಅಪರಿಚಿತ ವ್ಯಕ್ತಿ ಸಾವು



ನಂಜನಗೂಡು, ಅ.16– ಆಟೋ ಡಿಕ್ಕಿ ಹೊಡೆದ ಪರಿಣಾಮ ಅಪರಿಚಿತ ವ್ಯಕ್ತಿ ಸಾವಿಗೀಡಾಗಿರುವ ಘಟನೆ ತಾಲೂಕಿನ ಗೋಳೂರು ಗ್ರಾಮದ ವಿದ್ಯಾಪೀಠದ ಬಳಿ ಜರುಗಿದೆ. ಮಂಗಳವಾರ ರಾತ್ರಿ ಈ ಅಪಘಾತ ಜರುಗಿದ್ದು. ಅಪಘಾತಕ್ಕೀಡಾದ ವ್ಯಕ್ತಿಯ ಬಗ್ಗೆ ಯಾರಿಗಾದರೂ ಸುಳಿವು ಇದ್ದಲ್ಲಿ, ಅಥವಾ ವಾರಸುದಾರರು ಇದ್ದಲ್ಲಿ ನಂಜನಗೂಡು ಸಂಚಾರಿ ಪೊಲೀಸ್ ಠಾಣೆ 9480805055, 9972271183 ದೂರವಾಣಿ ಸಂಖ್ಯೆಗೆ ಸಂಪರ್ಕಿಸುವಂತೆ ಕೋರಿದ್ದಾರೆ.

ಅರ್ಜಿ ಆಹ್ವಾನ


ಹೆಚ್.ಡಿ.ಕೋಟೆ, ಅ.16– ಹೆಚ್.ಡಿ.ಕೋಟೆ ತಾಲೂಕು ನಾಯಕ ನೌಕರರ ಸಂಘದ ವತಿಯಿಂದ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಪ್ರತಿಭಾವಂತ ನಾಯಕ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್‌ಎಸ್‌ಎಲ್‌ಸಿಯಲ್ಲಿ ಶೇ.95, ದ್ವಿತೀಯ ಪಿಯುಸಿಯಲ್ಲಿ ಶೇ.90, ಪದವಿಯಲ್ಲಿ ಶೇ.85 ಅಂಕ ಗಳಿಸಿದವರಿಗೆ ಅವಕಾಶವಿದ್ದು, ಅಂಕಪಟ್ಟಿ ಮತ್ತು ವಿಳಾಸ, ಮೊಬೈಲ್ ಸಂಖ್ಯೆ, ಸ್ವ ವಿವರವುಳ್ಳ ಮನವಿಯನ್ನು ನ.10 ರೊಳಗೆ ಸಂಘದ ಕಚೇರಿಗೆ ತಲುಪಿಸಬೇಕು ಎಂದು ತಾಲೂಕು ನಾಯಕ ನೌಕರ ಸಂಘದ ಅಧ್ಯಕ್ಷ ಸಿದ್ದರಾಜು ತಿಳಿಸಿದ್ದಾರೆ.

ಸರಗೂರು ತಾಲೂಕಿನ ಭಾಗದ ವಿದ್ಯಾರ್ಥಿಗಳು ಮೊ.ಸಂ. 9845959727, 9880159902. ಹಾಗೂ ಹೆಚ್.ಡಿ. ಕೋಟೆ ವಿದ್ಯಾರ್ಥಿಗಳು ಮೊ.ಸಂ 9916017669, 9739743558 ಸಂಪರ್ಕಿಸಬೇಕೆಂದು ಮನವಿ ಮಾಡಿದ್ದಾರೆ.

ತಂಬಾಕು ಬೆಳೆಗಾರರ ಸಮಸ್ಯೆ ಬಗೆಹರಿಸಲು ಕ್ರಮ

- ತಂಬಾಕು ಬೆಳೆಗಾರರಿಂದ ಮನವಿ ಸ್ವೀಕರಿಸಿದ ಸಂಸದ ಯದುವೀರ್ ಭರವಸೆ
- ತಂಬಾಕು ಬೆಳೆಯನ್ನು ಫಸಲು ಬಿಮಾ ಯೋಜನೆಗೆ ಸೇರಿಸಿ



ಹುಣಸೂರು ತಾಲೂಕು ಕಟ್ಟೆಮಳಲವಾಡಿ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಸಂಸದ ಯದುವೀರ್ ಒಡೆಯರಿಗೆ ರೈತ ಮುಖಂಡರು ಮನವಿ ಸಲ್ಲಿಸಿದರು.

ಹಿರೀಕ್ಯಾತನಹಳ್ಳಿ, ಅ.16– ತಂಬಾಕು ಬೆಳೆಯನ್ನು ಫಸಲು ಬಿಮಾ ಯೋಜನೆಗೆ ಸೇರಿಸುವ ಬೇಡಿಕೆ ಸೇರಿದಂತೆ ತಂಬಾಕು ಬೆಳೆಗಾರರ ಎಲ್ಲಾ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಿಸುವ ಮೂಲಕ ಸ್ಪಂದಿಸುವೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭರವಸೆ ನೀಡಿದ್ದಾರೆ.

ಹುಣಸೂರು ತಾಲೂಕಿನ ಕಟ್ಟೆಮಳಲವಾಡಿಯ ತಂಬಾಕು ಹರಾಜು ಮಾರುಕಟ್ಟೆಗೆ ಭೇಟಿ ನೀಡಿದ್ದ ವೇಳೆ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ತಂಬಾಕು ಬೆಳೆಗಾರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮೋದೂರು ಶಿವಣ್ಣ ಹಾಗೂ ಪದಾಧಿಕಾರಿಗಳು ಸಲ್ಲಿಸಿದ ಮನವಿ ಸ್ವೀಕರಿಸಿ ಅವರು ಮಾತನಾಡಿದರು.


ಅತಿವೃಷ್ಟಿ, ಅನಾವೃಷ್ಟಿಯಿಂದ ತಂಬಾಕು ಬೆಳೆ ನಷ್ಟವಾದ ವೇಳೆ ಕೇಂದ್ರ–ರಾಜ್ಯ ಸರಕಾರಗಳು ಮತ್ತು ತಂಬಾಕು ಮಂಡಳಿ ಯಾವುದೇ ರೀತಿಯ ಪರಿಹಾರ ನೀಡುವುದಿಲ್ಲ. ಇದರಿಂದ ಬೆಳೆ ನಷ್ಟದ ವಿಮೆ ಪಡೆಯಲು ಅನುಕೂಲವಾಗುವಂತೆ ಕೇಂದ್ರ ಸರಕಾರ ತಂಬಾಕು ಬೆಳೆಯನ್ನು ಫಸಲು ಬಿಮಾ ಯೋಜನೆಗೆ ಸೇರ್ಪಡೆ ಮಾಡುವಂತೆ ಮನವಿ ಮಾಡಿದರು.

ಬೆಂಕಿ ಅನಾಹುತ, ಮಳೆಹಾನಿಯಿಂದ ಬ್ಯಾರನ್ ನಷ್ಟ ಹೊಂದಿದಲ್ಲಿ ವಿಮಾ ಮೊತ್ತ ಒಂದು ಲಕ್ಷ ರೂ. ಮಾತ್ರ ಸಿಗುತ್ತಿದೆ. ಬ್ಯಾರನ್ ನಿರ್ಮಿಸಲು ಕನಿಷ್ಠ 5–6 ಲಕ್ಷ ರೂ.ಗಳು ವೆಚ್ಚವಾಗುತ್ತದೆ. ವಿಮಾ ಮೊತ್ತವನ್ನು 5 ಲಕ್ಷ ಹೆಚ್ಚಿಸಬೇಕು. ತಂಬಾಕು ಬೆಳೆಗಾರರು ಸಾವನ್ನಪ್ಪಿದರೆ ತಂಬಾಕು ಮಂಡಳಿ ನಿಧಿಯಿಂದ ಕೇವಲ 50 ಸಾವಿರ ರೂ ನೀಡುತ್ತಿದ್ದು, ಇದನ್ನು ಲಕ್ಷ ರೂ.ಗೆ ಹೆಚ್ಚಿಸಬೇಕು. ತಂಬಾಕು ಹರಾಜು ಮಾರುಕಟ್ಟೆಗಳಲ್ಲಿ ಸಾಕಷ್ಟು ಅಧಿಕಾರಿಗಳು ಮತ್ತು ನೌಕರರ ಕೊರತೆ ಇದ್ದು, ನೇಮಕಕ್ಕೆ ಕ್ರಮವಾಗಬೇಕು ಎಂದು ಮನವಿ ಮಾಡಲಾಗಿದೆ.

ತಂಬಾಕು ಮಂಡಳಿಯ ಹರಾಜು ನಿರ್ದೇಶಕರ ಕಚೇರಿಯು ಬೆಂಗಳೂರಿನಲ್ಲಿದ್ದು, ಮಂಡಳಿ ಹಾಗೂ ಬೆಳೆಗಾರರ ಕೆಲಸ ಕಾರ್ಯಗಳಿಗೆ ತೊಂದರೆಯಾಗಿದೆ. ಈ ಕಚೇರಿಯನ್ನು ಮೈಸೂರಿಗೆ ಹಾಗೂ ಮೈಸೂರಿನ ಆರ್.ಎಂ.ಓ ಕಚೇರಿಯನ್ನು ಹುಣಸೂರಿಗೆ ಕೂಡಲೇ ಸ್ಥಳಾಂತರಿಸಬೇಕು ಎಂದು ಒತ್ತಾಯಿಸಿದರು.

ರೈತ ಸಂಘದ ಪ್ರಧಾನ ಕಾರ್ಯದರ್ಶಿ ಅಗ್ರಹಾರ ರಾಮೇಗೌಡ, ಪದಾಧಿಕಾರಿಗಳಾದ ಮಹಾದೇವ್, ಜಯಣ್ಣ, ರಾಮಕೃಷ್ಣೇಗೌಡ, ಸತೀಶ್, ನಾಗರಾಜಪ್ಪ, ತಂಬಾಕು ಬೆಳೆಗಾರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಣ್ಣ, ಗೌರವಾಧ್ಯಕ್ಷ ಉಂಡವಾಡಿ ಚಂದ್ರೇಗೌಡ ಸೇರಿದಂತೆ ಹಲವು ರೈತ ಮುಖಂಡರು ಹಾಜರಿದ್ದರು.

ಶ್ರೀನಿವಾಸ್ ನಿಧನ



ಹುಣಸೂರು, ಅ.16– ಉಪನ್ಯಾಸಕ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ, ಗ್ರಾಮದ ಯಜಮಾನ ತಾಲೂಕಿನ ದಾಸನಪುರ ನಿವಾಸಿ ಶ್ರೀನಿವಾಸ್ (52) ಬುಧವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಇಂದು ನೆರವೇರಿತು.

ಶಿವಣ್ಣ



ಹೆಚ್.ಡಿ.ಕೋಟೆ, ಅ.16– ಪಟ್ಟಣದ ಸಮೀಪವಿರುವ ಹೊಸತೊರಹಳ್ಳಿ ಗ್ರಾಮದ ನಿವಾಸಿ, ಪುರಸಭೆ ವಾಟರ್‌ಮ್ಯಾನ್ ಶಿವಣ್ಣ,(36) ಬುಧವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಸ್ವಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಬೈಕಿಗೆ ಗೂಡ್ಸ್ ವಾಹನ ಡಿಕ್ಕಿ: ನವ ವಿವಾಹಿತೆ ಸಾವು



ನಂಜನಗೂಡು, ಅ.16– ಬೈಕಿಗೆ ಟಾಟಾ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಬೈಕಿನ ಹಿಂಬದಿಯಲ್ಲಿ ಕುಳಿತಿದ್ದ ನವವಿವಾಹಿತೆ ಸ್ಥಳದಲ್ಲೇ ಸಾವಿಗೀಡಾಗಿರುವ ಘಟನೆ ನಗರದ ಹುಲ್ಲಹಳ್ಳಿ ವೃತ್ತದಲ್ಲಿ ನಡೆದಿದೆ.

ತಾಲೂಕಿನ ಬಸವನಪುರ ಗ್ರಾಮದ ದಿವಾಕರ ಅವರ ಪತ್ನಿ ಸಿಂಚನ (21) ಮೃತ ದುರ್ದೈವಿ. ಕಳೆದ ಐದು ತಿಂಗಳ ಹಿಂದೆ ಚಾಮರಾಜನಗರ ಜಿಲ್ಲೆಯ ಹೆಗ್ಗವಾಡಿ ಗ್ರಾಮದ ಪರಶಿವಮೂರ್ತಿ ಅವರ ಮಗಳು ಸಿಂಚನಳನ್ನು ತಾಲೂಕಿನ ಬಸವನಪುರ ಗ್ರಾಮದ ದಿವಾಕರ ಅವರಿಗೆ ಮದುವೆ ಮಾಡಿಕೊಡಲಾಗಿತ್ತು. ಸಿಂಚನ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದು, ಮಂಗಳವಾರ ಕಾಲೇಜಿಗೆ ತೆರಳಿದ್ದ ಸಿಂಚನಳನ್ನು ಪತಿ ದಿವಾಕರ ಬೈಕಿನಲ್ಲಿ ವಾಪಸ್ಸು ಮನೆಗೆ ಕರೆದುತರುವ ವೇಳೆ ನಗರದ ಹುಲ್ಲಹಳ್ಳಿ ವೃತ್ತದ ಸಿಗ್ನಲ್ ಬಳಿ ಅತಿ ವೇಗದಿಂದ ಬಂದ ಟಾಟಾ ಗೂಡ್ಸ್ ವಾಹನ ಬೈಕ್ ಸವಾರರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಸಿಂಚನ ಸ್ಥಳದಲ್ಲೇ ಸಾವಿಗೀಡಾಗಿದ್ದಾಳೆಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಆಯುಕ್ತರಿಗೆ ಪತ್ರ ಬರೆಯದೇ ಇದ್ದಿದ್ದರೆ 50:50ರ ಮುಡಾ ನಿವೇಶನ ಹಗರಣವೇ ಬಯಲಿಗೆ ಬರುತ್ತಿರಲಿಲ್ಲ!

ಆತ್ಮೀಯರಲ್ಲಿ ನಿರ್ಗಮಿತ ಮುಡಾ ಅಧ್ಯಕ್ಷ ಮರೀಗೌಡರ ಸಮರ್ಥನೆ

ಮೈಸೂರು, ಅ.16(ಆರ್‌ಕೆ)– ಕಚೇರಿ ಆಂತರಿಕ ಟಿಪ್ಪಣಿ ಮೂಲಕ ಮುಡಾ ಆಯುಕ್ತರಿಗೆ ನಾನು ಪತ್ರ ಬರೆದು ಎಚ್ಚರಿಸದಿದ್ದರೆ ಶೇ.50:50ರ ಅನುಪಾತದಡಿ, ಪ್ರೋತ್ಸಾಹದಾಯಕ ಹಾಗೂ ಬದಲಿ ನಿವೇಶನಗಳ ಹಗರಣವೇ ಹೊರ ಬರುತ್ತಿರಲಿಲ್ಲ ಎಂದು ಕೆ.ಮರೀಗೌಡ, ತಮ್ಮ ಆತ್ಮೀಯರಲ್ಲಿ ಹೇಳಿಕೊಂಡಿದ್ದಾರೆ.

ಎರಡು ದಿನದ ಹಿಂದೆ ತಮ್ಮ ಆತ್ಮೀಯರ ಮುಂದೆ ಕೆಲವಿಷಯ ಹಂಚಿಕೊಂಡಿರುವ ಅವರು, ಮನಸ್ಸೋ ಇಚ್ಛೆ, ಕಾನೂನು ಉಲ್ಲಂಘಿಸಿ ಕಂಡಕಂಡವರಿಗೆ ಅಭಿವೃದ್ಧಿ ಪಡಿಸಿದ ಬಡಾವಣೆಗಳಲ್ಲಿ ಬೆಲೆಬಾಳುವ ನಿವೇಶನಗಳನ್ನು ಮಂಜೂರು ಮಾಡಿ ಅಧಿಕೃತ ಜ್ಞಾಪನ ಹೊರಡಿಸುತ್ತಿದ್ದ ಮುಡಾದ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಸರ್ಕಾರಕ್ಕೆ ಮತ್ತು ಪ್ರಾಧಿಕಾರಕ್ಕೆ ಕೆಟ್ಟ ಹೆಸರು ತರುತ್ತಿದ್ದರು. ಈ ವಿಷಯ ನನ್ನ ಗಮನಕ್ಕೆ ಬರುತ್ತಿದ್ದಂತೆಯೇ ನಾನು ಅವರಿಗೆ ಆಂತರಿಕ ಕಚೇರಿ ಟಿಪ್ಪಣಿ ಬರೆದು ಸಭೆಗೆ ವಿಷಯ ಮಂಡಿಸಿ ಅನುಮೋದನೆ ಪಡೆಯದೆ ಹಾಗೂ ಸರ್ಕಾರದ ಗಮನಕ್ಕೂ ತರದೆ ದಿನಕ್ಕೆ 50, 100 ನಿವೇಶನಗಳನ್ನು ಮಂಜೂರು ಮಾಡಿ ಅದೇ ದಿನ ಕ್ರಯ ಪತ್ರವನ್ನೂ ನೀಡುತ್ತಿರುವುದು ಸರಿಯಿಲ್ಲ. ಇದರಿಂದ ಪ್ರಾಧಿಕಾರದ ಮುಖ್ಯಸ್ಥರಾದ ನನಗೆ ಕೆಟ್ಟ ಹೆಸರು ಬರುತ್ತದೆ ಹಾಗೂ ಮುಡಾ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತದೆ ಎಂಬ ಉದ್ದೇಶದಿಂದ ಅದನ್ನು ತಡೆಯಲು ಆಯುಕ್ತರಿಗೆ ಆಂತರಿಕ ಕಚೇರಿ ಟಿಪ್ಪಣಿ ಬರೆದೆ. ಅದರಿಂದ ಅಸಮಾಧಾನಗೊಂಡ ಆಯುಕ್ತರು ಮತ್ತು ಅವರ ತಂಡ, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರಿಗೆ ಮಾಹಿತಿ ನೀಡಿ ನನ್ನ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೆಟ್ಟ ಅಭಿಪ್ರಾಯ ಬರುವಂತೆ ಮಾಡಿದರು ಎಂದು ಮರೀಗೌಡರು ತಮ್ಮ ಆತ್ಮೀಯರಲ್ಲಿ ಅಳಲು ತೋಡಿಕೊಂಡಿದ್ದಾರೆ.



ನನ್ನ ಮೇಲೆ ವಿಶ್ವಾಸ ವಿಟ್ಟು ಮುಖ್ಯಮಂತ್ರಿಗಳು ಮುಡಾ ಅಧ್ಯಕ್ಷರನ್ನಾಗಿ ನೇಮಿಸಿರುವುದರಿಂದ ಅವರ ನಂಬಿಕೆಗೆ ಕಿಂಚಿತ್ತೂ ಚ್ಯುತಿ ಬರದಂತೆ ನಡೆದುಕೊಳ್ಳಬೇಕು ಹಾಗೂ ಅಕ್ರಮಗಳನ್ನು ತಡೆದು ಮುಡಾ ಆಸ್ತಿಗಳನ್ನು ಸಂರಕ್ಷಿಸಬೇಕೆಂಬ ಉದ್ದೇಶದಿಂದ ನಾನು ಅಂದಿನ ಆಯುಕ್ತರಿಗೆ ಟಿಪ್ಪಣಿ ಬರೆದಿದ್ದೇನೆಯೇ ಹೊರತು, ಒಂದು ವೇಳೆ ಅವರೊಂದಿಗೆ ಶಾಮೀಲಾಗಿ ಆಡಳಿತ ನಡೆಸಿದ್ದರೆ ಮುಡಾ ನಿವೇಶನ ಹಂಚಿಕೆ ಹಗರಣವೇ ಬಯಲಾಗುತ್ತಿರಲಿಲ್ಲ. ಜೊತೆಗೆ ನಾನು ಸಹ ಆರ್ಥಿಕವಾಗಿ ಸದೃಢನಾಗುತ್ತಿದ್ದೆ. ನನಗೆ ಮುಡಾದಿಂದ ಯಾವುದೇ ಹಣ ಮಾಡುವ ತವಕವಿರಲಿಲ್ಲ. ಏಕೆಂದರೆ, ನನಗೆ ಪೂರ್ವಜರಿಂದ ಬಂದ ಆಸ್ತಿಯೇ ಸಾಕಷ್ಟಿದೆ. ಅಲ್ಲದೆ, ನನ್ನ ಪತ್ನಿ ಸರ್ಕಾರಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಸಿದ್ದರಾಮಯ್ಯ ಅವರ ಜೊತೆ ಸುದೀರ್ಘ ಅವಧಿಗೆ ರಾಜಕೀಯದಲ್ಲಿ ಇದ್ದ ಕಾರಣ ಒಂದು ಸ್ಥಾನಮಾನ ಬೇಕೆಂದಷ್ಟೇ ಬಯಸಿದ್ದೆ. ಆ ಮೂಲಕ ಒಳ್ಳೆಯ ಕೆಲಸ ಮಾಡಿ ಸರ್ಕಾರಕ್ಕೆ ಗೌರವ ತರುವ ಉದ್ದೇಶ ನನ್ನದಾಗಿತ್ತು. ಆದರೆ ದುರದೃಷ್ಟವಶಾತ್ ಸಂದರ್ಭ, ಪರಿಸ್ಥಿತಿ ಅದಕ್ಕೆ ಅವಕಾಶ ಮಾಡಿಕೊಡಲಿಲ್ಲ ಎಂದೂ ಬೇಸರ ವ್ಯಕ್ತಪಡಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಅನಾರೋಗ್ಯ ನಿಮಿತ್ತ, ಸಿಎಂ ಸೂಚನೆಯಂತೆ ರಾಜೀನಾಮೆ



ಮೈಸೂರು, ಅ. 16(ಆರ್‌ಕೆ)– ಅನಾರೋಗ್ಯ ನಿಮಿತ್ತ, ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ಕೆ. ಮರೀಗೌಡ ತಿಳಿಸಿದ್ದಾರೆ.

ಇಂದು ವಿಧಾನಸೌಧದಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್ ಅವರನ್ನು ಭೇಟಿ ಮಾಡಿ ರಾಜೀನಾಮೆ ಸಲ್ಲಿಸಿದ ಬಳಿಕ ಸುದ್ದಿಗಾರರಿಗೆ ಮೊದಲ ಪ್ರತಿಕ್ರಿಯೆ ನೀಡಿದ ಅವರು, ಮುಡಾ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದರು. ಅಲ್ಲದೇ ನನಗೂ ಆರೋಗ್ಯ ಸರಿ ಇರಲಿಲ್ಲವಾದ್ದರಿಂದ ನಾನು ಇಂದು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ ಎಂದರು.

ನಿವೇಶನ ಹಂಚಿಕೆ ಪ್ರಕರಣ ಕುರಿತಂತೆ ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ದೇಸಾಯಿ ನೇತೃತ್ವದ ಆಯೋಗವು ತನಿಖೆ ನಡೆಸುತ್ತಿದೆ. ವರದಿ ಬಂದ ನಂತರ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ. ಆ ವಿಷಯದಲ್ಲಿ ನನಗೆ ಹೆಚ್ಚಿನ ಮಾಹಿತಿ ತಿಳಿದಿಲ್ಲ ಎಂದು ಮರೀಗೌಡರು ತಿಳಿಸಿದರು.

ಮುಡಾ ಅಧ್ಯಕ್ಷನಾಗಿ ನನಗೆ ದೊರೆತ ಅಧಿಕಾರ ಬಳಸಿ ಅಲ್ಪಾವಧಿಯಲ್ಲಿ ಆತ್ಮ ವಿಶ್ವಾಸದಿಂದ ಕೆಲಸ ಮಾಡಿದ್ದೇನೆಂಬ ತೃಪ್ತಿ ಇದೆ. ಸಂದರ್ಭ, ಪರಿಸ್ಥಿತಿಗನುಗುಣವಾಗಿ ಈಗ ಸಿಎಂ ಇಂಗಿತದಂತೆ ಅಧಿಕಾರ ತ್ಯಜಿಸಿ ಮುಂದೆ ಪಕ್ಷದ ಕಾರ್ಯಕರ್ತನಾಗಿರುತ್ತೇನೆ ಎಂದು ಅವರು ನುಡಿದರು. ನನ್ನ ಮೇಲಿನ ವಿಶ್ವಾಸದಿಂದ ಮುಡಾದಂತಹ ಪ್ರತಿಷ್ಠಿತ ಪ್ರಾಧಿಕಾರದ ಅಧ್ಯಕ್ಷನಾಗಿ ಸೇವೆ ಸಲ್ಲಿಸುವ ಅವಕಾಶ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನಾನು ಕೃತಜ್ಞನಾಗಿರುವೆ. ಮುಂದೆಯೂ ಅವರ ಸಲಹೆಯಂತೆ ಹೆಜ್ಜೆ ಇಡುತ್ತೇನೆ ಎಂದು ಮರೀಗೌಡರು ತಿಳಿಸಿದರು.

9 ತಿಂಗಳಲ್ಲಿ ಮರೀಗೌಡ ಮುಡಾ ಅಧ್ಯಕ್ಷರಾಗಿ ಕೆಲಸ ಮಾಡಿದ್ದು ಕೇವಲ 43 ದಿನ

ಮೈಸೂರು, ಅ. 16(ಆರ್‌ಕೆ)– ಒಂಭತ್ತು ತಿಂಗಳ ಅವಧಿಯಲ್ಲಿ ಕೆ.ಮರೀಗೌಡರು ಮುಡಾ ಅಧ್ಯಕ್ಷರಾಗಿ ಕೆಲಸ ಮಾಡಿದ್ದು ಕೇವಲ 43 ದಿನಗಳು ಮಾತ್ರ.

2024ರ ಮಾರ್ಚ್ 1ರಂದು ಮುಡಾ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಮರೀಗೌಡರು ಮಾರ್ಚ್ 4ರಂದು ತಮ್ಮ ಅಧ್ಯಕ್ಷತೆಯಲ್ಲಿ 2024–25ನೇ ಸಾಲಿನ ವಾರ್ಷಿಕ ಬಜೆಟ್ ಸಭೆ ನಡೆಸಿದ್ದರು. ನಂತರ ಮಾರ್ಚ್ 16ರಿಂದ ಜೂನ್ 4ರವರೆಗೆ ಲೋಕಸಭಾ ಸಾರ್ವತ್ರಿಕ ಚುನಾವಣೆ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಮುಡಾದಲ್ಲಿ ಸಭೆ–ಸಮಾರಂಭ, ಯೋಜನೆ, ಕಾಮಗಾರಿಗಳು ನಡೆಯಲಿಲ್ಲ. ಆ ಅವಧಿಯಲ್ಲಿ ಅಧ್ಯಕ್ಷರ ಕಾರು, ಇತರ ಸೌಲಭ್ಯಗಳನ್ನು ಹಿಂಪಡೆಯಲಾಗಿತ್ತು.

ಅದರ ಬಳಿಕ ಮುಡಾ ನಿವೇಶನ ಹಂಚಿಕೆ ಹಗರಣಗಳ ಸರಮಾಲೆಯೇ ಬಂದಿತು. ಪರಿಣಾಮ ಜುಲೈ 7ರಂದು ಸರ್ಕಾರ ಆದೇಶ ಹೊರಡಿಸಿ ತನಿಖೆ ಪೂರ್ಣಗೊಳ್ಳುವವರೆಗೆ ಮುಡಾದಲ್ಲಿ ಯಾವುದೇ ಸಭೆ, ಖಾತಾ–ಕಂದಾಯ ಸೇರಿದಂತೆ ಯಾವುದೇ ಅಧಿಕೃತ ಕಾರ್ಯ ಚಟುವಟಿಕೆ ನಡೆಸದಂತೆ ನಿರ್ಬಂಧ ವಿಧಿಸಿತ್ತು. ಪ್ರಾಧಿಕಾರವು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 8ರನ್ವಯ ಸಭೆಗಳನ್ನು ನಡೆಸುವಂತಿಲ್ಲ. ಪ್ರಸ್ತುತ ಹಂತದಲ್ಲಿರುವ ಯಾವುದೇ ಕಡತಗಳಲ್ಲಿ ತೀರ್ಮಾನ ಕೈಗೊಳ್ಳಬಾರದು, ಈ ಹಿಂದೆ ಮುಡಾ ಸಾಮಾನ್ಯ ಸಭೆಗಳಲ್ಲಿ ಕೈಗೊಂಡ ತೀರ್ಮಾನಗಳನ್ನು ಅನುಷ್ಠಾನಗೊಳಿಸುವಂತಿಲ್ಲ, ಸರ್ಕಾರದ ನಿರ್ದೇಶನಗಳಿಲ್ಲದೇ ಯಾವುದೇ ನಿವೇಶನಗಳ ವಿಲೇವಾರಿ ಮಾಡಬಾರದೆಂದು ಆದೇಶದಲ್ಲಿ ಖಡಕ್ ಎಚ್ಚರಿಕೆ ನೀಡಲಾಗಿತ್ತು.

ಅದರನ್ವಯ ಈವರೆಗೆ ಮುಡಾದಲ್ಲಿ ಯಾವುದೇ ಸಭೆ, ಕೆಲಸ ಕಾರ್ಯಗಳೂ ನಡೆಯಲಿಲ್ಲ. ಅಧ್ಯಕ್ಷ ಕೆ. ಮರೀಗೌಡರು ಯಾವುದೇ ಯೋಜನೆ, ಸಭೆ, ಕಡತಗಳ ವಿಲೇವಾರಿ ಮಾಡಲು ಸಾಧ್ಯವಾಗಲಿಲ್ಲ. ಇಂದು ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

ಹಾಗೆ ನೋಡಿದರೆ, ಅವರು ಕಳೆದ 9 ತಿಂಗಳ ಅವಧಿಯಲ್ಲಿ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿರುವುದು ಕೇವಲ 43 ದಿನ ಮಾತ್ರ. ಅದರಲ್ಲೂ ನಿವೇಶನ ಹಂಚಿಕೆ ಹಗರಣದಲ್ಲಿ ತನಿಖೆ ನಡೆಯುತ್ತಿದ್ದರಿಂದ ಕಳೆದ ಜೂನ್ ಮಾಹೆಯಿಂದೀಚೆಗೆ ಮುಡಾದಲ್ಲಿ ಯಾವುದೇ ಕೆಲಸ ಕಾರ್ಯಗಳೂ ನಡೆಯದ ಕಾರಣ ಸಾರ್ವಜನಿಕರು, ಬಿಲ್ಡರ್‌ಗಳು, ಡೆವಲಪರ್‌ಗಳು, ರಿಯಲ್ ಎಸ್ಟೇಟ್ ಉದ್ಯಮಿಗಳು, ಗೃಹ ನಿರ್ಮಾಣ ಸಹಕಾರ ಸಂಘಗಳು ಪರದಾಡುವಂತಾಗಿದೆ.

ನನ್ನ ಕಾನೂನು ಹೋರಾಟಕ್ಕೆ ಮತ್ತೊಂದು ಅಸ್ತ್ರ ಕೊಟ್ಟಿದ್ದಾರೆ

ದೂರುದಾರ ಸ್ನೇಹಮಯಿ ಕೃಷ್ಣ ಪ್ರತಿಕ್ರಿಯೆ



ಕೃಷ್ಣ

ಮೈಸೂರು, ಅ. 16–ನನ್ನ ವಿರುದ್ಧ ಲೋಕಾಯುಕ್ತ ಎಸ್ಪಿಗೆ ದೂರು ನೀಡುವುದರ ಮೂಲಕ ಕೆಪಿಸಿಸಿ ವಕ್ತಾರ ಲಕ್ಷ್ಮಣ ನನ್ನ ಕಾನೂನು ಹೋರಾಟಕ್ಕೆ ಮತ್ತೊಂದು ಅಸ್ತ್ರ ಕೊಟ್ಟಿದ್ದಾರೆ ಎಂದು ದೂರುದಾರ ಸ್ನೇಹಮಯಿ ಕೃಷ್ಣ ತಿಳಿಸಿದ್ದಾರೆ.

ತಮ್ಮ ವಿರುದ್ಧ ಲಕ್ಷ್ಮಣ್ ದೂರು ಕೊಟ್ಟಿರುವ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಆರೋಪಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಯಾಯಿಗಳು ದೂರುದಾರರನ್ನು ಬೆದರಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗಿದೆ ಎಂದರು. ಈ ವಿಚಾರವನ್ನು ನಾನು ನ್ಯಾಯಾಲಯದ ಗಮನಕ್ಕೂ ತರುತ್ತೇನೆ. ಲಕ್ಷ್ಮಣ್ ದೂರು ಕೊಟ್ಟಿರುವುದು ನನ್ನ ಕಾನೂನು ಹೋರಾಟಕ್ಕೆ ಅಸ್ತ್ರ ನೀಡಿದಂತಾಗಿದೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದರು. ಯಾವುದೇ ತನಿಖೆ ನಡೆಯುವ ಸಂದರ್ಭದಲ್ಲಿ ದೂರುದಾರ ತನಿಖಾಧಿಕಾರಿ ಭೇಟಿ ಮಾಡಲು ಕಾನೂನಿನಲ್ಲಿ ಅವಕಾಶವಿದೆ. ಇದು ಸರ್ಕಾರ ಹೊರಡಿಸಿರುವ ಸುತ್ತೋಲೆಯಲ್ಲಿ ಕೂಡ ಇದೆ. ಈ ಹಿನ್ನೆಲೆ ನಾನು ಲೋಕಾಯುಕ್ತ ಎಸ್ಪಿ ಅವರನ್ನು ಭೇಟಿ ಮಾಡಿ ಸಾಕ್ಷ್ಯ ಮಾಹಿತಿ ಸೇರಿದಂತೆ ಹಲವು ದಾಖಲಾತಿ ನೀಡಿದ್ದು, ಇದರಲ್ಲೇನು ತಪ್ಪಿದೆ ಎಂದು ಪ್ರಶ್ನಿಸಿದ್ದಾರೆ. ಸಿದ್ದರಾಮಯ್ಯ ವಿರುದ್ಧದ ಹಗರಣದಲ್ಲಿ ಸಾಕ್ಷ್ಯ ನಾಶ ಮಾಡಿದ ವಿಡಿಯೋದಲ್ಲಿ ಲಕ್ಷ್ಮಣ್ ಆಡಿದ ಮಾತುಗಳು ದಾಖಲಾಗಿವೆ. ಇದರಿಂದ ವಾಸ್ತವದಲ್ಲಿ ಸಿದ್ದರಾಮಯ್ಯ ವಿರುದ್ಧ ಪ್ರಕರಣದಲ್ಲಿ ಲಕ್ಷ್ಮಣ್ ಕೂಡ ಆರೋಪಿ ಆಗುತ್ತಾರೆ ಎಂದು ತಿಳಿಸಿದರು.

ನನ್ನ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡದೆ ಲೋಕಾಯುಕ್ತಕ್ಕೆ ದೂರು ನೀಡಿದ್ದು, ಇದಕ್ಕೆ ಯಾವುದೇ ಕಾನೂನಿನ ಮಾನ್ಯತೆ ಇಲ್ಲ ಎಂದು ಸ್ನೇಹಮಯಿ ಕೃಷ್ಣ ಸ್ಪಷ್ಟಪಡಿಸಿದರು.

ಮುಡಾ ಹಗರಣ: ಸೂರ್ಯಾಸ್ತದೊಳಗೆ ಸಿಎಂ ರಾಜೀನಾಮೆ ನೀಡಬೇಕು

ಸಿದ್ದರಾಮಯ್ಯಗೆ ಬಿಜೆಪಿ ಗಡುವು



ನವದೆಹಲಿ, ಅ. 16– ಕೆ.ಮರಿಗೌಡ ಅವರು ಮುಡಾ ಅಧ್ಯಕ್ಷ ಸ್ಥಾನದಿಂದ ಬುಧವಾರ ಕೆಳಗಿಳಿದ ಬೆನ್ನಲ್ಲೇ, ಭೂ ಹಗರಣದಲ್ಲಿ ಸಿಲುಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂರ್ಯ ಮುಳುಗುವುದರೊಳಗೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಆಗ್ರಹಿಸಿದೆ.

ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಬಿಎಂ ಅವರಿಗೆ ನಿವೇಶನ ಹಂಚಿಕೆಯಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ(ಮುಡಾ) ಅಧ್ಯಕ್ಷ ಕೆ.ಮರಿಗೌಡ ಅವರು ಇಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಮುಡಾ ಅಧ್ಯಕ್ಷರು ರಾಜೀನಾಮೆ ನೀಡಿದ್ದಾರೆ. ನಿಮ್ಮಲ್ಲಿ ಕಿಂಚಿತ್ತೂ ನೈತಿಕತೆ ಉಳಿದಿದ್ದರೆ ಕೂಡಲೇ ಅಧಿಕಾರದಿಂದ ಕೆಳಗಿಳಿಯಬೇಕು ಎಂದು ಸಿದ್ದರಾಮಯ್ಯ ಅವರಿಗೆ ಮನವಿ ಮಾಡುತ್ತೇನೆ. ಇಂದು ಸೂರ್ಯಾಸ್ತದೊಳಗೆ ರಾಜೀನಾಮೆ ನೀಡಿ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ, ಸಂಸದ ಸಂಬಿತ್ ಪಾತ್ರಾ ಒತ್ತಾಯಿಸಿದ್ದಾರೆ.

ಮರಿಗೌಡ ಅವರ ರಾಜೀನಾಮೆ ಮತ್ತು ಸಿದ್ದರಾಮಯ್ಯ ಅವರ ಪತ್ನಿ ಅವರಿಗೆ ಮಂಜೂರು ಮಾಡಿದ ಮುಡಾ ನಿವೇಶನಗಳನ್ನು ಹಿಂದಿರುಗಿಸಿರುವುದು ಮುಖ್ಯಮಂತ್ರಿಗಳು ತಲೆಯಿಂದ ಕಾಲಿನವರೆಗೆ ಹಗರಣದಲ್ಲಿ ಮುಳುಗಿದ್ದಾರೆ ಎಂಬುದನ್ನು ಸ್ಪಷ್ಟಪಡಿಸುತ್ತದೆ ಎಂದು ಬಿಜೆಪಿ ನಾಯಕ ಹೇಳಿದ್ದಾರೆ.

ತನಿಖೆ ಮುಗಿಯುವ ತನಕ ಸ್ನೇಹಮಯಿ ಕೃಷ್ಣ ಬಂಧಿಸಿ

ಲೋಕಾಯುಕ್ತ ಎಸ್ಪಿಗೆ ಲಕ್ಷ್ಮಣ್ ದೂರು



ಮೈಸೂರು, ಅ.16(ಬಿಎಲ್‌ಯು)–ಲೋಕಾಯುಕ್ತ ತನಿಖೆಯಲ್ಲಿ ಹಸ್ತಕ್ಷೇಪ ಮಾಡುತ್ತಿರುವ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿ ತನಿಖೆ ಮುಗಿಯುವ ತನಕ ಬಂಧಿಸಬೇಕು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಲೋಕಾಯುಕ್ತ ಎಸ್ಪಿ ಅವರಿಗೆ ಮನವಿ ಮಾಡಿದ್ದಾರೆ. ಈ ಸಂಬಂಧ ಲೋಕಾಯುಕ್ತ ಎಸ್ಪಿ ಉದೇಶ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ಲಕ್ಷ್ಮಣ್, ಪೊಲೀಸ್ ಠಾಣೆಗೆ ಮಾತ್ರವಲ್ಲದೆ ಸ್ನೇಹಮಯಿ ಕೃಷ್ಣ ವಿರುದ್ಧ ನ್ಯಾಯಾಲಯಕ್ಕೆ ಕೂಡ ದೂರು ನೀಡಬೇಕೆಂದು ಕೋರಿದ್ದಾರೆ.

ಲೋಕಾಯುಕ್ತ ತನಿಖೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಡ ತರುತ್ತಿದ್ದಾರೆ ಎಂದು ಆಧಾರರಹಿತ ಆರೋಪ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಅವರನ್ನು ವಿವಾದದಲ್ಲಿ ಸಿಲುಕಿಸಲು ಹುನ್ನಾರ ಮಾಡುತ್ತಿದ್ದಾರೆ. ಇದರ ಹಿಂದೆ ಬಿಜೆಪಿ ಮತ್ತು ಜೆಡಿಎಸ್ ಮುಖಂಡರ ಷಡ್ಯಂತ್ರವಿದೆ ಎಂಬ ಗುಮಾನಿ ಇದೆ ಎಂದು ಲಕ್ಷ್ಮಣ ಆಪಾದಿಸಿದ್ದಾರೆ. ಸ್ನೇಹಮಯಿ ಕೃಷ್ಣ ಕೆಲವು ಮುಡಾ ಅಧಿಕಾರಿಗಳ ಜೊತೆ ಷಾಮೀಲಾಗಿ ನಕಲಿ ದಾಖಲಾತಿಗಳನ್ನು ಮುಡಾ ಕಡತಗಳಲ್ಲಿ ಸೇರಿಸುತ್ತಿದ್ದಾರೆ. ಅಲ್ಲದೆ ನಕಲಿ ಸೀಲ್ (ಮೊಹರು) ಬಳಸಿ ನಕಲಿ ದಾಖಲಾತಿ ಸೃಷ್ಟಿಸಿ ಅದನ್ನು ಲೋಕಾಯುಕ್ತ ಕಚೇರಿಗೆ ನೀಡುತ್ತಿದ್ದಾರೆ ಎಂದು ದೂರಿದ್ದಾರೆ. ಸ್ನೇಹಮಯಿ ಕೃಷ್ಣ ವಿರುದ್ಧ ಈಗಾಗಲೇ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಸುಮಾರು 40 ಎಫ್‌ಐಆರ್‌ಗಳು ದಾಖಲಾಗಿದೆ. ಬ್ಲ್ಯಾಕ್ ಮೇಲ್, ವಸೂಲಿ, ಕೊಲೆ ಬೆದರಿಕೆ ಆರೋಪಗಳಿದ್ದು, ಬಹುತೇಕ ಭೂಮಿ ವಿವಾದಕ್ಕೆ ಸಂಬಂಧಿಸಿದ ಪ್ರಕರಣಗಳಾಗಿವೆ ಎಂದು ಹೇಳಿದ್ದಾರೆ.

ಆದ ಕಾರಣ ಲೋಕಾಯುಕ್ತದಲ್ಲಿ ನ್ಯಾಯಯುತ ತನಿಖೆಯಾಗಬೇಕಾದರೆ ಕೂಡಲೇ ಸ್ನೇಹಮಯಿ ಕೃಷ್ಣ ವಿರುದ್ಧ ನ್ಯಾಯಾಲಯದಲ್ಲಿ ದೂರು ದಾಖಲಿಸಬೇಕು. ಜೊತೆಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ತನಿಖೆ ಮುಗಿಯುವ ತನಕ ಬಂಧಿಸಬೇಕು ಎಂದು ಲಕ್ಷ್ಮಣ್ ಆಗ್ರಹಿಸಿದ್ದಾರೆ.

50:50ರಡಿ ಹಂಚಿಕೆಯಾಗಿರುವ ಅಕ್ರಮ ನಿವೇಶನ ಹಿಂಪಡೆಯಲು ಸಿಎಂಗೆ ಶಾಸಕ ಶ್ರೀವತ್ಸ ಮನವಿ

ಮೈಸೂರು, ಅ. 16– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ಶೇ. 50:50ರ ಅನುಪಾತದಡಿ ನೀಡಲಾಗಿರುವ ಎಲ್ಲಾ ಅಕ್ರಮ ನಿವೇಶನಗಳನ್ನು ಹಿಂಪಡೆಯಬೇಕೆಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದಾರೆ.

2020ರಿಂದ 2024ರವರೆಗೆ ಆಯುಕ್ತರಾಗಿದ್ದ ನಟೇಶ್ ಮತ್ತು ದಿನೇಶ್‌ಕುಮಾರ್ ಮುಡಾ ಆಯುಕ್ತರಾಗಿದ್ದ ಅವಧಿಯಲ್ಲಿ ನಿವೇಶನಗಳನ್ನು ಅಕ್ರಮವಾಗಿ ಮನಸ್ಸೋ ಇಚ್ಛೆ ಹಂಚಿಕೆ ಮಾಡಲಾಗಿದ್ದು, ಇಂತಹ ನಿವೇಶನಗಳ ಮಂಜೂರಾತಿ ಆದೇಶವನ್ನು ರದ್ದುಪಡಿಸಬೇಕು ಹಾಗೂ ಮುಡಾ ಹಿಂದಿನ ಆಯುಕ್ತರಾದ ನಟೇಶ್ ಮತ್ತು ದಿನೇಶ್‌ಕುಮಾರ್ ಅವರನ್ನು ಅಮಾನತುಗೊಳಿಸಬೇಕೆಂದು ಅವರು ಕೋರಿದ್ದಾರೆ.



ಅಕ್ರಮವಾಗಿ ಹಂಚಿಕೆಯಾಗಿರುವ ನಿವೇಶನಗಳ ಸಂಬಂಧ ಸದರಿ ಆಸ್ತಿಗಳು 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವಿವಾದಿತ ಆಸ್ತಿ' ಎಂದು ಇಸಿಯಲ್ಲಿ ದಾಖಲಿಸುವಂತೆ ಸಂಬಂಧಪಟ್ಟ ನೋಂದಣಾಧಿಕಾರಿಗಳಿಗೆ ಆದೇಶಿಸಬೇಕು. ಅಕ್ರಮ ನಿವೇಶನಗಳಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾಮಗಾರಿಗಳು ನಡೆಯದಂತೆ, ನಿವೇಶನಗಳು ಮಾರಾಟವಾಗದಂತೆ ಹಾಗೂ ಸದರಿ ನಿವೇಶನಗಳಿಗೆ ಸಾಲ ಸೌಲಭ್ಯ ದೊರೆಯದಂತೆ ಆದೇಶ ಹೊರಡಿಸಬೇಕು ಎಂದು ಶಾಸಕ ಶ್ರೀವತ್ಸ ಮನವಿ ಮಾಡಿದ್ದಾರೆ. ನಾಲ್ಕು ಪ್ರಕರಣಗಳನ್ನು ಉಲ್ಲೇಖಿಸಿರುವ ಅವರು, 2023 ಫೆ. 28ರಂದು ಮೈಸೂರಿನ ಅಬ್ದುಲ್ ವಾಹಿದ್ ಬಿನ್ ಲೇಟ್ ಪೀರ್ ಸಾಬ್ ಎಂಬುವರಿಗೆ 55261 ಚದರಡಿ, ಶ್ರೀಮತಿ ಎಂ. ಶಾಂತಮ್ಮ ಎಂಬುವರಿಗೆ 2023ರ ಅಕ್ಟೋಬರ್ 7ರಂದು 81670 ಚದರಡಿ, ಎ. ಪಾಪಣ್ಣ ಬಿನ್ ಲೇಟ್ ಅಣ್ಣಯ್ಯ ಎಂಬುವರಿಗೆ 2024ರ ಜೂನ್ 12ರಂದು 36753 ಚದರಡಿ ಮತ್ತು ನಾಗರಾಜು ಬಿನ್ ಲೇಟ್ ಉಗ್ರಯ್ಯ ಎಂಬುವರಿಗೆ 2024ರ ಜೂನ್ 15ರಂದು 98206 ಚದರಡಿ ನಿವೇಶನವನ್ನು ಶೇ. 50:50ರ ಅನುಪಾತದಡಿ ಅಕ್ರಮವಾಗಿ ಮುಡಾದಿಂದ ನೀಡಲಾಗಿದೆ ಎಂದು ತಮ್ಮ ಮನವಿಯಲ್ಲಿ ಶಾಸಕ ಶ್ರೀವತ್ಸ ತಿಳಿಸಿದ್ದಾರೆ. ಅಲ್ಲದೇ, ತಾಂತ್ರಿಕ ಸಮಿತಿ ವರದಿ ಮತ್ತು ಅಭಿಪ್ರಾಯಗಳನ್ನು ಕೂಡಲೇ ಜಾರಿಗೊಳಿಸಬೇಕೆಂದು ಮನವಿ ಮಾಡಿದ್ದಾರೆ.

ಐವರಿಗೆ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ

ಮೈಸೂರು,ಅ.16(ಪಿಎಂ)– ಶ್ರೀ ಮಹರ್ಷಿ ವಾಲ್ಮೀಕಿ ಅವರ ಸ್ಮರಣಾರ್ಥ 2024ರ ಸಾಲಿಗೆ ಪರಿಶಿಷ್ಟ ವರ್ಗದ ಏಳಿಗೆಗೆ ಶ್ರಮಿಸಿದ ಮತ್ತು ವಿವಿಧ ಕ್ಷೇತ್ರಗಳಲ್ಲಿ ಗುರುತರ ಸೇವೆಗೈದ ಐವರು ಸಾಧಕರನ್ನು ರಾಜ್ಯ ಮಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ.

ಬೆಂಗಳೂರು, ಮೈಸೂರು, ಬೆಳಗಾವಿ, ಕಲಬುರಗಿ ಕಂದಾಯ ವಿಭಾಗಗಳು ಮತ್ತು ಬೆಂಗಳೂರು ಕೇಂದ್ರ ಸ್ಥಾನದಿಂದ ತಲಾ ಒಬ್ಬರಂತೆ ಒಟ್ಟು ಐವರು ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ಅವರಿಗೆ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು. ಈ ಸಾಧಕರಿಗೆ ತಲಾ 20 ಗ್ರಾಮ ಚಿನ್ನದ ಪದಕ ಮತ್ತು 5 ಲಕ್ಷ ರೂ. ನಗದು ನೀಡಿ ಗೌರವಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಬೆಂಗಳೂರು ವಿಭಾಗದಿಂದ ಕಿಲಾರಿ ಜೋಗಯ್ಯ ಬಿನ್ ಕಿಲಾರಿ ಬೋರಯ್ಯ (ಕ್ಷೇತ್ರ–ಬುಡಕಟ್ಟು ಸಂಸ್ಕೃತಿ), ಮೈಸೂರು ವಿಭಾಗದಿಂದ ಡಾ.ಎಸ್.ರತ್ನಮ್ಮ (ಸಮಾಜ ಸೇವೆ), ಬೆಳಗಾವಿ ವಿಭಾಗದಿಂದ ರಾಜಶೇಖರ ತಳವಾರ (ಸಾಮಾಜಿಕ ಕ್ಷೇತ್ರ), ಬೆಂಗಳೂರು ಕೇಂದ್ರ ವಿಭಾಗದಿಂದ ಕೆ.ಎಸ್. ಮೃತ್ಯುಂಜಯ (ಸಾಮಾಜಿಕ ಕ್ಷೇತ್ರ), ಕಲಬುರ್ಗಿ ವಿಭಾಗದಿಂದ ರತ್ನಮ್ಮ ಬಿ. ಸೋಗಿ (ರಂಗಭೂಮಿ ಕ್ಷೇತ್ರ) ಅವರು ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಆಯ್ಕೆಯಾದವರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವಿಶ್ವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೆಟ್ಟೈಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾರ್ಟಿನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಟಿನ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭೈರಾದೇವಿ (ಕ)	4 ಪ್ರದರ್ಶನಗಳು
ಸಂಗಂ	
ಮಾರ್ಟಿನ್ (ಕ)	4 ಪ್ರದರ್ಶನಗಳು
ಲಿಡೋ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವಿಶ್ವಂ (ತೆ)	4 ಪ್ರದರ್ಶನಗಳು
ಪ್ರಭಾ	
ಭೀಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ವೆಟ್ಟೈಯನ್ (ತ): ಬೆ.9.55ಕ್ಕೆ, ಸಂ.4ಕ್ಕೆ, ರಾ.10.05ಕ್ಕೆ, ಮಾರ್ಟಿನ್ (ಕ): ಮ.1.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ಜಿಗ್ರಾ (ಹಿಂ): ಬೆ.10.15ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಮಾರ್ಟಿನ್ (ಕ): ಮ.1.15ಕ್ಕೆ, ಬ್ಲ್ಯಾಕ್ (ತ): ಸಂ.4.30ಕ್ಕೆ.
ಸ್ಕ್ರೀನ್ 3	ಮಾರ್ಟಿನ್ (ಕ): ಬೆ.10.10ಕ್ಕೆ, ರಾ.7ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ಅನ್ನ (ಕ): ಸಂ.4.30ಕ್ಕೆ, ವಿಕ್ಕಿ ವಿದ್ಯಾ ಕಾ ಹೂ ವಾಲ ವೀಡಿಯೋ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಬೆ.9ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ವೆಟ್ಟೈಯನ್ (ತ): ಮ.12.50ಕ್ಕೆ, ಸಂ.6.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ದೇವರ 1 (ತೆ): ಮ.12.20ಕ್ಕೆ, ವೆಟ್ಟೈಯನ್ (ತ): ಮ.3.35ಕ್ಕೆ, ಸಂ.6.40ಕ್ಕೆ, ಮಾರ್ಟಿನ್ (ಕ): ರಾ.9.45ಕ್ಕೆ.
ಸ್ಕ್ರೀನ್ 2	ವೆಟ್ಟೈಯನ್ (ತ): ಬೆ.10ಕ್ಕೆ, ಮಾರ್ಟಿನ್ (ಕ): ಮ.1ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಮಾರ್ಟಿನ್ (ಕ): ಬೆ.9ಕ್ಕೆ, ಬೆ.11.50ಕ್ಕೆ, ಮ.2.40ಕ್ಕೆ, ಸಂ.5.30ಕ್ಕೆ, ವೆಟ್ಟೈಯನ್ (ತ): ರಾ.8.20ಕ್ಕೆ.
ಸ್ಕ್ರೀನ್ 4	ವೆಟ್ಟೈಯನ್ (ಕ): ಮ.12.25ಕ್ಕೆ, ವೆಟ್ಟೈಯನ್ (ತ): ಮ.3.30ಕ್ಕೆ, ಸಂ.6.35ಕ್ಕೆ, ರಾ.9.40ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸ್

13ನೇ ದಿನ, ಗುರುವಾರ, 17–10–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.30 ಗಂಟೆಗೆ

I. ಚಿರಾಪುಂಜಿ ಪ್ಲೇಟ್ –1400 ಮೀ. ರೇಟೆಡ್ 00 ರಿಂದ 25. ಮಧ್ಯಾಹ್ನ 2.30ಕ್ಕೆ
1. ಡಬಲ್ ವಿಷನ್ 2. ಅಕಾಸಿ 3. ಸ್ಟೋನ್ ಹೌಸ್

II. ಅಟ್‌ಮನ್ ಬ್ಲೂ ಪ್ಲೇಟ್ –1200 ಮೀ. ರೇಟೆಡ್ 00 ರಿಂದ 25. ಮ.3.00ಕ್ಕೆ
1. ಮಾಸ್ಟರ್ ವಿಕ್ಟರಿ 2. ಡೊಮಿನಾ 3. ಎಪ್‌ಸಮ್ ಡೌನ್ಸ್

III. ತಮ್ಮಣ್ಣಗೌಡ ಮೆಮೋರಿಯಲ್ ಟ್ರೋಫಿ –1200 ಮೀ. ರೇಟೆಡ್ 40 ರಿಂದ 65. (ಮೈಸೂರು ಬೇಸ್ಡ್ ಹಾರ್ಸ್). ಮಧ್ಯಾಹ್ನ 3.30ಕ್ಕೆ
1. NRI ಏಸ್ 2. ಹಿರೋಯಿಸಮ್ 3. ಸಿರಾ

IV. ಕೆ.ಟಿ.ಶ್ಯಾಮಯ್ಯಗೌಡ ಮೆಮೋರಿಯಲ್ ಟ್ರೋಫಿ–1400 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ರಾವಿಶಿಂಗ್ ಫಾಮ್ 2. ಸೆಗೇರಾ 3. ಐರನ್ ಕ್ಲಾಡ್

V. ಕಾರಪುರ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಸೆಕ್‌ಮೆಟ್ 2. ಮೆಗಾ ಸಕ್ಸಸ್ 3. ಸೂಪರ್ ಕೈಂಡ್

VI. ಒನ್ ಲೈಫ್ ಟು ಲವ್ ಪ್ಲೇಟ್ –1600 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್). ಸಂ.5.00ಕ್ಕೆ
1. ವರದಾನ್ 2. ಮಾಸ್ಟರಿ 3. ಡೊರ್‌ನಿಶ್

ದಿನದ ಅತ್ಯುತ್ತಮ	ರಾವಿಶಿಂಗ್ ಫಾಮ್
ಡಬ್ಬಲ್	ಡಬ್ಬಲ್ ವಿಷನ್, ವರದಾನ್
ಜಾಕ್‌ಪಾಟ್	2, 3, 4, 5 ಮತ್ತು 6
ಮಿನಿ ಜಾಕ್‌ಪಾಟ್	3, 4, 5, ಮತ್ತು 6
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	4, 5 ಮತ್ತು 6
ಎಕ್ಸ್‌ಆಕ್ಟ್	1 ರಿಂದ 6

ಟಿಪ್‌ಸ್ಟರ್ ಪಿಜಿಸಿ

ಮಳೆ ಹಾನಿ ಸಮರ್ಥ ನಿರ್ವಹಣೆ



ಬೆಂಗಳೂರು:ರಾಜ್ಯದ ವಿವಿಧೆಡೆ ಸುರಿಯುತ್ತಿರುವ ಭಾರೀ ಮಳೆಯಿಂದ ಉಂಟಾಗುವ ಹಾನಿ ನಿಭಾಯಿಸಲು ಸರ್ಕಾರ ಸಮರ್ಥವಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಕೃತಿಗೆ ಕಡಿವಾಣ ಹಾಕಲು, ಚಂಡಮಾರುತ ತಡೆಯಲು ಸಾಧ್ಯವಿಲ್ಲ ಎಂಬ ಸತ್ಯ ಅರ್ಥ ಮಾಡಿಕೊಳ್ಳದ ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ಟೀಕೆ ಮಾಡುವುದನ್ನು ನಿಲ್ಲಿಸಬೇಕು ಎಂದರು. ಪೊಲೀಸ್ ಇಲಾಖೆ, ಅಗ್ನಿಶಾಮಕ ದಳ ಹಾಗೂ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳ ಜೊತೆ ಸಭೆ ನಡೆಸಿ ಪರಿಸ್ಥಿತಿ ಅವಲೋಕನ ಮಾಡಲಾಗುವುದು, ಎಷ್ಟೇ ಮಳೆ ಸುರಿದರೂ ನಿಭಾಯಿಸಲು ಸರ್ಕಾರ ಸಮರ್ಥವಾಗಿದೆ ಎಂದರು.

ಕರ್ನಾಟಕ ಸರ್ಕಾರ
ಜಲಸಂಪನ್ಮೂಲ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.1, ನೀರಾವರಿ ತನಿಖಾ ವಿಭಾಗ, ಕಾವೇರಿ ಭವನ ಸಂಕೀರ್ಣ, ಗೋಕುಲಂ, 4ನೇ ಹಂತ, ಮೈಸೂರು–570020.
ದೂರವಾಣಿ : 0821–2411420 E-Mail: no1eeiid@gmail.com

ಟೆಂಡರ್ ಪ್ರಕಟಣೆ ಸಂಖ್ಯೆ: 06/2024–25 ದಿನಾಂಕ: 10.10.2024

ಕಾರ್ಯಪಾಲಕ ಇಂಜಿನಿಯರ್, ನಂ.1, ನೀರಾವರಿ ತನಿಖಾ ವಿಭಾಗ, ಮೈಸೂರು, ಕರ್ನಾಟಕ–570020. ಇವರು ಈ ಕೆಳಕಂಡ ಕಾಮಗಾರಿಗಳಿಗೆ K/W-1 ನಮೂನೆಯಲ್ಲಿ ಅರ್ಹ ಗುತ್ತಿಗೆದಾರರು/ಅರ್ಹ ಏಜೆನ್ಸಿದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಕಾಮಗಾರಿಯ ಹೆಸರು: Annual Maintenance work of Office Building for the O/o Superintending Engineer, Irrigation Investigation Circle, Mysore **(WRD/2024-25/BD/ WORK_INDENT40).** ಬಿಡ್ ವಿವರಗಳನ್ನು e-procurement platform **https://kppp.karnataka.gov.in/** ನಲ್ಲಿ ದಿನಾಂಕ: 10.10.2024 ರಿಂದ ಪಡೆಯಬಹುದಾಗಿರುತ್ತದೆ. ಬಿಡ್ ಸಲ್ಲಿಸಲು ಕೊನೆಯ **ದಿನಾಂಕ: 28.10.2024 ಸಂಜೆ 4.00 ಗಂಟೆವರೆಗೆ,** ಬಿಡ್ ತೆರೆಯುವ **ದಿನಾಂಕ: 29.10.2024 ಸಂಜೆ 4.30 ಗಂಟೆಗೆ** ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದ ಕಚೇರಿಯನ್ನು ಸಂಪರ್ಕಿಸುವುದು.

ಸಹಿ/–
ಕಾರ್ಯಪಾಲಕ ಇಂಜಿನಿಯರ್,
ನಂ.1, ನೀರಾವರಿ ತನಿಖಾ ವಿಭಾಗ, ಮೈಸೂರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ನಗರಸಭಾ ಕಾರ್ಯಾಲಯ, ಹುಣಸೂರು
ಮೈಸೂರು ಜಿಲ್ಲೆ – 571105
CITY MUNICIPAL COUNCIL, HUNSUR MYSORE DIST., – 571105.
ಈ–ಮೇಲ್ : ka.hunsur.cmc@gmail.com | ಫ್ಯಾಕ್ಸ್ : 08222-252250
ಕಛೇರಿ ಫೋನ್ : 252048 | E-mail ka.hunsur.cmc@gmail.com | Fax : 08222-252250
Office Phone : 252048

ನಂ:ಹುನಕಾ/ಡೇ–ನಲ್ಮ್/ಸಿ.ಆರ್‌ಪಿ/1/2024–25 ದಿನಾಂಕ: 16/10/2024

ಡೇ–ನಲ್ಮ್ ಅಭಿಯಾನದಲ್ಲಿ ಕುಂದುಕೊರತೆ ನಿವರಣಾ ಸಮಿತಿ ಮತ್ತು ಮೇಲ್ಮನವಿ ಪ್ರಾಧಿಕಾರ ಸಮಿತಿ ರಚನೆಗೆ ಅರ್ಜಿ ಆಹ್ವಾನ

ಹುಣಸೂರು ನಗರಸಭಾ ವ್ಯಾಪ್ತಿಯಲ್ಲಿ ಕರ್ನಾಟಕ ಬೀದಿ–ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ವ್ಯಾಪಾರ ನಿಯಂತ್ರಣ) ಅಧಿನಿಯಮ–2014 & ಕರ್ನಾಟಕ ಬೀದಿ–ಬದಿ ವ್ಯಾಪಾರಿಗಳ ನಿಯಮಗಳು 2019 ರಂತೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬೀದಿ–ಬದಿ ವ್ಯಾಪಾರಿಗಳ ಕುಂದುಕೊರತೆ ನಿವಾರಣಾ ಸಮಿತಿ ಮತ್ತು ಮೇಲ್ಮನವಿ ಪ್ರಾಧಿಕಾರ ಸಮಿತಿಯನ್ನು ನಿವೃತ್ತ ಸಿವಿಲ್ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ರಚಿಸಬೇಕಾಗಿದೆ. ನಗರಸಭಾ ವ್ಯಾಪ್ತಿಯಲ್ಲಿ ವಾಸಿಸುವ ನಿವೃತ್ತ ಸಿವಿಲ್ ನ್ಯಾಯಾಧೀಶರು, ಉತ್ತಮ ಸೇವಾ ರೆಕಾರ್ಡ್ ಹೊಂದಿರುವ ಒಬ್ಬ ಗ್ರೂಪ್ "ಎ" ದರ್ಜೆ ಅಧಿಕಾರಿ ಹಾಗೂ ಬೀದಿಬದಿ ವ್ಯಾಪಾರಿಗಳಲ್ಲಿ ಒಬ್ಬ ಉತ್ತಮ ಸಾಮಾಜಿಕ ಸೇವೆ ಮತ್ತು ಅರ್ಥಿಕ ಸೇವಾ ಚಟುವಟಿಕೆಯನ್ನು ಹೊಂದಿರುವ ಒಬ್ಬ ವ್ಯಕ್ತಿಯನ್ನು ಸದಸ್ಯರನ್ನಾಗಿ ನೇಮಕಮಾಡಿಕೊಳ್ಳಲು ಅರ್ಜಿ ಅಹ್ವಾನಿಸಲಾಗಿದೆ. ದಿನಾಂಕ:31.102024 ರಂದು ಸಂಜೆ 5.00 ಗಂಟೆಯೊಳಗೆ ಕಛೇರಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಡೇ–ನಲ್ಮ್ ಶಾಖೆಯನ್ನು ಸಂಪರ್ಕಿಸಬಹುದು ಎಂದು ನಗರಸಭೆಯ ಪೌರಾಯುಕ್ತರು ತಿಳಿಸಿರುತ್ತಾರೆ.

ಸಹಿ/– ಪೌರಾಯುಕ್ತರು, ನಗರಸಭೆ ಹುಣಸೂರು

ಕರ್ನಾಟಕ ಸರ್ಕಾರ,
ಕಾರ್ಯಪಾಲಕ ಅಭಿಯಂತರರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.
ಸಂಖ್ಯೆ:ಕಾಅ:ಪಂರಾಇಂವಿ:ಮಂಡ್ಯ:ಮಟೆಂಪ್ರ:ನರೇಗಾ:ಸಾಮಾಗ್ರಿ:
2024–25/1467 ದಿನಾಂಕ:14.10.2024

ಮರು ಟೆಂಡರ್ ಪ್ರಕಟಣೆ ಸಂಖ್ಯೆ:22/2024–25 (ದ್ವಿಲಕೋಟೆ ಪದ್ಧತಿ)

ಕರ್ನಾಟಕ ಸರ್ಕಾರದ ರಾಜ್ಯಪಾಲರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯರವರಿಂದ ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ:13/2024–25 ದಿನಾಂಕ: 02.09.2024 ಮತ್ತು ಸಂಖ್ಯೆ: 14/2024–25 ದಿನಾಂಕ: 06.09.2024ರಂದು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಅಧಿಕೃತ ಮಾರಾಟಗಾರರು/ಸರಬರಾಜುದಾರರಿಂದ "ದ್ವಿಲಕೋಟೆ ಪದ್ಧತಿ" ಅನುಸಾರ ಐಟಂವಾರು ಟೆಂಡರ್‌ಗಳನ್ನು ಅಹ್ವಾನಿಸಲಾಗಿತ್ತು. ಸಂಖ್ಯೆ:14/2024–25ರ ಪ್ರಕಟಣೆಯ ಕ್ರ.ಸಂ.(1), (2) & (5)ರ ಕಾಮಗಾರಿಗಳನ್ನು ಹೊರತುಪಡಿಸಿ, ಪ್ರಕಟಣೆಗಳಲ್ಲಿನ ಉಳಿದ ಕೆಲವು ಕಾಮಗಾರಿಗಳಿಗೆ ಟೆಂಡರ್‌ನಲ್ಲಿ ಯಾವುದೇ ಸರಬರಾಜುದಾರರು ಭಾಗವಹಿಸದ ಕಾರಣ ಹಾಗೂ ಟೆಂಡರ್‌ನಲ್ಲಿ ಏಕಮಾತ್ರ ಗುತ್ತಿಗೆದಾರರು ಭಾಗವಹಿಸಿರುವ ಕಾರಣಗಳಿಂದಾಗಿ ಮರು ಟೆಂಡರ್ ಪ್ರಕಟಣೆ ಪ್ರಕಟಿಸಲಾಗಿದೆ. ಟೆಂಡರ್ ದಾಖಲಾತಿಗಳನ್ನು ದಿನಾಂಕ: 16.10.2024 ರಿಂದ **https://kppp.karnataka.gov.in, KPP Portal** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ:30.10.2024ರ ಸಂಜೆ 4.00ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ.ಪಿ. ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯ.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/377/2024–25